ನಾಲ್ವರು ಖಲೀಫರು

ಲೇಖಕರು

ಅಬ್ದುಲ್ಲಾ ಹಸನ್

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಪ್ರವಾದಿ ಮುಹಮ್ಮದ್‌ರವರ(ಸ) ನಿಧನದ ಬಳಿಕ ಮುಸ್ಲಿಮ್ ಸಮುದಾಯ ಮತ್ತು ಇಸ್ಲಾಮಿ ರಾಷ್ಟ್ರವನ್ನು ಮುನ್ನಡೆಸಿದ ನಾಲ್ವರು ಖಲೀಫರಾದ ಅಬೂಬಕರ್ ಸಿದ್ದೀಕ್, ಉಮರುಲ್ ಫಾರೂಕ್, ಉಸ್ಮಾನ್ ಬಿನ್ ಅಫ್ಫಾನ್ ಮತ್ತು ಅಲೀ ಬಿನ್ ಅಬೀ ತಾಲಿಬ್‌ರವರ(ರ) ಚರಿತ್ರೆಯನ್ನು ಈ ಕೃತಿಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಆದರ್ಶ ಜೀವನ ನಡೆಸಿದ ಆ ಖಲೀಫರನ್ನು 'ಖುಲಫಾವುರ್ರಾಶಿದೀನ್' ಅಂದರೆ 'ಸಚ್ಚರಿತ ಖಲೀಫರು' ಎಂದು ಕರೆಯಲಾಗುತ್ತದೆ. ಆ ಸಚ್ಚರಿತ ಖಲೀಫರ ಜೀವನ ಮತ್ತು ಅವರು ಇಸ್ಲಾಮಿಗಾಗಿ ಸಲ್ಲಿಸಿದ ಸೇವೆಯನ್ನು ಈ ಕೃತಿಯಿಂದ ಸ್ಥೂಲವಾಗಿ ಗ್ರಹಿಸಬಹುದು.

ಖುಲಫಾವುರ್ರಾಶಿದೀನರ ಜೀವನವನ್ನು ಸಂಕ್ಷಿಪ್ತವಾಗಿ ತಿಳಿಯಬಯಸುವ ಎಲ್ಲರಿಗೂ ಸರಳ ಶೈಲಿಯ ಈ ಕೃತಿ ಸಹಾಯಕವಾಗಬಹುದೆಂದು ನಂಬುತ್ತೇವೆ. ಶಾಲಾ-ಮದ್ರಸಾ ವಿದ್ಯಾರ್ಥಿಗಳಿಗೆ ಚರಿತ್ರೆ ಪಾಠವಾಗಿಯೂ ಇದನ್ನು ಪಠ್ಯಕ್ರಮದಲ್ಲಿ ಸೇರಿಸಿಕೊಳ್ಳಬಹುದಾಗಿದೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ನಾಲ್ವರು ಖಲೀಫರು

ಒಂದು ನಿರ್ದಿಷ್ಟ ವಿಶ್ವಾಸ ಸ್ವೀಕರಿಸಿದ ಜನರು, ಅಂತಹ ವಿಶ್ವಾಸವಿರುವ ಇತರ ಜನರ ಜತೆಗೂಡಿ ಸಂಘಟಿತವಾಗಿ ಜೀವಿಸುವುದು ಲೋಕರೂಢಿ. ಹಿಂದಿನ ಕಾಲದಲ್ಲಿ ಮಾತ್ರವಲ್ಲ, ಇಂದಿಗೂ ಆ ರೂಢಿಯಿದೆ. ಹಾಗೆಯೇ ಪ್ರವಾದಿವರ್ಯರ(ಸ) ಕಾಲದಲ್ಲಿ ಇಸ್ಲಾಮ್ ಸ್ವೀಕರಿಸಿದ ಮುಸ್ಲಿಮರೆಲ್ಲರೂ ಒಗ್ಗಟ್ಟಿನಿಂದ, ಒಂದು ಸಂಘಟನೆಯಾಗಿ ಬಾಳಿದರು. ಸ್ವಾಭಾವಿಕವಾಗಿ ಪ್ರವಾದಿವರ್ಯರು(ಸ) ಆ ಸಂಘಟನೆಯ ನಾಯಕರಾಗಿದ್ದರು. ಯಾವ ಸಮಸ್ಯೆ ಬಂದರೂ ಜನರು ಪ್ರವಾದಿಯವರೊಡನೆ(ಸ) ವಿಚಾರಿಸುತ್ತಿದ್ದರು. ಅದರಲ್ಲಿ ಆರಾಧನಾ ಕರ್ಮ, ಕೌಟುಂಬಿಕ ಅಥವಾ ಆರ್ಥಿಕ ವಿಷಯಗಳೆಂಬ ಭೇದವಿರಲಿಲ್ಲ. ವ್ಯಕ್ತಿಯ ಅಥವಾ ಸಮಾಜದ ಸಮಸ್ಯೆಗಳೆಂಬ ಭೇದವೂ ಇರಲಿಲ್ಲ. ಎಲ್ಲ ವಿಷಯಗಳಲ್ಲಿಯೂ ಪ್ರವಾದಿವರ್ಯರೇ(ಸ) ಅವರ ನಾಯಕರಾಗಿದ್ದರು. ಅನಂತರ ಮದೀನಾದಲ್ಲಿ ಒಂದು ಇಸ್ಲಾಮೀ ರಾಷ್ಟ್ರ ಸ್ಥಾಪನೆಯಾಯಿತು. ಆಗ ಪ್ರವಾದಿವರ್ಯರೇ(ಸ) ಆ ರಾಷ್ಟ್ರದ ಆಡಳಿತಗಾರರಾದರು.

ಕೊನೆಗೆ ಪ್ರವಾದಿಯವರು(ಸ) ಈ ಲೋಕಕ್ಕೆ ವಿದಾಯ ಕೋರಿದರು. ಹಾಗಿದ್ದರೂ ಮುಸ್ಲಿಮ್ ಸಮುದಾಯದ ಸಂಘಟಿತ ರೂಪ ಹೋಗಲಿಲ್ಲ. ಏಕೆಂದರೆ, ಸಂಘಟನೆ ಇಲ್ಲವಾದರೆ ಇಸ್ಲಾಮಿನ ಸಂಪೂರ್ಣತೆ ಉಳಿಯುವುದಿಲ್ಲ. ಈ ಕುರಿತು ಮಹಾತ್ಮರಾದ ಹ. ಉಮರ್(ರ) ಹೀಗೆ ಹೇಳಿದ್ದಾರೆ:

لا اسلام الاّ بالجماعة و لا جماعة الاّ بالإمارة ولا امارة الاّ بالإطاعة

"ಸಂಘಟನೆಯಿಲ್ಲದೆ ಇಸ್ಲಾಮಿಲ್ಲ; ನಾಯಕತ್ವವಿಲ್ಲದೆ ಸಂಘಟನೆಯಿಲ್ಲ. ಅನುಸರಣೆ ಇಲ್ಲದೆ ನಾಯಕತ್ವವಿಲ್ಲ."

ಪ್ರವಾದಿವರ್ಯರ(ಸ) ಅನುಯಾಯಿಗಳು ಈ ವಾಸ್ತವಿಕತೆಯನ್ನು ಚೆನ್ನಾಗಿ ತಿಳಿದಿದ್ದರು. ಆದ್ದರಿಂದ ಪ್ರವಾದಿವರ್ಯರು(ಸ) ನಿಧನರಾದ ಕೂಡಲೇ ಅವರು ಮುಸ್ಲಿಮರಿಗೆ ಓರ್ವ ಹೊಸ ನಾಯಕನನ್ನು ಆರಿಸುವ ಕುರಿತು ಆಲೋಚಿಸಿದರು. ಪ್ರವಾದಿವರ್ಯರ(ಸ) ಪಾವನ ದೇಹವನ್ನು ದಫನ ಮಾಡುವುದಕ್ಕಿಂತ ಮೊದಲೇ ಅಬೂಬಕರ್ ಸಿದ್ದೀಕ್‌ರನ್ನು(ರ) ನಾಯಕರಾಗಿ ಚುನಾಯಿಸಿದರು.

ಹೀಗೆ ಪ್ರವಾದಿಯವರ(ಸ) ಬಳಿಕ ಇಸ್ಲಾಮೀ ರಾಷ್ಟ್ರದ ನಾಯಕತ್ವ ವಹಿಸಿದವರನ್ನು 'ಖಲೀಫ'ರೆಂದು ಕರೆಯುತ್ತಾರೆ. ಆ ಪೈಕಿ ಆರಂಭದ ನಾಲ್ವರು ಖಲೀಫರು ಆದರ್ಶಪ್ರಾಯರಾಗಿದ್ದಾರೆ. ಅಬೂಬಕರ್, ಉಮರ್, ಉಸ್ಮಾನ್ ಮತ್ತು ಅಲೀ(ರ). ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಆದೇಶಗಳನ್ನು ಗರಿಷ್ಠ ಪಾಲಿಸಿ ಅವರು ಇಸ್ಲಾಮೀ ರಾಷ್ಟ್ರ ಮತ್ತು ಮುಸ್ಲಿಮ್ ಸಮುದಾಯವನ್ನು ಮುನ್ನಡೆಸಿದರು. ಆದ್ದರಿಂದ ಅವರು "ಅಲ್ ಖುಲಫಾವುರ್ರಾಶಿದೂನ್"(ಸಚ್ಚರಿತವಾದ ಖಲೀಫರು) ಎಂಬ ಹೆಸರಿನಿಂದ ಚರಿತ್ರೆಯಲ್ಲಿ ಖ್ಯಾತರಾಗಿದ್ದಾರೆ. ಈ ಮಹಾತ್ಮರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಮುಂದಿನ ಅಧ್ಯಾಯಗಳಲ್ಲಿ ಅಭ್ಯಸಿಸಬಹುದು.

"ನೀವು ಯಾವಾಗಲೂ ಅಲ್ಲಾಹನ ಸಾನ್ನಿಧ್ಯದಲ್ಲಿರುವಿರೆಂದೂ ಮರಣಶಯ್ಯಾವಸ್ಥೆಯಲ್ಲಿರುವಿರೆಂದೂ ಅಲ್ಲಾಹನ ವಿಚಾರಣೆಯನ್ನು ಎದುರಿಸುತ್ತಾ ಸ್ವರ್ಗದ ನಿರೀಕ್ಷೆಯಲ್ಲಿರುವಿರೆಂದೂ ಭಾವಿಸಿರಿ. ಅನ್ಯಾಯ ಮತ್ತು ಶೋಷಣೆಯನ್ನು ತ್ಯಜಿಸಿರಿ... ನಿಮ್ಮ ಸೇನೆಯ ಪ್ರೀತಿ ವಿಶ್ವಾಸವನ್ನು ಉಳಿಸಿಕೊಳ್ಳಿ. ಅಲ್ಲಾಹನ ಮಾರ್ಗದಲ್ಲಿ ಹೋರಾಡುತ್ತಿರುವಾಗ ಬೆನ್ನು ತೋರಿಸದೆ ಶೌರ್ಯದಿಂದ ಹೋರಾಡಿರಿ. ಆದರೆ ನಿಮ್ಮ ವಿಜಯ ಮಹಿಳೆಯರ ಮತ್ತು ಮಕ್ಕಳ ರಕ್ತದಿಂದ ಕಳಂಕಿತವಾಗದಿರಲಿ. ಖರ್ಜೂರದ ತೋಟಗಳನ್ನು, ಹೊಲಗದ್ದೆಗಳನ್ನು ಧ್ವಂಸಗೊಳಿಸದಿರಿ. ಜಾನುವಾರುಗಳನ್ನು ಕೊಲ್ಲದಿರಿ. ಒಪ್ಪಂದ ಮಾಡಿಕೊಂಡರೆ, ಒಪ್ಪಂದಕ್ಕೆ ಬದ್ಧವಾಗಿರಿ. ದಂಡಯಾತ್ರೆಯಲ್ಲಿ ಮುಂದುವರಿಯುವಾಗ ಆಶ್ರಮಗಳಲ್ಲಿ, ಮಠಗಳಲ್ಲಿ ವಾಸಿಸುತ್ತಿರುವ ಸನ್ಯಾಸಿಗಳನ್ನು ನೀವು ಕಾಣುವಿರಿ. ಅವರು ಸೃಷ್ಟಿಕರ್ತನನ್ನು ತಮ್ಮದೇ ರೀತಿಯಲ್ಲಿ ಆರಾಧಿಸ ಬಯಸುತ್ತಾರೆ. ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ; ಅವರ ಆಶ್ರಮಗಳನ್ನು ಹಾನಿಗೊಳಿಸದಿರಿ."

– ಇಸ್ಲಾಮಿನ ಪ್ರಥಮ ಖಲೀಫಾ ಹ.ಅಬೂಬಕರ್ ಸಿದ್ದೀಕ್(ರ)

ಅಬೂಬಕರ್ ಸಿದ್ದೀಕ್(ರ)

(ಆಡಳಿತ ಕಾಲ- ಹಿ.ಶ. : 11-13, ಕ್ರಿ.ಶ. : 632-634)

ಪ್ರವಾದಿವರ್ಯರ(ಸ) ನಿಧನದ ಬಳಿಕ ಮುಸ್ಲಿಮ್ ಸಮುದಾಯದ ನಾಯಕ ಮತ್ತು ಇಸ್ಲಾಮಿ ರಾಷ್ಟ್ರದ ಪ್ರಥಮ ಖಲೀಫರಾಗಿ ಅಬೂಬಕರ್ ಸಿದ್ದೀಕ್(ರ) ಆಯ್ಕೆಯಾದರು. ಕುರೈಶಿ ವಂಶದ ಉಸ್ಮಾನ್‌ರ ಪುತ್ರ ಅಬೂಕುಹಾಫ ಮತ್ತು ಸಖ್ರ್‌ನ ಪುತ್ರಿ ಸಲ್ಮಾ ಉಮ್ಮುಲ್ ಖೈರ್ ದಂಪತಿಯರ ಪುತ್ರನಾಗಿ ಕ್ರಿ. ಶ. 573ರಲ್ಲಿ ಮಕ್ಕಾದಲ್ಲಿ ಜನಿಸಿದರು. ಆಗ ಪ್ರವಾದಿವರ್ಯರು(ಸ) ಹುಟ್ಟಿ ಎರಡು ವರ್ಷ ಮತ್ತು ಕೆಲವಾರು ತಿಂಗಳುಗಳಾಗಿದ್ದವು. ಅಬೂಬಕರ್ ಸಿದ್ದೀಕ್‌ರ(ರ) ವಂಶಪರಂಪರೆಯು ಪ್ರವಾದಿವರ್ಯರ(ಸ) ಪಿತಾಮಹರಲ್ಲೋರ್ವರಾದ ಮುರ್ರ್ ಬಿನ್ ಕಅಬ್‌ರಲ್ಲಿ ಸೇರುತ್ತದೆ. ಇಸ್ಲಾಮಿಗಿಂತ ಮುಂಚೆ ಅವರಿಗೆ 'ಅಬ್ದುಲ್ ಕಅಬ' ಎಂಬ ಹೆಸರಿತ್ತು. 'ಕಅಬಾದ ದಾಸ'ನೆಂಬ ಅರ್ಥವಿರುವ ಆ ಹೆಸರು ಪ್ರವಾದಿಯವರಿಗೆ(ಸ) ಮೆಚ್ಚುಗೆಯಾಗಲಿಲ್ಲ. ಆದ್ದರಿಂದ ಇಸ್ಲಾಮ್ ಧರ್ಮ ಸ್ವೀಕರಿಸಿದ ಬಳಿಕ ಪ್ರವಾದಿವರ್ಯರು(ಸ) ಅವರನ್ನು 'ಅಬ್ದುಲ್ಲಾ' ಎಂದು ಕರೆದರು. ಆದರೆ ಪುರುಷರಲ್ಲಿ ಪ್ರಥಮವಾಗಿ ಇಸ್ಲಾಮ್ ಸ್ವೀಕರಿಸಿದ ವ್ಯಕ್ತಿಯಾಗಿದ್ದುದರಿಂದ 'ಮೊದಲು ಬಂದವ' ಎಂಬ ಅರ್ಥವಿರುವ ಅಬೂಬಕರ್ ಎಂಬ ಹೆಸರಿನಿಂದ ಅವರು ಅನಂತರ ಪ್ರಸಿದ್ಧರಾದರು. ಪ್ರವಾದಿಯವರು(ಸ) ಹೇಳುವ ಪ್ರತಿಯೊಂದು ವಿಷಯವನ್ನು ಆ ಕೂಡಲೇ ಸತ್ಯವೆಂದು ನಿಸ್ಸಂಕೋಚವಾಗಿ ಅಂಗೀಕರಿಸುತ್ತಿದ್ದುದರಿಂದ ಅವರಿಗೆ 'ಸಿದ್ದೀಕ್' ಎಂಬ ಹೆಸರೂ ಪ್ರಚುರಗೊಂಡಿತು. ಅಲ್ಲಾಹನು ಅವರನ್ನು ನರಕ ಮುಕ್ತಗೊಳಿಸಿರುವನೆಂಬ ಶುಭವಾರ್ತೆಯನ್ನು ಪ್ರವಾದಿವರ್ಯರು(ಸ) ಮುಂಚಿತವಾಗಿ ತಿಳಿಸಿರುವುದರಿಂದ 'ಅತೀಕ್' ಎಂಬ ಇನ್ನೊಂದು ವಿಶೇಷಣವೂ ಲಭಿಸಿತು.

ವ್ಯಾಪಾರಿಯಾಗಿದ್ದ ಅಬೂಬಕರ್ ಸಿದ್ದೀಕ್(ರ) ಹೇರಳ ಸಂಪತ್ತು ಮತ್ತು ಜನರಲ್ಲಿ ಉನ್ನತ ಸ್ಥಾನಮಾನವನ್ನು ಹೊಂದಿದ್ದರು. ಚಿಕ್ಕಂದಿನಲ್ಲಿಯೇ ಸತ್ಯಸಂಧ, ನಂಬಿಗಸ್ಥ, ಪ್ರಾಮಾಣಿಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಆದ್ದರಿಂದ ಕುರೈಶರು ತಮ್ಮ ಗೋತ್ರಕ್ಕೆ ಸಂಬಂಧಿಸಿದ ಆರ್ಥಿಕ ವ್ಯವಹಾರಗಳನ್ನು ಸಿದ್ದೀಕ್‌ರಿಗೆ(ರ) ವಹಿಸಿಕೊಟ್ಟಿದ್ದರು. ಇತರರ ನ್ಯಾಸಗಳ ರಕ್ಷಣೆಗೆ ಅವರು ಅತ್ಯಂತ ಪ್ರಾಮಾಣಿಕ ವ್ಯಕ್ತಿಯೆಂದು ಪರಿಗಣಿಸಲ್ಪಟ್ಟಿದ್ದರು. ಬಡಜನರ ಬಗ್ಗೆ ಅತ್ಯಧಿಕ ಸ್ನೇಹಾನುಕಂಪ ಮತ್ತು ಉದಾರಶೀಲತೆಯಿಂದಾಗಿ ವೈರಿಗಳೂ ಅವರನ್ನು ಮೆಚ್ಚುತ್ತಿದ್ದರು. ಅದಕ್ಕೆ ಸಾಕ್ಷಿಯಾಗಿರುವ ಘಟನೆಯೊಂದು ಹೀಗಿದೆ: ಇಸ್ಲಾಮಿನ

ಆರಂಭ ಕಾಲದಲ್ಲಿ ಹೆಚ್ಚಿನ ಕ್ರಿಯಾ ಸ್ವಾತಂತ್ರ್ಯಕ್ಕಾಗಿ ಅಬೂಬಕರ್(ರ) ಮಕ್ಕಾದಿಂದ ಇಥಿಯೋಪಿಯಾಕ್ಕೆ ಹೊರಡುತ್ತಾರೆ. ದಾರಿ ಮಧ್ಯದಲ್ಲಿ ಇಸ್ಲಾಮಿನ ಕಡು ವೈರಿಯೊಬ್ಬರು ಹೀಗೆ ಹೇಳಿದರು: "ನೀವು ಸರ್ವಥಾ ಮಕ್ಕಾ ತೊರೆದು ಹೋಗಬಾರದು. ಏಕೆಂದರೆ, ನೀವು ಮುರಿದ ಕುಟುಂಬ ಸಂಬಂಧವನ್ನು ಪುನಃ ಬೆಸೆಯುತ್ತೀರಿ. ಅತಿಥಿಗಳನ್ನು ಗೌರವಿಸುತ್ತೀರಿ. ಪ್ರಾಮಾಣಿಕರಾದ ನೀವು ಬಡವರನ್ನು ಸಂರಕ್ಷಿಸುತ್ತೀರಿ. ಇತರರ ಕಷ್ಟಗಳನ್ನು ಸ್ವಯಂ ವಹಿಸುತ್ತೀರಿ. ವಿಪತ್ಕಾಲಗಳಲ್ಲಿ ಅವರಿಗೆ ನೆರವಾಗುತ್ತೀರಿ."

ಅನಂತರ ಅವರು ಸಿದ್ದೀಕ್‌ರನ್ನು(ರ) ಮಕ್ಕಾಕ್ಕೆ ಮರಳಿ ಕರೆತಂದು ಅಲ್ಲಿ ನಿರ್ಭೀತಿಯಿಂದ ಬಾಳುವ ಅವಕಾಶ ಒದಗಿಸಿದರು. ಆದರೆ, ವೈರಿಗಳ ಔದಾರ್ಯದಿಂದ ತನ್ನ ವಿಶ್ವಾಸ ಚಟುವಟಿಕೆಗಳಿಗೆ ಸಂಪೂರ್ಣ ರಕ್ಷಣೆ ದೊರೆಯದೆಂದು ಮನಗಂಡು ಅಬೂಬಕರ್‌ರು(ರ) ಪುನಃ ಇಥಿಯೋಪಿಯಾಕ್ಕೆ ಹೋದರು. ಸಿದ್ದೀಕ್‌ರ(ರ) ಗುಣನಡತೆಗಳನ್ನು ವೈರಿಗಳೂ ಮೆಚ್ಚಿದ್ದರೆಂದು ಈ ಘಟನೆಯಿಂದ ವ್ಯಕ್ತವಾಗುತ್ತದೆ.

ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚೆಯೇ ಅವರು ಎಲ್ಲ ದುರ್ಗುಣಗಳಿಂದಲೂ ಮುಕ್ತರಾಗಿದ್ದರು. ಮದ್ಯಪಾನ, ಜೂಜಾಟ, ವ್ಯಭಿಚಾರ ಮತ್ತು ಮೂರ್ತಿಪೂಜೆ ಮಾಡುತ್ತಿರಲಿಲ್ಲ. ಆದ್ದರಿಂದ ಸ್ವಾಭಾವಿಕವಾಗಿ, ಮುಹಮ್ಮದರಿಗೆ(ಸ) ಪ್ರವಾದಿತ್ವ ಪದವಿ ದೊರೆಯುವುದಕ್ಕಿಂತ ಮೊದಲೇ ಅಬೂಬಕರ್ ಸಿದ್ದೀಕ್(ರ) ಅವರ ಆಪ್ತ ಮಿತ್ರರಾಗಿದ್ದರು.

ಸಂಗಾತಿ

ಇಸ್ಲಾಮಿಗಿಂತ ಮುಂಚೆಯೇ ಪ್ರವಾದಿಯವರ(ಸ) ಆಪ್ತ ಸಂಗಾತಿಯಾಗಿದ್ದ ಸಿದ್ದೀಕ್‌ರವರು(ರ) ಮುಹಮ್ಮದರಿಗೆ(ಸ) ಪ್ರವಾದಿತ್ವ ದೊರೆತಾಗ ಪುರುಷರ ಪೈಕಿ ಪ್ರಪ್ರಥಮವಾಗಿ ಇಸ್ಲಾಮ್ ಸ್ವೀಕರಿಸಿದ್ದರು. ಅನಂತರ ಪ್ರವಾದಿಯವರು(ಸ) ದೇವಾಜ್ಞೆಯಂತೆ ಮದೀನಾಕ್ಕೆ ವಲಸೆ ಹೊರಟಾಗ, ಅವರ ಏಕೈಕ ಸಹಯಾತ್ರಿಕನಾಗುವ ಭಾಗ್ಯವೂ ಸಿದ್ದೀಕ್‌ರಿಗೆ(ರ) ಲಭಿಸಿತ್ತು. ಅವರಿಗೆ ಪ್ರವಾದಿಯವರೊಂದಿಗೆ(ಸ) ಅಪಾರ ಪ್ರೀತ್ಯಾದರವಿತ್ತು. ಆದ್ದರಿಂದ, ವೈರಿಗಳು ಬೆನ್ನು ಹತ್ತಿದ ಈ ಯಾತ್ರೆಯಾದ್ಯಂತ ಪ್ರವಾದಿಯವರ(ಸ) ಭದ್ರತೆಯ ಬಗ್ಗೆ ಅವರು ಚಿಂತಿಸುತ್ತಿದ್ದರು. ಯಾವನಾದರೂ ದುಷ್ಟ ಅನಿರೀಕ್ಷಿತವಾಗಿ ಪ್ರವಾದಿಯವರನ್ನು(ಸ) ಆಕ್ರಮಿಸಬಹುದೆಂಬ ಆಶಂಕೆಯಿಂದ, ಅವರು ಕೆಲವೊಮ್ಮೆ ಹಿಂದೆ, ಇನ್ನು ಕೆಲವೊಮ್ಮೆ ಎಡ ಅಥವಾ ಬಲಭಾಗಗಳಲ್ಲಿ ಜತೆಗೂಡಿ ನಡೆಯುತ್ತಿದ್ದರು. ದಾರಿ ಮಧ್ಯದಲ್ಲಿ ಅವರು ಸೌರ್ ಎಂಬ ಗುಹೆಯಲ್ಲಿ ಅಡಗಿಕೊಳ್ಳಬೇಕಾಯಿತು. ಆಗ ಸಿದ್ದೀಕ್(ರ) ಮೊದಲು ಆ ಗುಹೆಯೊಳಗೆ ಹೋಗಿ ಅದರಲ್ಲಿದ್ದ ಬಿಲಗಳನ್ನು ಬಟ್ಟೆಯಿಂದ ಮುಚ್ಚಿದ ಬಳಿಕ ಪ್ರವಾದಿಯವರನ್ನು(ಸ) ಒಳಗೆ ಪ್ರವೇಶಿಸಲು ಬಿಟ್ಟರು.

ತರುವಾಯ ಗುಹಾದ್ವಾರದಲ್ಲಿ ವೈರಿಗಳ ಕಾಲ ಸಪ್ಪಳ ಕೇಳಿಸಿದಾಗ ಅವರು ಭೀತಿಯಿಂದ ಪ್ರವಾದಿಯವರ(ಸ) ಕಿವಿಯಲ್ಲಿ ಹೀಗೆ ಉಸುರಿದರು: "ಅವರು ಒಂದು ವೇಳೆ ಬಗ್ಗಿ ನೋಡಿದರೆ ಖಂಡಿತವಾಗಿಯೂ ಅವರಿಗೆ ನಾವು ಕಾಣಿಸಬಹುದು." ಅವರು ತಮ್ಮ ಸ್ವಂತ ಪ್ರಾಣದ ಬಗ್ಗೆ ಚಿಂತಿತರಾಗಿರಲಿಲ್ಲ. ಬದಲಾಗಿ ಪ್ರವಾದಿಯವರಿಗೆ(ಸ) ಏನಾದರೂ ಅಪಾಯವಾಗುವುದೇ

ಎಂಬ ಚಿಂತೆ ಅವರನ್ನು ಕಾಡುತ್ತಿತ್ತು. ಪ್ರವಾದಿಯವರು(ಸ) ಸಿದ್ದೀಕರನ್ನು(ರ) ಸಾಂತ್ವನ ಪಡಿಸುತ್ತಾ, "ನೀವು ವ್ಯಾಕುಲ ಪಡಬೇಡಿ, ಅಲ್ಲಾಹ್ ನಮ್ಮ ಜೊತೆಗಿದ್ದಾನೆ" ಎಂದು ಹೇಳಿದರು.

ಅವರು ಪ್ರವಾದಿಯವರ(ಸ) ಜತೆ ನಡೆಸಿದ ಈ ಯಾತ್ರೆ ಮತ್ತು ಗುಹಾ ವಾಸವನ್ನು ಪವಿತ್ರ ಕುರ್‌ಆನ್ ಎತ್ತಿ ಹೇಳಿದೆ. ಓರ್ವ ಸತ್ಯವಿಶ್ವಾಸಿಯ ಮಟ್ಟಿಗೆ ಅದಕ್ಕಿಂತ ದೊಡ್ಡ ಗೌರವ ಬೇರೇನಿದೆ?

ಅವರು ಪ್ರವಾದಿಯವರ(ಸ) ನಡೆನುಡಿಗಳನ್ನು ಚೆನ್ನಾಗಿ ಗಮನಿಸಿ, ಅವರನ್ನು ಕೊನೆಯ ತನಕ ನೆರಳಿನಂತೆ ಹಿಂಬಾಲಿಸಿ ಬಾಳಿದರು. ಆದ್ದರಿಂದ, ಅವರು ಇಸ್ಲಾಮಿನ ಕುರಿತು ಇತರೆಲ್ಲ ಸಹಾಬಿಗಳಿಗಿಂತ ಹೆಚ್ಚು ತಿಳುವಳಿಕೆಯನ್ನು ಹೊಂದಿದ್ದರು. ಎಂತಹ ವಿಷಮ ಪರಿಸ್ಥಿತಿಗಳಲ್ಲಿಯೂ ಅವರು ವಿಚಲಿತರಾಗಲಿಲ್ಲ. ಪ್ರತಿಯೊಂದು ವಿಷಯವನ್ನೂ ಕೂಲಂಕಷವಾಗಿ ಅಭ್ಯಸಿಸಿದ ಬಳಿಕವೇ ಕ್ರಮ ಕೈಗೊಳ್ಳುತ್ತಿದ್ದರು. ಪ್ರವಾದಿಯವರ(ಸ) ನಿಧನದ ವೇಳೆ ಸಂಭವಿಸಿದ ಒಂದು ಘಟನೆಯು ಅದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ.

ಪ್ರವಾದಿವರ್ಯರು(ಸ) ನಿಧನರಾದರೆಂಬ ಸುದ್ದಿ ಮದೀನಾದಲ್ಲಿ ಹರಡಿದೆ. ಜನರೆಲ್ಲರೂ ಪರಿಭ್ರಾಂತರಾಗಿದ್ದಾರೆ. ಮುಂದೇನು ಮಾಡುವುದೆಂದು ಯಾರಿಗೂ ತಿಳಿದಿಲ್ಲ. ಅನೇಕ ಸಹಾಬಿಗಳು, ಪ್ರವಾದಿವರ್ಯರು(ಸ) ನಿಧನರಾದರೆಂಬ ಸುದ್ದಿಯನ್ನು ನಂಬಲು ಸಿದ್ಧರಿರಲಿಲ್ಲ. ಪ್ರವಾದಿವರ್ಯರು(ಸ) ನಿಧನರಾಗುವುದೇ? ಅವರು ಈ ವಿಚಾರವನ್ನು ಊಹಿಸಿಯೂ ಇರಲಿಲ್ಲ. ಒಟ್ಟಿನಲ್ಲಿ ಕೋಲಾಹಲ. ಈ ಸಂದರ್ಭದಲ್ಲಿ ಹ. ಸಿದ್ದೀಕ್(ರ) ಪ್ರವಾದಿಯವರ(ಸ) ಮನೆಯಿಂದ ಮಸೀದಿಗೆ ಬರುತ್ತಾರೆ. ಅವರು ವೇದಿಕೆಯ ಮೇಲೆ ನಿಂತು ದೃಢಸ್ವರದಲ್ಲಿ ಹೀಗೆನ್ನುತ್ತಾರೆ:

ايّها النّاس من كان يعبد محمّدا فانّ محمّدا قد مات، ومن كان يعبد الله فإن الله حيّ لا يموت

"ಓ ಜನರೇ, ಯಾರಾದರೂ ಮುಹಮ್ಮದ್‌ರ ದಾಸ್ಯ ಸ್ವೀಕರಿಸಿದ್ದರೆ, ಇದೋ ಮುಹಮ್ಮದ್ ನಿಧನರಾಗಿದ್ದಾರೆ. ಬದಲಾಗಿ ಯಾರಾದರೂ ಅಲ್ಲಾಹನ ದಾಸ್ಯ ಸ್ವೀಕರಿಸಿದ್ದರೆ, ಅಲ್ಲಾಹನು ಸದಾ ಜೀವಂತವಿರುವವನಾಗಿದ್ದಾನೆ, ಆತನು ಮರಣ ಹೊಂದುವುದಿಲ್ಲ."

ಅನಂತರ ಅವರು ಪವಿತ್ರ ಕುರ್‌ಆನಿನ ವಾಕ್ಯವನ್ನು ಓದಿದರು:

وَمَا مُحَمَّدٌ إِلَّا رَسُولٌ ۚ قَدْ خَلَتْ مِنْ قَبْلِهِ الرُّسُلُ ۚ أَفَإِنْ مَاتَ أَوْ قُتِلَ انْقَلَبْتُمْ عَلَىٰ أَعْقَابِكُمْ ۚ

"ಮುಹಮ್ಮದ್ ಕೇವಲ ಓರ್ವ ಪ್ರವಾದಿ. ಅವರಿಗಿಂತ ಮುಂಚೆ ಎಷ್ಟೋ ಪ್ರವಾದಿಗಳು ಗತಿಸಿ ಹೋಗಿದ್ದಾರೆ. ಹೀಗಿರುತ್ತಾ, ಅವರು ಮರಣ ಹೊಂದಿದರೆ ಅಥವಾ ವಧಿಸಲ್ಪಟ್ಟರೆ ನೀವು ಹಿಂದಿರುಗಿ ಬಿಡುವುದೇ?..." (ಪವಿತ್ರ ಕುರ್‌ಆನ್, 3:144)

ಜನರು, ಸಿದ್ದೀಕ್‌ರ(ರ) ಮಾತುಗಳನ್ನು ಗಮನವಿಟ್ಟು ಆಲಿಸಿದರು. ಅವರು ಶಾಂತರಾದರು, ಕೋಲಾಹಲ ನಿಂತಿತು. ಅನಂತರ ಎಲ್ಲರ ಮುಖದಲ್ಲಿಯೂ ಅದಮ್ಯ ಶೋಕ ಮತ್ತು ನೋವು ವ್ಯಾಪಿಸಿತು. ಉಮರ್(ರ) ಹೇಳುತ್ತಾರೆ: ಅಬೂಬಕರ್(ರ) ಈ ಕುರ್‌ಆನ್ ವಾಕ್ಯವನ್ನು ಓದಿ ಹೇಳುವ ತನಕ, ಕುರ್‌ಆನಿನಲ್ಲಿ ಅಂತಹ ಒಂದು ವಾಕ್ಯವಿದೆಯೆಂಬುದನ್ನೇ ನಾನು ಮರೆತು ಬಿಟ್ಟಿದ್ದೆ.

ನೋಡಿರಿ! ಶೂರ ಉಮರ್‌ರೂ(ರ) ವಿಚಲಿತರಾದ ವೇಳೆಯಲ್ಲಿ ಅಬೂಬಕರ್(ರ), ಮುಸ್ಲಿಮರನ್ನು ಸನ್ಮಾರ್ಗದಲ್ಲಿ ಅಚಲಗೊಳಿಸಿ ಅವರಿಗೆ ಸರಿಯಾದ ನಾಯಕತ್ವ ನೀಡುವ ಸ್ಥೈರ್ಯವನ್ನು ಪ್ರದರ್ಶಿಸಿದ್ದರು. ಪ್ರವಾದಿಯವರ(ಸ) ನಿಕಟವರ್ತಿಯಾಗಿ ಬಾಳಿರುವುದೇ ಅದಕ್ಕೆ ಕಾರಣವಾಗಿದೆ. ಪ್ರಾಯಶಃ ಈ ಕಾರಣದಿಂದಾಗಿಯೇ ಪ್ರವಾದಿವರ್ಯರು(ಸ) ರೋಗ ಪೀಡಿತರಾಗಿದ್ದಾಗ ಸಿದ್ದೀಕ್‌ರಿಗೆ(ರ) ಸಾಮೂಹಿಕ ನಮಾಝ್‌ನ ನೇತೃತ್ವವನ್ನು ವಹಿಸಿ ಕೊಟ್ಟಿದ್ದರು.

ತ್ಯಾಗಿವರ್ಯ ಸಿದ್ದೀಕ್(ರ)

ಅಬೂಬಕರ್ ಸಿದ್ದೀಕ್(ರ) ಅಲ್ಲಾಹನು ನೀಡಿದ ಆರೋಗ್ಯ ಮತ್ತು ಸಂಪತ್ತನ್ನು ಇಸ್ಲಾಮಿಗಾಗಿ ಮುಡಿಪಿಟ್ಟ ಮಹಾ ತ್ಯಾಗಿ. ಆ ಸಂದರ್ಭದಲ್ಲಿ ಇಸ್ಲಾಮೀ ಆಂದೋಲನಕ್ಕೆ ಅವು ಅತ್ಯಗತ್ಯವಾಗಿದ್ದುವು. ಆದ್ದರಿಂದ ಪ್ರವಾದಿವರ್ಯರೇ(ಸ) ಒಮ್ಮೆ ಹೀಗೆ ಹೇಳಿದ್ದರು: "ಅಬೂಬಕರ್‌ರ(ರ) ಹಣದಿಂದಾದಷ್ಟು ಪ್ರಯೋಜನ ಇನ್ನಾವ ಹಣದಿಂದಲೂ ನನಗೆ ಆಗಿಲ್ಲ."

ಇಸ್ಲಾಮಿನ ಪೂರ್ವದಲ್ಲಿಯೇ ಸಿದ್ದೀಕ್(ರ) ಬಹಳ ಉದಾರಿಯಾಗಿದ್ದರೆಂದು ನಿಮಗೆ ತಿಳಿದಿದೆಯಷ್ಟೆ. ಇಸ್ಲಾಮಿನಲ್ಲಿ ಅವರು ಅತ್ಯಂತ ಉದಾರಿ ಮತ್ತು ತ್ಯಾಗಶೀಲರಾಗಿದ್ದರು. ಬಡವರು, ಹಸಿದವರು ಮತ್ತು ದುರ್ಬಲ ವರ್ಗಗಳಿಗೆ ಅವರು ಸದಾ ಆಧಾರವಾಗಿದ್ದರು. ಸತ್ಯವಿಶ್ವಾಸ ಸ್ವೀಕರಿಸಿದ್ದಕ್ಕಾಗಿ ಮಕ್ಕಾದ ಮುಶ್ರಿಕರು ಕೆಲವು ಬಡ ಗುಲಾಮರನ್ನು ಕ್ರೂರವಾಗಿ ಹಿಂಸಿಸಿದ್ದರು. ಈ ರಾಕ್ಷಸೀಯ ದೌರ್ಜನ್ಯಗಳಿಂದ ಅವರನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ ಸಿದ್ದೀಕ್(ರ) ಪ್ರಮುಖ ಪಾತ್ರ ವಹಿಸಿದ್ದರು. ಅವರು ಅಂತಹ ಅನೇಕ ಗುಲಾಮರನ್ನು, ಅವರ ದುಷ್ಟ ಮಾಲಕರಿಂದ ಖರೀದಿಸಿ ಸ್ವತಂತ್ರಗೊಳಿಸಿದ್ದರು. ಹೀಗೆ ಸ್ವತಂತ್ರಗೊಂಡವರಲ್ಲಿ ಖ್ಯಾತ ಸಹಾಬಿಗಳಾದ ಬಿಲಾಲ್ ಮತ್ತು ಆಮಿರ್‌ರೂ(ರ) ಸೇರಿದ್ದಾರೆ. ಮುಸ್ಲಿಮರಾದ ವೇಳೆ ಅವರು 40,000 ದೀನಾರ್‌ಗಳನ್ನು ಹೊಂದಿದ್ದ ಶ್ರೀಮಂತ ವ್ಯಾಪಾರಿಯಾಗಿದ್ದರು. ಆ ಹಣವನ್ನು ಅವರು ಸಂಪೂರ್ಣವಾಗಿ ಇಸ್ಲಾಮಿಗಾಗಿ ವ್ಯಯಿಸಿದ್ದರು, ಮಾತ್ರವಲ್ಲ ವ್ಯಾಪಾರವನ್ನು ನಿಲ್ಲಿಸಿ ಆ ವೇಳೆಯನ್ನೂ ಇಸ್ಲಾಮಿನ ಪ್ರಚಾರಕ್ಕಾಗಿ ವಿನಿಯೋಗಿಸಿದರು. ಮರಣದ ವೇಳೆ ಅವರ ಬಳಿ ಸಂಪತ್ತಾಗಿ ಒಂದು ಬೆಳ್ಳಿ ನಾಣ್ಯವೂ ಉಳಿದಿರಲಿಲ್ಲವೆಂದು ಅವರ ಪುತ್ರಿ, ಉಮ್ಮುಲ್ ಮೂಮಿನೀನ್ ಆಯಿಶಾ(ರ) ಹೇಳಿದ್ದಾರೆ.

ಅಬೂಬಕರ್‌ರ(ರ) ತ್ಯಾಗಶೀಲತೆಯನ್ನು ಮೀರಿಸಲು ಯಾವ ಸಹಾಬಿಗಳಿಗೂ ಸಾಧ್ಯವಾಗಿರಲಿಲ್ಲ. ಒಮ್ಮೆ ಪ್ರವಾದಿವರ್ಯರು(ಸ) ಸಹಾಬಿಗಳೊಂದಿಗೆ, ಧರ್ಮಕ್ಕಾಗಿ ಆದಷ್ಟು ಹೆಚ್ಚು ದಾನ ನೀಡುವಂತೆ ವಿನಂತಿಸಿದರು. ಅಂದು ಉಮರ್(ರ) ಮನದಲ್ಲಿ ಹೀಗೆ ನಿರ್ಧರಿಸಿದರು: "ಎಲ್ಲ ವಿಷಯಗಳಲ್ಲಿಯೂ ಅಬೂಬಕರ್(ರ) ನನ್ನನ್ನು ಯಾವಾಗಲೂ ಹಿಂದೆ ಹಾಕುತ್ತಿದ್ದಾರೆ. ಆದ್ದರಿಂದ, ಈ ಬಾರಿ ನಾನು ಅವರನ್ನು ಹಿಂದೆ ಹಾಕುತ್ತೇನೆ." ಹಾಗೆಯೇ ಉಮರ್(ರ) ತನ್ನ ಬಳಿಯಿದ್ದ ಸಂಪತ್ತಿನ ಅರ್ಧಾಂಶವನ್ನು ಪ್ರವಾದಿಯವರಿಗೆ(ಸ) ಒಪ್ಪಿಸಿದರು. ಆಗ ಪ್ರವಾದಿಯವರು(ಸ), "ಮನೆಯಲ್ಲಿ ಇನ್ನೇನು ಉಳಿದಿದೆ?" ಎಂದು ವಿಚಾರಿಸಿದರು.

"ಮನೆಯಲ್ಲಿ ಇಷ್ಟೇ ಸಂಪತ್ತು ಬಾಕಿಯಿದೆ" ಎಂದು ಉಮರ್(ರ) ಉತ್ತರಿಸಿದರು.

ಅನಂತರ, ಅಬೂಬಕರ್(ರ) ಬಂದು ತಮ್ಮ ಪಾಲಿನ ದಾನವನ್ನು ಪ್ರವಾದಿಯವರಿಗೆ(ಸ) ಒಪ್ಪಿಸಿದರು. "ನಿಮ್ಮ ಮನೆಯಲ್ಲಿ ಇನ್ನೇನು ಉಳಿದಿದೆ?" ಎಂದು ಪ್ರವಾದಿ(ಸ) ಕೇಳಿದರು. ಅದಕ್ಕೆ ಅಬೂಬಕರ್(ರ), "ಅಲ್ಲಾಹ್ ಮತ್ತು ಆತನ ಪ್ರವಾದಿ" ಎಂದು ಉತ್ತರಿಸಿದರು. ಇದನ್ನು ಕೇಳಿ ಸೋಲೊಪ್ಪಿದ ಉಮರ್(ರ) ಹೀಗೆಂದರು: "ಇಲ್ಲ, ಯಾವ ವಿಷಯದಲ್ಲಿಯೂ ಅಬೂಬಕರ್‌ರನ್ನು(ರ) ಸೋಲಿಸಲು ನನ್ನಿಂದ ಸರ್ವಥಾ ಸಾಧ್ಯವಿಲ್ಲ."

ಸಂಪತ್ತಿನಂತೆಯೇ ದೇಹದಿಂದ ಇಸ್ಲಾಮಿಗಾಗಿ ತ್ಯಾಗ ಮಾಡುವುದರಲ್ಲಿಯೂ ಅಬೂಬಕರ್ ಸಿದ್ದೀಕ್(ರ) ಮುಂದಿದ್ದರು. ಅವರು ಪ್ರವಾದಿಯವರ(ಸ) ಜತೆ ಎಲ್ಲ ಧರ್ಮ ಯುದ್ಧಗಳಲ್ಲಿಯೂ ಭಾಗವಹಿಸಿದ್ದರು. ಉಹುದ್ ಮತ್ತು ಹುನೈನ್‌ಗಳಲ್ಲಿ ಅಧೀರರಾಗದೆ ರಣರಂಗದಲ್ಲಿ ಅಚಲವಾಗಿ ನಿಂತ ವೀರಯೋಧರ ಯಾದಿಯಲ್ಲಿ ಅಬೂಬಕರ್‌ರೂ(ರ) ಸೇರಿದ್ದಾರೆ.

ಇಸ್ಲಾಮ್ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿದ್ದಾಗಲೂ ಅಬೂಬಕರ್(ರ) ತಮ್ಮ ಸಂಪತ್ತು, ದೇಹ ಮತ್ತು ಬುದ್ಧಿಯನ್ನು ಇಸ್ಲಾಮಿನ ಪ್ರಚಾರಕ್ಕಾಗಿ ಬಳಸಿದರು. ಆ ಮೂಲಕ ಜನಸಾಮಾನ್ಯರ ಹೊರತಾಗಿ, ಅನೇಕ ಕುರೈಶಿ ಗಣ್ಯರನ್ನೂ ಅವರು ಇಸ್ಲಾಮಿಗೆ ಆಕರ್ಷಿಸಿದರು. ಉಸ್ಮಾನ್ ಬಿನ್ ಅಫ್ಫಾನ್, ಝುಬೈರ್ ಬಿನ್ ಅವ್ವಾಮ್, ಸಅದ್ ಬಿನ್ ಅಬೀ ವಕ್ಕಾಸ್, ಅಬ್ದುರ್ರಹ್ಮಾನ್ ಬಿನ್ ಔಫ್, ತಲ್ಹಾ ಬಿನ್ ಉಬೈದುಲ್ಲಾ, ಅಬೂ ಉಬೈದ ಬಿನ್ ಜರ್ರಾಹ್(ರ) ಮುಂತಾದವರು ಆ ಗಣದಲ್ಲಿ ಸೇರಿದ್ದಾರೆ.

ಪ್ರಥಮ ಖಲೀಫ

ಪ್ರವಾದಿವರ್ಯರ(ಸ) ನಿಧನದಿಂದ ಸಮುದಾಯದಲ್ಲಿ ಒಂದು ಗಂಭೀರ ಸಮಸ್ಯೆ ಹುಟ್ಟಿಕೊಂಡಿತು. ಮುಂದೆ ಯಾರು ಸಮುದಾಯದ ನಾಯಕರಾಗಬೇಕು? ಮುಸ್ಲಿಮ್ ಸಮುದಾಯಕ್ಕೆ ನಾಯಕನಿಲ್ಲದ ಸ್ಥಿತಿಯಿರಬಾರದೆಂದು ಸಹಾಬಿಗಳು ಚೆನ್ನಾಗಿ ಮನಗಂಡಿದ್ದರು. ಆದ್ದರಿಂದ, ಪ್ರವಾದಿವರ್ಯರ(ಸ) ಮೃತದೇಹವನ್ನು ದಫನ ಮಾಡುವುದಕ್ಕಿಂತ ಮುಂಚಿತವಾಗಿ ಮುಸ್ಲಿಮರಿಗೆ ಓರ್ವ ನಾಯಕ(ಖಲೀಫ)ನನ್ನು ಚುನಾಯಿಸಲು ಅವರು ನಿರ್ಧರಿಸಿದ್ದರು. ಅದಕ್ಕಾಗಿ ಅನ್ಸಾರಿಗಳು ಪ್ರಥಮವಾಗಿ 'ಸಖಿಫಃ ಬನೀ ಸಈದಃ'ದಲ್ಲಿ ಉಮರ್(ರ) ಮತ್ತು ಅಬೂ ಉಬೈದರ(ರ) ಜತೆಯಲ್ಲಿ ಅಲ್ಲಿಗೆ ಹೋದರು.

ಅನ್ಸಾರಿಗಳು, ತಮ್ಮ ಕೂಟದಿಂದಲೇ ಯಾರಾದರೊಬ್ಬರು ಖಲೀಫರಾಗಬೇಕೆಂದು ಬಯಸಿದ್ದರು. ಅದಕ್ಕಾಗಿ ಖಝ್ರುಜ್ ಗೋತ್ರದ ಮುಖಂಡ ಸಅದ್ ಬಿನ್ ಉಬಾದರನ್ನು ಆ ಸ್ಥಾನಕ್ಕೆ ನಿರ್ಧರಿಸಿದ್ದರು. ಆದರೆ ಮುಹಾಜಿರರಿಗೆ ಅದು ಒಪ್ಪಿಗೆಯಾಗಲಿಲ್ಲ. ಖಲೀಫರನ್ನು ನಮ್ಮ ಕೂಟದಿಂದಲೇ ಆರಿಸಬೇಕೆಂದು ಅವರು ವಾದಿಸಿದರು. ತನ್ಮಧ್ಯೆ ಉಭಯ ವಿಭಾಗಗಳಿಂದಲೂ ಓರ್ವ ಖಲೀಫರನ್ನು ನೇಮಿಸಬೇಕೆಂಬ ಇನ್ನೊಂದು ಸಲಹೆಯೂ ಬಂತು. ಸಭೆಯಲ್ಲಿ ಒಟ್ಟಾರೆ ಗದ್ದಲ. ಮುಸ್ಲಿಮರ ಐಕ್ಯವು ಪ್ರವಾದಿಯವರು(ಸ) ನಿಧನರಾದ ಕೂಡಲೇ, ಖಿಲಾಫತ್‌ನ ಕಾರಣದಿಂದ ಮುರಿದು ಬೀಳುವುದೆಂಬ ಭೀತಿ ಹಿರಿಯ ಸಹಾಬಿಗಳಲ್ಲಿ ವ್ಯಾಪಿಸಿತ್ತು. ಆ ವೇಳೆ ಅಬೂಬಕರ್(ರ) ಎದ್ದು ನಿಂತು ಒಂದು ಗಂಭೀರ ಭಾಷಣ ಮಾಡಿದರು. ಅವರು ಅದರಲ್ಲಿ ಅನ್ಸಾರ್‌ಗಳ ಎಲ್ಲ ಗುಣಗಳನ್ನು ಎತ್ತಿ ಹೇಳಿದರು. ಇಸ್ಲಾಮಿನ ನೆರವಿಗಾಗಿ ಅವರು ಸಹಿಸಿದ ತ್ಯಾಗಗಳನ್ನು ಸ್ಮರಿಸಿದರು. ಅದರೊಂದಿಗೆ ಔಸ್-ಖಝ್ರುಜ್ ಗೋತ್ರಗಳಲ್ಲಿ ಇಸ್ಲಾಮಿಗಿಂತ ಮುಂಚೆ ಪರಸ್ಪರವಿದ್ದ ವೈರ-ವಿದ್ವೇಷಗಳನ್ನು ಪ್ರಸ್ತಾಪಿಸಿ, ಅನ್ಸಾರ್‌ಗಳಲ್ಲಿ ಓರ್ವರನ್ನು ಖಲೀಫರನ್ನಾಗಿ ನೇಮಿಸಿದರೆ ಆಗಬಹುದಾದ ಮುಂದಿನ ಪರಿಣಾಮವನ್ನು ವಿವರಿಸಿದರು. ಅನಂತರ ಮುಹಾಜಿರರ ತ್ಯಾಗಗಳನ್ನೂ ನಾಯಕತ್ವಕ್ಕೆ ಅವರಲ್ಲಿರುವ ಅರ್ಹತೆಯನ್ನೂ ದೃಢೀಕರಿಸುವ ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಉಲ್ಲೇಖಗಳನ್ನೂ ಸಾದರಪಡಿಸಿದರು. ಅನಂತರ ತಮ್ಮ ಅಭಿಪ್ರಾಯವನ್ನು ತಿಳಿಸಿದರು:

"ಅರಬರು, ಕುರೈಶಿಯಾಗಿರುವ ಓರ್ವರ ವಿನಾ ತಮ್ಮ ನಾಯಕರಾಗಿ ಅಂಗೀಕರಿಸಲಾರರು. ಆದ್ದರಿಂದ, ಇದೋ ಆ ಸ್ಥಾನಕ್ಕೆ ಈರ್ವರು ಅತ್ಯಂತ ಯೋಗ್ಯರಾಗಿದ್ದಾರೆ. ಉಮರ್(ರ) ಮತ್ತು ಅಬೂ ಉಬೈದ(ರ). ಈ ಇಬ್ಬರ ಪೈಕಿ ನಿಮಗೆ ಇಷ್ಟವಿರುವ ಯಾರಾದರೊಬ್ಬರನ್ನು ಖಲೀಫರಾಗಿ ಚುನಾಯಿಸಿರಿ."

ಸಿದ್ದೀಕ್‌ರ(ರ) ಭಾಷಣ ಮುಗಿದಾಗ ಖಿಲಾಫತ್‌ನ ಬಗೆಗಿನ ವಿವಾದವೂ ಮುಗಿದಂತೆ ತೋರಿತು. ಆ ಕೂಡಲೇ ಉಮರ್(ರ) ಅಬೂಬಕರ್‌ರತ್ತ(ರ) ನೋಡಿ ಹೀಗೆಂದರು: "ಅಬೂಬಕರ್, ನಮಾಝ್‌ನಲ್ಲಿ ಮುಸ್ಲಿಮರ ನೇತೃತ್ವ ವಹಿಸಲು ಪ್ರವಾದಿಯವರು(ಸ) ನಿಮ್ಮನ್ನು ನೇಮಿಸುತ್ತಿದ್ದರಲ್ಲವೇ. ಆದ್ದರಿಂದ ನೀವೇ ಅವರ ಉತ್ತರಾಧಿಕಾರಿ. ಕೈ ಚಾಚಿರಿ. ನಾವು ನಿಮಗೆ(ಬೈಅತ್) ಅಂಗೀಕಾರ ನೀಡುತ್ತೇವೆ. ಪ್ರವಾದಿಯವರು(ಸ) ಅತ್ಯಧಿಕ ಪ್ರೀತಿಸುತ್ತಿದ್ದ ವ್ಯಕ್ತಿಗೆ ನಾವು ಬೈಅತ್ ಮಾಡೋಣ."

ಉಮರ್(ರ) ತಮ್ಮ ಮಾತುಗಳನ್ನು ಕೊನೆಗೊಳಿಸಿದಾಗ, ಅನ್ಸಾರ್‌ಗಳಲ್ಲಿ ಖಝ್ರುಜ್ ಗೋತ್ರದ ಬಶೀರ್ ಬಿನ್ ಸಅದ್(ರ) ಅಬೂಬಕರ್‌ರ(ರ) ಕೈ ಹಿಡಿದು ಬೈಅತ್ ಮಾಡಿಯಾಗಿತ್ತು. ಕೂಡಲೇ ಉಮರ್(ರ) ಮತ್ತು ಅಬೂ ಉಬೈದಾ(ರ), ಅನಂತರ ಸಭೆಯಲ್ಲಿದ್ದ ಎಲ್ಲರೂ ಅಬೂಬಕರ್‌ರನ್ನು(ರ) ಮುಸ್ಲಿಮರ ಖಲೀಫರಾಗಿ ಅಂಗೀಕರಿಸಿ ಬೈಅತ್ ಮಾಡಿದರು. ಆದರೆ ಖಲೀಫರನ್ನು ಕೆಲವಾರು ಮಂದಿ ಚುನಾಯಿಸಿದರೆ ಸಾಲದು, ಜನರು ಅದನ್ನು ಅಂಗೀಕರಿಸಬೇಕು. ಅಬೂಬಕರ್‌ರ(ರ) ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರಲಿಲ್ಲ. ಆದ್ದರಿಂದ, ಮರುದಿನ ಮಸೀದಿಯಲ್ಲಿ ಜನರ ಬೈಅತ್

ಪೂರ್ಣಗೊಂಡಿತು. ಮುಸ್ಲಿಮರು ಸಂಪೂರ್ಣ ಸಂತೃಪ್ತಿಯಿಂದ ಪ್ರವಾದಿಯವರ(ಸ) ಆಪ್ತ ಮಿತ್ರನನ್ನು ಪ್ರಥಮ ಖಲೀಫರಾಗಿ ಅಂಗೀಕರಿಸಿ ಪ್ರತಿಜ್ಞೆ ಮಾಡಿದರು.

ಅಧಿಕಾರ ವಹಿಸಿಕೊಂಡ ಕೂಡಲೇ ಅವರು ಮಾಡಿದ ಭಾಷಣವು ಇತಿಹಾಸ ಪ್ರಸಿದ್ಧವಾಗಿದೆ. ಇಸ್ಲಾಮೀ ರಾಷ್ಟ್ರದ ಮುಖಂಡನೆಂಬ ನೆಲೆಯಲ್ಲಿ ತನ್ನ ಆಡಳಿತ ನೀತಿಯೇನೆಂಬುದನ್ನು ಈ ಭಾಷಣದಲ್ಲಿ ಅವರು ಸ್ಪಷ್ಟಪಡಿಸಿದ್ದರು. ಅದರಲ್ಲಿ ಅವರು ಹೇಳಿದರು:

"ಜನರೇ! ನಾನು ನಿಮಗಿಂತ ಹೆಚ್ಚು ಉತ್ತಮನಲ್ಲ. ಹಾಗಿದ್ದರೂ ನನ್ನ ಮೇಲೆ ನಿಮ್ಮ ಆಡಳಿತಾಧಿಕಾರವನ್ನು ವಹಿಸಿಕೊಟ್ಟಿದ್ದೀರಿ. ನಾನು ಒಳ್ಳೆಯ ರೀತಿಯಲ್ಲಿ ನಡೆದುಕೊಂಡರೆ ನೀವು ನನ್ನನ್ನು ಅನುಗಮಿಸಿರಿ. ನಾನು ತಪ್ಪಿ ನಡೆದರೆ ನನ್ನನ್ನು ಸರಿಪಡಿಸಿರಿ. ಸತ್ಯವು ನ್ಯಾಸವಾಗಿದೆ. ಸುಳ್ಳು ಮೋಸವಾಗಿದೆ. ನಿಮ್ಮಲ್ಲಿ ಪ್ರಬಲನು, ಆತನಿಂದ ದೊರೆಯಬೇಕಾದ ಹಕ್ಕುಗಳನ್ನು ಕಸಿದುಕೊಳ್ಳುವ ತನಕ ನನ್ನ ಮಟ್ಟಿಗೆ ದುರ್ಬಲನಾಗಿರುತ್ತಾನೆ. ನಿಮ್ಮ ಪೈಕಿ ದುರ್ಬಲನು, ಆತನಿಗೆ ದೊರೆಯಬೇಕಾದ ಹಕ್ಕುಗಳನ್ನು ಆತನಿಗೆ ಮರಳಿಸುವ ತನಕ ನನ್ನ ಮಟ್ಟಿಗೆ ಪ್ರಬಲನಾಗಿರುತ್ತಾನೆ. ಯಾವುದಾದರೊಂದು ಜನತೆಯು ಅಲ್ಲಾಹನ ಮಾರ್ಗದಲ್ಲಿ ಹೋರಾಡುವುದಿಲ್ಲವೆಂದು ನಿರ್ಧರಿಸಿದರೆ ಅಲ್ಲಾಹನು ಅವರನ್ನು ಹೀನಗೊಳಿಸುತ್ತಾನೆ. ಯಾವುದಾದರೂ ಜನತೆಯು ಅಶ್ಲೀಲ ವೃತ್ತಿಗಳಲ್ಲಿ ತೊಡಗಿದರೆ ಅಲ್ಲಾಹನು ಅವರ ಮೇಲೆ ವಿಪತ್ತುಗಳನ್ನು ಸುರಿಯುವನು. ನಾನು ಅಲ್ಲಾಹನನ್ನೂ ಆತನ ಪ್ರವಾದಿಯನ್ನೂ(ಸ) ಅನುಸರಿಸುತ್ತಿರುವ ತನಕ ನೀವು ನನ್ನನ್ನು ಅನುಸರಿಸಿರಿ. ನಾನು ಅಲ್ಲಾಹನನ್ನೂ ಆತನ ಪ್ರವಾದಿಯನ್ನೂ(ಸ) ಧಿಕ್ಕರಿಸಿದರೆ ನೀವು ನನ್ನನ್ನು ಅನುಸರಿಸಲು ಹೊಣೆಗಾರರಲ್ಲ."

ಆಂತರಿಕ ಗಲಭೆ

ಅಬೂಬಕರ್ ಸಿದ್ದೀಕ್(ರ) ಖಲೀಫರಾಗಿ ಅಧಿಕಾರ ವಹಿಸಿದ ಕೂಡಲೇ ಆಂತರಿಕ ಗಲಭೆಯೊಂದನ್ನು ಎದುರಿಸಬೇಕಾಯಿತು. ಇಸ್ಲಾಮೀ ರಾಷ್ಟ್ರದ ಮಟ್ಟಿಗೆ ಅದೊಂದು ಕಠಿಣ ಪರೀಕ್ಷೆಯಾಗಿತ್ತು. ಪ್ರವಾದಿಯವರ(ಸ) ನಿಧನಕ್ಕಿಂತ ಸ್ವಲ್ಪ ಮುಂಚೆ ಅರೇಬಿಯಾದ ಬಹುತೇಕ ಗೋತ್ರಗಳು ಇಸ್ಲಾಮ್ ಸ್ವೀಕರಿಸಿದ್ದವು. ಆದರೆ ಅನೇಕ ಗ್ರಾಮೀಣ ಅರಬರು ಇಸ್ಲಾಮನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿರಲಿಲ್ಲ. ಅವರ ಹೃದಯಗಳಲ್ಲಿ ಸತ್ಯವಿಶ್ವಾಸ ಬೇರೂರಿರಲಿಲ್ಲ. ಪ್ರವಾದಿವರ್ಯರ(ಸ) ನಿಧನದ ಬಳಿಕ ಅವರ ಮನದಲ್ಲಿ ಅನೇಕ ಸಂಶಯಗಳು ಮೂಡಿದವು. ಅವರು ಸಾಮೂಹಿಕವಾಗಿ ಇಸ್ಲಾಮನ್ನು ತೊರೆಯುತ್ತಿದ್ದರು. ಅವರಲ್ಲಿ ಬಹರೈನ್ ನಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಮಕ್ಕಾ ವಿಜಯ ಮತ್ತು ಹುನೈನ್, ತಾಯಿಫ್ ಯುದ್ಧಗಳ ಬಳಿಕ ಮುಸ್ಲಿಮ್ ಪಾಳಯಕ್ಕೆ ಸೇರಿದವರಲ್ಲಿ ಕಪಟವಿಶ್ವಾಸಿಗಳೂ ಇದ್ದರು. ಅವರಿಗೆ ಬಹಿರಂಗವಾಗಿ ಮುಸ್ಲಿಮರನ್ನು ಎದುರಿಸುವ ಧೈರ್ಯವಿರಲಿಲ್ಲ. ಆದ್ದರಿಂದ, ಬಾಹ್ಯವಾಗಿ ಮುಸ್ಲಿಮರಂತೆ ನಟಿಸಿ ಇಸ್ಲಾಮನ್ನು ದುರ್ಬಲಗೊಳಿಸಬಹುದೆಂದು ಅವರು ನಂಬಿದ್ದರು. ಪ್ರವಾದಿಯವರ(ಸ) ನಿಧನವು ಅವರಿಗೆ

ವರದಾನವಾಯಿತು. ಆ ಸಂದರ್ಭವನ್ನು ಅವರು ಚೆನ್ನಾಗಿ ಬಳಸಿಕೊಂಡರು. ಇಸ್ಲಾಮ್ ಧರ್ಮವನ್ನು ತೊರೆಯುವಂತೆ ಅವರು ದುರ್ಬಲ ವಿಶ್ವಾಸಿಗಳಿಗೆ ಪ್ರೇರಣೆ ನೀಡಿದರು. ಅವರನ್ನು ಒಂದುಗೂಡಿಸಿ ದೇಶದ ವಿವಿಧೆಡೆಗಳಲ್ಲಿ ಗಲಭೆ ಎಬ್ಬಿಸಿದರು.

ಹೊಸ ಮುಸ್ಲಿಮರಲ್ಲಿ ಹಣ ಮತ್ತು ಸ್ಥಾನಮಾನದ ಆಸೆಯಿಂದ ಇಸ್ಲಾಮ್ ಸ್ವೀಕರಿಸಿದವರೂ ಇದ್ದರು. ಪ್ರವಾದಿಯವರ(ಸ) ನಿಧನದ ಬಳಿಕ ಕುರೈಶ್ ಗೋತ್ರದ ಅಬೂಬಕರ್ ಸಿದ್ದೀಕ್(ರ) ಖಲೀಫರಾಗಿ ಆಯ್ಕೆಯಾದಾಗ ಅವರಿಗೆ ಭಾರೀ ನಿರಾಶೆಯಾಯಿತು. ಇನ್ನು ಮುಂದೆ ಅಧಿಕಾರವು ಕುರೈಶರ ಸ್ವಾಧೀನವಿರುವುದೆಂಬ ಅಂದಾಜಿನಿಂದ ಅವರೂ ವೈರಿ ಪಾಳಯ ಸೇರಿದರು. ಆ ಪೈಕಿ ಕೆಲವರು ತಮ್ಮ ಪ್ರದೇಶಗಳಲ್ಲಿ ಜನಾಂಗೀಯ ಭಾವನೆಗಳನ್ನು ಕೆರಳಿಸಿ ಹೊಸ ಪ್ರವಾದಿತ್ವ ವಾದವನ್ನು ಪ್ರಚುರಪಡಿಸಲೂ ಹೇಸಲಿಲ್ಲ. ಕೆಲವರು ಪ್ರವಾದಿಯವರ(ಸ) ಜೀವನ ಕಾಲದಲ್ಲಿಯೇ ಹೊಸ ಪ್ರವಾದಿತ್ವವನ್ನು ಆರಂಭಿಸಿದ್ದರು. ಅವರು ಕಪಟ ಪ್ರವಾದಿಗಳೆಂದು ಚೆನ್ನಾಗಿ ತಿಳಿದಿದ್ದರೂ ಕೇವಲ ಕೋಮು ಪಕ್ಷಪಾತದಿಂದ ಹಲವರು ಅವರನ್ನು ಬೆಂಬಲಿಸಿದ್ದರು.

ಇನ್ನೊಂದು ವಿಭಾಗವು, ಪ್ರವಾದಿಯವರ(ಸ) ಕಾಲದಲ್ಲಿ ಕೇಂದ್ರ ಹಣಕಾಸು ನಿಧಿ(ಬೈತುಲ್‌ಮಾಲ್)ಗೆ ನೀಡುತ್ತಿದ್ದ ಝಕಾತನ್ನು ಆ ಬಳಿಕ ಸಲ್ಲಿಸಲು ನಿರಾಕರಿಸಿತು. ಕೆಲವು ಕುರ್‌ಆನ್ ವಾಕ್ಯವನ್ನು ದುರ್ವ್ಯಾಖ್ಯಾನಿಸಿ ತಮ್ಮ ಧೋರಣೆಯನ್ನು ಅವರು ಸಮರ್ಥಿಸಲು ಪ್ರಯತ್ನಿಸುತ್ತಿದ್ದರು. ಅಂತಹ ಜನರು ಯಮನ್, ಯಮಾಮ ಮತ್ತು ಉಮ್ಮಾನ್‌ಗಳಲ್ಲಿ ಅಧಿಕವಾಗಿದ್ದರು.

ಒಟ್ಟಿನಲ್ಲಿ, ಪ್ರವಾದಿಯವರ(ಸ) ನಿಧನದ ಬಳಿಕ ಇಡೀ ಅರೇಬಿಯಾದಲ್ಲಿ ವ್ಯಾಪಿಸಿದ್ದ ಇಸ್ಲಾಮಿ ರಾಷ್ಟ್ರವು ಸಂಪೂರ್ಣ ಪ್ರಕ್ಷುಬ್ಧವಾಗಿತ್ತು. ಒಂದೆಡೆಯಲ್ಲಿ ಧರ್ಮಪರಿತ್ಯಾಗಿ(ಮುರ್ತದ್ದ್)ಗಳು, ಇನ್ನೊಂದೆಡೆಯಲ್ಲಿ ಕಪಟಪ್ರವಾದಿಗಳು, ಮತ್ತೊಂದೆಡೆಯಲ್ಲಿ ಝಕಾತ್ ನಿಷೇಧಿಗಳು. ಹೀಗೆ ಅರೇಬಿಯನ್ ವಾತಾವರಣದಲ್ಲಿ ಭೀಕರ ಗಲಭೆಯ ಕಾರ್ಮೋಡ ಕವಿಯಿತು.

ಅದರೊಂದಿಗೆ ಸಿರಿಯಾದ ಗಡಿಯಲ್ಲಿ ರೋಮನರು ಗಲಭೆಕೋರರಿಗೆ ನೆರವಾಗಿ ಮುಸ್ಲಿಮರಿಗೆ ಹೊಸ ಬೆದರಿಕೆಯೊಡ್ಡಿದರು. ಮೂತಾ ಯುದ್ಧದಲ್ಲಿ ಮುಸ್ಲಿಮ್ ಯೋಧರ ಸಂಖ್ಯೆ ಕಡಿಮೆಯಿದ್ದುದರಿಂದ ರೋಮನ್ನರನ್ನು ಹೀನಾಯವಾಗಿ ಸೋಲಿಸಲು ಸಾಧ್ಯವಾಗಿರಲಿಲ್ಲ. ಅದಲ್ಲದೇ ಝೈದ್ ಬಿನ್ ಹಾರಿಸ್, ಜಅ್‌ಫರ್ ಬಿನ್ ಅಬೀತಾಲಿಬ್, ಅಬ್ದುಲ್ಲಾ ಬಿನ್ ರವಾಹ ಮುಂತಾದ ಅನೇಕ ವೀರ ಸಹಾಬಿಗಳು ಅಲ್ಲಿ ಹುತಾತ್ಮ(ಶಹೀದ್)ರಾದರು. ಆದರೆ, ಅಂದು ಮುಸ್ಲಿಮರು ಪ್ರದರ್ಶಿಸಿದ ವೀರ ಪರಾಕ್ರಮಗಳನ್ನು ಕಂಡಿದ್ದ ರೋಮನರು ತಬೂಕ್‌ನಲ್ಲಿ ಮುಸ್ಲಿಮರನ್ನು ಕೆಣಕುವ ಗೋಜಿಗೆ ಹೋಗದೆ ಹಿಮ್ಮೆಟ್ಟಿದ್ದರು. ಹಾಗಿದ್ದರೂ ಮುಸ್ಲಿಮರನ್ನು ನಾಮಾವಶೇಷಗೊಳಿಸಲು ಹವಣಿಸುತ್ತಿರುವ ರೋಮನರಿಗೆ ಬುದ್ಧಿ ಕಲಿಸಲು ಪ್ರವಾದಿ(ಸ) ನಿರ್ಧರಿಸಿದ್ದರು. ಅದಕ್ಕಾಗಿ ಝೈದ್ ಬಿನ್ ಹಾರಿಸ್‌ರ ಹದಿನೆಂಟು ವಯಸ್ಸಿನ ಪುತ್ರ ಉಸಾಮರ ನಾಯಕತ್ವದಲ್ಲಿ ಒಂದು ಪ್ರಬಲ ಸೇನೆಯನ್ನು ಅವರು ಸಜ್ಜುಗೊಳಿಸಿದ್ದರು.

ಆದರೆ ಆ ಸೇನೆಯು ಮದೀನಾದಿಂದ ಹೊರಡುವುದಕ್ಕಿಂತ ಮುಂಚೆ ಪ್ರವಾದಿ(ಸ) ಇಹಲೋಕಕ್ಕೆ ವಿದಾಯ ಹೇಳಿದರು. ಅನಂತರ ನಡೆದ ಘಟನಾವಳಿಗಳು ರೋಮನರಿಗೆ ಆಶಾದಾಯಕವಾಗಿ ಕಂಡಿತು. ಆದ್ದರಿಂದ ಅವರು ಗಲಭೆಕೋರರಿಗೆ ನಾನಾ ರೀತಿಯಿಂದ ಬೆಂಬಲ ನೀಡಿ ಗಡಿಯಲ್ಲಿ ಗೊಂದಲ ಹುಟ್ಟಿಸಿದರು. ಅಂದಿನ ಇನ್ನೊಂದು ಪ್ರಬಲ ಶಕ್ತಿಯಾಗಿದ್ದ ಪರ್ಶಿಯಾದ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ರೋಮನರ ಜತೆಗೂಡಿ ಮುಸ್ಲಿಮರನ್ನು ತೊಡೆದು ಹಾಕುವ ಸಿದ್ಧತೆ ನಡೆಸುತ್ತಿದ್ದರು. ಇದು ಅಬೂಬಕರ್ ಸಿದ್ದೀಕ್(ರ) ಖಲೀಫರಾಗಿ ಅಧಿಕಾರ ವಹಿಸಿದಾಗಿನ ಅರೇಬಿಯಾದ ಸ್ಥಿತಿ.

ಸಿದ್ದೀಕ್‌ರ(ರ) ದೂರದೃಷ್ಟಿ

ಖಲೀಫಾ ಅಬೂಬಕರ್ ಸಿದ್ದೀಕ್(ರ) ಮಹಾಧೀರರೂ ನುರಿತ ರಾಜತಂತ್ರಜ್ಞರೂ ಆಗಿದ್ದರು. ಒಂದೆಡೆ ಭೀಕರ ಗಲಭೆ, ಇನ್ನೊಂದೆಡೆಯಲ್ಲಿ ಬೃಹತ್ ಶಕ್ತಿಗಳ ಉಗ್ರ ಬೆದರಿಕೆ. ಹಾಗಿದ್ದರೂ ಅವರು ವಿಚಲಿತರಾಗಲಿಲ್ಲ. ಸಮಸ್ಯೆಗಳನ್ನು ಸ್ಥೈರ್ಯ ಮತ್ತು ಯುಕ್ತಿಯಿಂದ ಎದುರಿಸಲು ನಿರ್ಧರಿಸಿದರು.

ಉಸಾಮರ ಸೇನೆ

ದೇಶದ ಆಂತರಿಕ ಸ್ಥಿತಿಯು ಹದಗೆಟ್ಟಿದ್ದ ಸಂದರ್ಭದಲ್ಲಿ ಮುಸ್ಲಿಮರು, ಪ್ರಬಲ ವಿದೇಶಿ ಶಕ್ತಿಗಳೊಡನೆ ಯುದ್ಧಕ್ಕೆ ಸಜ್ಜಾಗುವರೆಂದು ಯಾರೂ ಭಾವಿಸಿರಲಿಲ್ಲ ಅಥವಾ ಒಂದು ವೇಳೆ ಅವರು ಅದಕ್ಕೆ ಸಿದ್ಧವಾದರೂ ಬಹಳಷ್ಟು ಸಾಮರ್ಥ್ಯವನ್ನು ಹೊಂದಿರ ಬೇಕಾಗಿತ್ತು. ಆದರೆ ಅಬೂಬಕರ್ ಸಿದ್ದೀಕ್(ರ), ಅರಬರೆಲ್ಲರೂ ತಮಗೆ ವಿರೋಧವಾಗಿದ್ದ ಆ ವೇಳೆಯಲ್ಲಿ ಪ್ರಥಮವಾಗಿ ಉಸಾಮರ ಸೇನೆಯನ್ನು ರೋಮನರೊಡನೆ ಯುದ್ಧ ಮಾಡಿಸಲಿಕ್ಕಾಗಿ ಗಡಿಗೆ ಕಳುಹಿಸಬಯಸಿದರು. ಇದರಿಂದ ರೋಮ್ ಮತ್ತು ಪರ್ಶಿಯನ್ನರು ಮಾತ್ರವಲ್ಲದೇ ಆಂತರಿಕ ವೈರಿಗಳೂ ಭಯ ಭೀತರಾಗಬಹುದೆಂದು ಅವರು ಮನಗಂಡಿದ್ದರು. ಆದ್ದರಿಂದ ಅವರು ತಮ್ಮ ಸಂಗಡಿಗ ಸಹಾಬಿಗಳೊಡನೆ ಸಮಾಲೋಚನೆ ನಡೆಸಿದರು.

ಅನೇಕ ಸಹಾಬಿಗಳು ಅವರ ಅಭಿಪ್ರಾಯವನ್ನು ಬೆಂಬಲಿಸಲಿಲ್ಲ. ಒಂದನೆಯದಾಗಿ, ಸೇನಾ ನಾಯಕ ಉಸಾಮಾ 18 ವಯಸ್ಸಿನ ಯುವಕರಾಗಿದ್ದರು. ಎರಡನೆಯದಾಗಿ ಅರಬರು ಒಟ್ಟಾಗಿ ಇಸ್ಲಾಮೀ ರಾಷ್ಟ್ರದೊಳಗೆ ಗಲಭೆಗಳನ್ನು ಹುಟ್ಟಿಸಿದ್ದರು. ಈ ಹಿನ್ನೆಲೆಯಲ್ಲಿ ಉಸಾಮಾರ ಸೇನೆಯನ್ನು ಸಿರಿಯಾಕ್ಕೆ ಕಳುಹಿಸುವುದರಿಂದ ಮುಸ್ಲಿಮರಿಗೆ ಹಾನಿಯಾದೀತೆಂದು ಅವರ ಅಭಿಪ್ರಾಯವಾಗಿತ್ತು. ಉಮರ್ ಬಿನ್ ಖತ್ತಾಬರು ತೀವ್ರ ವಿರೋಧ ವ್ಯಕ್ತ ಪಡಿಸಿದ್ದರು. ಒಂದು ವೇಳೆ ಸೇನೆಯನ್ನು ಕಳುಹಿಸುವುದಿದ್ದರೂ ಉಸಾಮಾರ ಬದಲಿಗೆ ಹೆಚ್ಚು ಅನುಭವಸ್ಥರೋರ್ವರನ್ನು ನಾಯಕನಾಗಿ ನೇಮಿಸಬೇಕೆಂದು ಅವರು ಒತ್ತಾಯಿಸಿದರು.

ಉಮರ್‌ರ(ರ) ಅಭಿಪ್ರಾಯವನ್ನು ಆಲಿಸಿದ ಕೂಡಲೇ ಅಬೂಬಕರ್(ರ) ಸ್ವಲ್ಪ ಆವೇಶಭರಿತರಾಗಿ ತಮ್ಮ ಆಸನದಿಂದ ಧಿಗ್ಗನೆದ್ದು ಹೀಗೆಂದರು: "ಖತ್ತಾಬ್‌ರ ಮಗನೇ!

ಅಲ್ಲಾಹನ ಪ್ರವಾದಿಯವರು(ಸ) ನೇಮಿಸಿದ ಸೇನಾ ನಾಯಕನನ್ನು ಬದಲಿಸಬೇಕೆಂದು ನೀವು ನನಗೆ ಉಪದೇಶ ನೀಡುತ್ತಿರುವಿರಾ? ಅಲ್ಲಾಹನಾಣೆ! ಪ್ರವಾದಿವರ್ಯರ(ಸ) ಯಾವೊಂದು ತೀರ್ಮಾನವನ್ನೂ ನಾನು ಬದಲಿಸಲಾರೆ. ಮದೀನಾದ ಮಹಿಳೆಯರ ಕಾಲುಗಳನ್ನು ನಾಯಿಗಳು ಕಚ್ಚಿ ಎಳೆದರೂ ಉಸಾಮರ ಸೇನೆಗೆ ಪ್ರವಾದಿಯವರು(ಸ) ನೀಡಿದ ಆಜ್ಞೆಯನ್ನು ನಾನು ಕಾರ್ಯಗತಗೊಳಿಸುತ್ತೇನೆ."

ಸಿದ್ದೀಕ್‌ರ(ರ) ಈ ದೃಢ ನಿರ್ಧಾರವನ್ನು ಮನಗಂಡ ಉಮರ್ ಬಿನ್ ಖತ್ತಾಬ್(ರ) ಹಾಗೂ ಇತರ ಮುಸ್ಲಿಮರೆಲ್ಲರೂ ಅಲ್ಲಾಹನ ಧರ್ಮಕ್ಕಾಗಿ ಹೋರಾಡಲು ಉಸಾಮರ ನೇತೃತ್ವದಲ್ಲಿ ಇಸ್ಲಾಮಿನ ಧ್ವಜದಡಿ ಸಜ್ಜಾದರು. ಅನಂತರ, ವಿನಯಶೀಲ ಖಲೀಫರು ಉಸಾಮರ ವಿಶೇಷ ಅನುಮತಿ ಪಡೆದು, ಆಡಳಿತ ವ್ಯವಹಾರಗಳಲ್ಲಿ ನೆರವಾಗಲಿಕ್ಕಾಗಿ ಉಮರ್‌ರನ್ನು(ರ) ಮದೀನಾದಲ್ಲಿಯೇ ನಿಲ್ಲಿಸಿದರು.

ಸಿದ್ದೀಕ್‌ರ(ರ) ತಂತ್ರ ಫಲಿಸಿತು. ಈ ವೇಳೆ ಉಸಾಮರ ಸೇನೆಯನ್ನು ಗಡಿಗೆ ಕಳುಹಿಸಿರುವುದನ್ನು ಕಂಡು ರೋಮನರು ಹೆದರಿದರು. ಅರಬ್ ಗಲಭೆಕೋರರೂ ಬೆದರಿದರು. ಸೇನೆಯು ಕ್ಷಿಪ್ರ ಕಾರ್ಯಾಚರಣೆಯಿಂದ ಹಲವೆಡೆ ವಿಜಯಗಳಿಸಿತು. ಅನಂತರ ರೋಮನರು ಮತ್ತು ಪರ್ಶಿಯನರ ವಿರುದ್ಧ ನಡೆದ ಯುದ್ಧಗಳಲ್ಲಿ ಮುಸ್ಲಿಮರು ಸಾಧಿಸಿದ ವಿಜಯ ಪರಂಪರೆಗೆ ಅದು ನಾಂದಿಯಾಯಿತು.

ಗಲಭೆಕೋರರ ದಮನ

ತರುವಾಯ ಸಿದ್ದೀಕ್(ರ) ಆಂತರಿಕ ರಂಗಕ್ಕೆ ಗಮನ ಹರಿಸಿದರು. ರೂಢಿಯಂತೆ ಅವರು ಸಹಾಬಿಗಳು ಹಾಗೂ ಇತರ ಮುಸ್ಲಿಮರೊಡನೆ ಸಮಾಲೋಚನೆ ನಡೆಸಿದರು. ಗಲಭೆಕೋರರೊಡನೆ ಕಾದಾಡಿದರೆ, ಅದು ಇಡೀ ಅರಬ್ ಸಮೂಹಕ್ಕೆ ವ್ಯಾಪಿಸೀತು. ಆದ್ದರಿಂದ ಸದ್ಯಕ್ಕೆ ನಮಗೆ ಆ ಶಕ್ತಿಯಿಲ್ಲವೆಂದು ಬಹುಮಂದಿ ಅಭಿಪ್ರಾಯಪಟ್ಟರು. ಅಂತೆಯೇ, ಕೇಂದ್ರ ಬೈತುಲ್‌ಮಾಲ್‌ಗೆ ಹಣ ನೀಡಲು ನಿರಾಕರಿಸುತ್ತಿರುವವರು ಸತ್ಯಧರ್ಮವನ್ನು ತೊರೆದಿರಲಿಲ್ಲ, ಅವರು ಸತ್ಯವಿಶ್ವಾಸವನ್ನು ತೊರೆಯದಿರುವ ತನಕ ಅವರೊಂದಿಗೆ ಯುದ್ಧ ಮಾಡಲು ಕುರ್‌ಆನ್ ಅನುಮತಿಸುವುದಿಲ್ಲವೆಂದು ಕೆಲವರು ವಾದಿಸಿದರು. ಆದರೆ, ಇಸ್ಲಾಮಿನ ಕುರಿತು ಚೆನ್ನಾಗಿ ತಿಳಿದಿದ್ದ ದೃಢವಿಶ್ವಾಸಿಯಾಗಿದ್ದ ಖಲೀಫರು ಅವರ ಅಭಿಪ್ರಾಯಗಳನ್ನು ಅಂಗೀಕರಿಸಲಿಲ್ಲ. ಇಸ್ಲಾಮೀ ರಾಷ್ಟ್ರದ ಭದ್ರತೆಗೆ ಅಪಾಯವೊಡ್ಡಿರುವ ಈ ಎಲ್ಲ ಶಕ್ತಿಗಳ ವಿರುದ್ಧ ಅಗತ್ಯ ಬಿದ್ದರೆ ಒಂಟಿಯಾಗಿ ಹೋರಾಡುವುದಾಗಿಯೂ ಅವರು ಸಾರಿದರು. ನಮಾಝ್ ನಿಷೇಧಿಗಳನ್ನು ಇಸ್ಲಾಮಿನಿಂದ ಹೊರಹೋದವರೆಂದು ಪರಿಗಣಿಸಲಾಗುತ್ತಿದೆ. ಅದೇ ರೀತಿ ಝಕಾತ್ ನಿಷೇಧಿಗಳನ್ನೂ ಸತ್ಯವಿಶ್ವಾಸಿಗಳೆಂದು ಅಂಗೀಕರಿಸಲು ಸಿದ್ದೀಕ್(ರ) ಸಿದ್ಧರಿರಲಿಲ್ಲ. ಅವರು ದೃಢ ಸ್ವರದಿಂದ ಹೀಗೆಂದರು: "ಅಲ್ಲಾಹನಾಣೆ! ನಮಾಝ್ ಮತ್ತು ಝಕಾತ್‌ಗಳ ಮಧ್ಯೆ ಭಿನ್ನತೆ ತೋರುವವರ ವಿರುದ್ಧ ನಾನು ಹೋರಾಡದಿರಲಾರೆ. ಏಕೆಂದರೆ ಝಕಾತ್, ಸಂಪತ್ತಿನಲ್ಲಿ ಬಡವನ ಹಕ್ಕು. ಅಲ್ಲಾಹನಾಣೆ! ಅವರು ಪ್ರವಾದಿಯವರಿಗೆ(ಸ) ಝಕಾತ್ ಆಗಿ ಒಂಟೆಯ ಹಗ್ಗವನ್ನು

ನೀಡಿದ್ದರೂ ಅದನ್ನು ನನಗೆ ನೀಡಲು ನಿರಾಕರಿಸಿದರೆ ನಾನು ಅದಕ್ಕಾಗಿ ಅವರೊಡನೆ ಯುದ್ಧ ಮಾಡುತ್ತೇನೆ."

ಅಬೂಬಕರ್ ಸಿದ್ದೀಕ್‌ರ(ರ) ತರ್ಕಬದ್ಧ ಅಭಿಪ್ರಾಯವು ಮುಸ್ಲಿಮರನ್ನು ಆಲೋಚಿಸುವಂತೆ ಮಾಡಿತು. ವಸ್ತುಸ್ಥಿತಿಯನ್ನು ಮನಗಂಡ ಬಳಿಕ ಅವರು ಅತಿ ಉತ್ಸಾಹದಿಂದ ಸಿದ್ದೀಕ್‌ರನ್ನು(ರ) ಬೆಂಬಲಿಸಿದರು. ಸಿದ್ದೀಕ್(ರ) ಅವರನ್ನು 11 ಸೇನಾ ವಿಭಾಗಗಳಾಗಿ ವಿಂಗಡಿಸಿದರು. ಖಾಲಿದ್ ಬಿನ್ ವಲೀದ್, ಅಮ್ರ್ ಬಿನ್ ಆಸ್, ಇಕ್ರಿಮ ಬಿನ್ ಅಬೂಜಹಲ್, ಶುರಹ್ ಬೀಲ್(ರ) ಮುಂತಾದ ಯೋಧರು ತಂಡಗಳ ನಾಯಕರಾಗಿದ್ದರು.

ಈ ಸೇನೆಗಳನ್ನು ಯುದ್ಧಕ್ಕೆ ಕಳುಹಿಸುವುದಕ್ಕಿಂತ ಮುಂಚೆ ಅಬೂಬಕರ್ ಸಿದ್ದೀಕ್(ರ) ಧರ್ಮಪರಿತ್ಯಾಗಿ ಮತ್ತು ಝಕಾತ್ ನಿಷೇಧಿಗಳಿಗೆ ಅವರ ಸಂದೇಹ ನಿವಾರಣೆಗಾಗಿ ಪತ್ರಗಳನ್ನು ಬರೆದರು. ಅವರನ್ನು ಪುನಃ ಸತ್ಯಧರ್ಮಕ್ಕೆ ಆಹ್ವಾನಿಸಿ, ಧಿಕ್ಕರಿಸಿದರೆ ಭವಿಷ್ಯದಲ್ಲಿ ಅನುಭವಿಸಬೇಕಾದ ದುರವಸ್ಥೆಯ ಬಗ್ಗೆ ಎಚ್ಚರಿಸಿದರು. ಈ ಪತ್ರಗಳಿಗೆ ಕೆಲವರು ಉತ್ತಮ ಪ್ರತಿಕ್ರಿಯೆ ತೋರಿದರೂ ಬಹುಮಂದಿ ಧಿಕ್ಕಾರದಿಂದ ದೇಶದ್ರೋಹಿ ಚಟುವಟಿಕೆಗಳಲ್ಲಿ ನಿರತರಾದರು. ಮದೀನಾವನ್ನು ಆಕ್ರಮಿಸಲು ಬಂದ ವೈರಿಸೇನೆಯೊಂದನ್ನು ಎದುರಿಸಲು ಖಲೀಫರೇ ಸೇನಾ ನಾಯಕತ್ವ ವಹಿಸಿಕೊಂಡರು. ಇತರ ಸೇನಾ ವಿಭಾಗಗಳು ವೈರಿ ತಾಣಗಳನ್ನು ಆಕ್ರಮಿಸಿ ಅರೇಬಿಯಾದಿಂದ ಅವರ ಮೂಲೋತ್ಪಾಟನೆ ಮಾಡಿದರು.

ಕಪಟ ಪ್ರವಾದಿಗಳ ದಮನ

ಬನೂ ಹನೀಫ ಗೋತ್ರದ ಮುಸೈಲಿಮ ಎಂಬೋರ್ವ ಕಪಟ ಪ್ರವಾದಿಯು ಮುಸ್ಲಿಮರಿಗೆ ದೊಡ್ಡ ತಲೆಬೇನೆಯಾಗಿದ್ದ. ಬನೂ ಹನೀಫ ಗೋತ್ರದವರು ಪಕ್ಷಪಾತ ಮನೋಭಾವದಿಂದ ಈ ಕಪಟ ಪ್ರವಾದಿಯ ಹಿಂದೆ ಸಾಲುಗಟ್ಟಿದ್ದರು. ಅದಲ್ಲದೇ ಇನ್ನೋರ್ವ ಕಪಟ ಪ್ರವಾದಿಯಾಗಿದ್ದ ಸಜ್ಜಾದ್ ಎಂಬಾಕೆಯ ಮನವೊಲಿಸಿ ಆಕೆಯ ಬಹು ಸಂಖ್ಯಾತ ಬನೂ ತಮೀಮ್ ಗೋತ್ರವನ್ನೂ ಉಪಾಯದಿಂದ ತನ್ನ ಕೂಟಕ್ಕೆ ಸೇರಿಸಿದ್ದ. ಇದರಿಂದಾಗಿ ಮುಸೈಲಿಮನ ಸೇನಾ ಬಲವು 40,000ಕ್ಕೇರಿತ್ತು. ಬಹಳಷ್ಟು ಕಡಿಮೆ ಯೋಧರನ್ನು ಹೊಂದಿದ್ದ ಮುಸ್ಲಿಮ್ ಸೇನೆಯು ಖಾಲಿದ್ ಬಿನ್ ವಲೀದ್‌ರ ನಾಯಕತ್ವದಲ್ಲಿ ಅಲ್ಲಾಹನ ಮೇಲೆ ಭರವಸೆಯಿರಿಸಿ, 'ಯಮಾಮ' ಎಂಬಲ್ಲಿ ಅವರೊಂದಿಗೆ ಸಂಘರ್ಷಿಸಿತು.

ಯುದ್ಧ ಆರಂಭವಾದ ಸ್ವಲ್ಪ ಸಮಯದ ಬಳಿಕ ಮುಸೈಲಿಮನ ಸೇನೆಯ ಕೆಲವು ಪ್ರಮುಖ ಯೋಧರು ವಧಿಸಲ್ಪಟ್ಟರು. ಇದರಿಂದಾಗಿ ಅವರು ಹೆದರಿ ಬೆನ್ನು ತಿರುಗಿಸಿ ಚೆಲ್ಲಾಪಿಲ್ಲಿಯಾಗಿ ಓಡಲಾರಂಭಿಸಿದರು. ಮುಸೈಲಿಮ ಮತ್ತು ಆತನ ಕೆಲ ಅನುಯಾಯಿಗಳು ಎತ್ತರದ ಗೋಡೆಯಿರುವ ವಿಶಾಲವಾದ ಒಂದು ತೋಟದಲ್ಲಿ ಆಶ್ರಯ ಪಡೆದರು. ಹಿಂದಕ್ಕೆ ಓಡುತ್ತಿರುವ ತನ್ನ ಇತರ ಅನುಯಾಯಿಗಳನ್ನೂ ಅಲ್ಲಿಗೆ ಕರೆಸಿ ಪುನಃ ಪ್ರತ್ಯಾಕ್ರಮಣ ನಡೆಸುವುದೇ ಆ ಕಪಟ ಪ್ರವಾದಿಯ ಯೋಜನೆಯಾಗಿತ್ತು. ಆದರೆ ಆತನ ಈ ಹೂಟವನ್ನು ಮನಗಂಡ ಮುಸ್ಲಿಮ್ ಸೇನೆಯು ತೋಟವನ್ನು ಸುತ್ತುವರಿಯಿತು. ಉಭಯ ಸೇನೆಗಳ ನಡುವೆ

ಘೋರ ಕದನ ನಡೆಯಿತು. ಮುಸೈಲಿಮನ ಸೇನೆಯ ಸಹಸ್ರಾರು ಯೋಧರು ಮಡಿದರು. ಅಂತೆಯೇ ಮುಸ್ಲಿಮ್ ಸೇನೆಯಲ್ಲಿ ಕುರ್‌ಆನ್ ಕಂಠಪಾಠವಿದ್ದ ಅನೇಕ ಸಹಾಬಿಗಳು ಮಡಿದರು. ಆದರೆ, ಕೊನೆಗೆ ಮುಸ್ಲಿಮರು ಮುಸೈಲಿಮನ ಕಪಟ ಪ್ರವಾದಿತ್ವವನ್ನು ಆ 'ಮರಣ ತೋಟ'ದಲ್ಲಿ ದಫನ ಮಾಡಿದರು.

ತುಲೈಹ ಬಿನ್ ಖುವೈಲಿದ್ ಎಂಬ ಇನ್ನೋರ್ವ ಕಪಟ ಪ್ರವಾದಿಯು ಅಷ್ಟೊಂದು ಪ್ರಬಲನಾಗಿರಲಿಲ್ಲ. ಆದ್ದರಿಂದ ಧರ್ಮ ಸ್ಫೂರ್ತಿಯಿಂದ ವಿರಾಜಿಸುತ್ತಿದ್ದ ಮುಸ್ಲಿಮ್ ಸೇನೆಯನ್ನು ಎದುರಿಸಲಾಗದೆ ಸೋತು ಪಲಾಯನ ಮಾಡಿ ಉಮರುಲ್ ಫಾರೂಕ್‌ರ(ರ) ಆಡಳಿತ ಕಾಲದಲ್ಲಿ ಆತ ಪಶ್ಚಾತ್ತಾಪ ಪಟ್ಟು ಪುನಃ ಇಸ್ಲಾಮ್ ಧರ್ಮ ಸ್ವೀಕರಿಸಿ ಉತ್ತಮ ಮುಸ್ಲಿಮನಾಗಿ ಬಾಳಿದನು.

'ಯಮನ್‌ನ ರಹ್ಮಾನ್' ಎಂದು ಸ್ವಯಂ ಹೊಗಳಿ ಕೊಂಡಿದ್ದ ಅಸ್ವದ್ ಎಂಬ ಇನ್ನೋರ್ವ ಕಪಟ ಪ್ರವಾದಿಯಿದ್ದ. ಆ ಕಪಟ ಪ್ರವಾದಿಯು ಮೊದಲೇ ಕೊಲೆಯಾಗಿದ್ದುದರಿಂದ ಮುಸ್ಲಿಮ್ ಸೇನೆಗೆ ಆ ಕೆಲಸ ಉಳಿದಿರಲಿಲ್ಲ. ಒಟ್ಟಿನಲ್ಲಿ, ಮುಸ್ಲಿಮ್ ಯೋಧರು ಅರೇಬಿಯದಾದ್ಯಂತ ವಿಜಯೋತ್ಸವ ನಡೆಸಿದರು. ಅಬೂಬಕರ್ ಸಿದ್ದೀಕ್‌ರ(ರ) ಪ್ರಚಂಡ ಧೈರ್ಯ ಮತ್ತು ದೂರದೃಷ್ಟಿಯಿಂದ ಎಲ್ಲ ದುರುಳರೂ ದುರ್ಮೋಹಿಗಳೂ ನಿರ್ಮೂಲನಗೊಂಡರು. ಇಸ್ಲಾಮಿ ರಾಷ್ಟ್ರವು ಪುನಃ ಅಖಂಡ ಮತ್ತು ಸುಭದ್ರವಾಯಿತು. ಮುಸ್ಲಿಮರ ಶಕ್ತಿ ಮತ್ತು ಪ್ರತಾಪ ಹೆಚ್ಚಿತು. ಅರೇಬಿಯನ್ ಅರ್ಧ ದ್ವೀಪದಲ್ಲಿ ಇಸ್ಲಾಮಿನ ಪತಾಕೆಯು ರಾರಾಜಿಸಿತು.

ಮಹಾಶಕ್ತಿಗಳ ಪತನ

ಅಂದು ಪರ್ಶಿಯಾ ಮತ್ತು ರೋಮ್ ಸಾಮ್ರಾಜ್ಯಗಳು ಜಗತ್ತಿನ ಎರಡು ಬೃಹತ್ ಶಕ್ತಿಗಳಾಗಿದ್ದುವು. ಅವು ಆಫ್ರಿಕಾ ಮತ್ತು ಏಶ್ಯಾದ ಚಿಕ್ಕಪುಟ್ಟ ರಾಷ್ಟ್ರಗಳನ್ನು ಸ್ವಾಧೀನಪಡಿಸಲು ಪೈಪೋಟಿ ನಡೆಸುತ್ತಿದ್ದುವು. ಆ ನಡುವೆ ಅರೇಬಿಯಾದಲ್ಲಿ ಹೊಸ ಶಕ್ತಿ-ಇಸ್ಲಾಮಿ ಶಕ್ತಿ-ಬೆಳೆಯಿತು. ಜನ ಮತ್ತು ಆಯುಧ ಬಲ ತುಂಬಾ ಕಡಿಮೆಯಿದ್ದರೂ ಸತ್ಯನಿಷ್ಠ ಆದರ್ಶದ ಸ್ಫೂರ್ತಿಯು ಅವರನ್ನು ಮಹಾಶಕ್ತಿಯಾಗಿ ಬೆಳೆಸಿತ್ತು. ಇದು 'ಪರಂಪರಾಗತ ದೊರೆ'ಗಳನ್ನು ಕೆರಳಿಸಿತು. ಅವರು ಮುಸ್ಲಿಮ್ ಶಕ್ತಿಯನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುವ ಕಾರ್ಯಕ್ಕೆ ತೊಡಗಿದರು. ಈ ಹಿನ್ನೆಲೆಯಲ್ಲಿ ಪ್ರವಾದಿವರ್ಯರು(ಸ) ಅವರ ವಿರುದ್ಧ ಯುದ್ಧ ಮಾಡುವ ಕುರಿತು ಆಲೋಚಿಸಿದ್ದರು. ಮೂತಾ-ತಬೂಕ್ ಯುದ್ಧಗಳ ಮೂಲಕ ಅದನ್ನು ಆರಂಭಿಸಿದ್ದರು.

ಪರ್ಶಿಯಾ ಮತ್ತು ಇರಾಕ್

ಅಬೂಬಕರ್ ಸಿದ್ದೀಕ್(ರ) ಅಧಿಕಾರ ವಹಿಸಿದ ಬಳಿಕ ಮುಸ್ಲಿಮರು ಪ್ರಥಮವಾಗಿ ಪರ್ಶಿಯಾದೊಡನೆ ಸಂಘರ್ಷಿಸಿದರು. ಇರಾಕ್ ಅಂದು ಪರ್ಶಿಯಾದ ಅಧೀನವಿತ್ತು. ಆದ್ದರಿಂದ, ಖಲೀಫರು ಮುಸನ್ನ ಬಿನ್ ಹಾರಿಸ್ ಶೈಬಾನಿಯವರ(ರ) ನಾಯಕತ್ವದಲ್ಲಿ ಒಂದು ಸೇನೆಯನ್ನು ಇರಾಕಿಗೆ ಕಳುಹಿಸಿದರು. ಪರ್ಶಿಯನರಿಗೆ ಹೋಲಿಸಿದಾಗ ಮುಸನ್ನಾರ ಸೇನೆ

ಬಹಳ ಚಿಕ್ಕದಾಗಿತ್ತು. ಹಾಗಿದ್ದರೂ, ಆ ಸೇನೆಯು ಪರ್ಶಿಯನರ ವಶವಿದ್ದ ಹಲವಾರು ಪ್ರದೇಶಗಳನ್ನು ಗೆದ್ದುಕೊಂಡಿತು. ಅನಂತರ ಖಲೀಫರು ಖಾಲಿದ್ ಬಿನ್ ವಲೀದ್ ಸೈಫುಲ್ಲಾಹಿಯವರ(ರ) ನಾಯಕತ್ವದಲ್ಲಿ ಇನ್ನೊಂದು ದೊಡ್ಡ ಸೇನೆಯನ್ನು ಇರಾಕಿಗೆ ಕಳುಹಿಸಿದರು. ಸೇನೆಯ ನಾಯಕತ್ವವನ್ನು ಖಾಲಿದ್‌ರಿಗೆ(ರ) ವಹಿಸಿಕೊಡುವಂತೆ ಮುಸನ್ನಾರಿಗೆ ತಿಳಿಸಿದ್ದರು. ಖಾಲಿದ್‌ರ(ರ) ಸೇನೆಯೂ ಇರಾಕಿಗೆ ಬಂದ ಬಳಿಕ ಒಂದೊಂದೇ ಪ್ರದೇಶಗಳು ಬೇಷರತ್ ಶರಣಾದುವು ಅಥವಾ ಮುಸ್ಲಿಮರಿಗೆ ಕಪ್ಪ ಕಾಣಿಕೆ ಸಲ್ಲಿಸುವ ಒಪ್ಪಂದ ಮಾಡಿಕೊಂಡುವು. ಹೀರಃ, ಅನ್ಬಾರ, ಐನುತ್ತಮ್ರ್ ಎಂಬೀ ಪ್ರದೇಶಗಳು ಅವುಗಳಲ್ಲಿ ಮುಖ್ಯವಾಗಿವೆ. ಐನುತ್ತಮ್ರ್‌ನಲ್ಲಿ ಪರ್ಶಿಯನರು ಅನೇಕ ಅರಬರನ್ನು ಗುಲಾಮರನ್ನಾಗಿ ಮಾಡಿ, ಅಲ್ಲೊಂದು ಚರ್ಚ್ ನಿರ್ಮಿಸಿ, ಅವರನ್ನು ಅದರಲ್ಲಿ ಬಂಧಿಸಿಟ್ಟಿದ್ದರು. ಖಾಲಿದ್‌ರು(ರ) ಅವರನ್ನು ವಿಮೋಚಿಸಿ ಸ್ವತಂತ್ರಗೊಳಿಸಿದರು.

ರೋಮ್ ಮತ್ತು ಸಿರಿಯಾ

ಇರಾಕ್‌ನಲ್ಲಿ ಖಾಲಿದ್‌ರ(ರ) ದಂಡಯಾತ್ರೆ ಮುಂದುವರಿಯುತ್ತಿರುವಾಗ ಸಿರಿಯಾದ ಗಡಿಯಲ್ಲಿ ಮುಸ್ಲಿಮರು ರೋಮನರೊಂದಿಗೆ ಯುದ್ಧಕ್ಕೆ ತೊಡಗಿದ್ದರು. ಖಲೀಫರು ಈ ಯುದ್ಧಕ್ಕೆ ಪರ್ಶಿಯನರಿಗಿಂತ ಪ್ರಾಮುಖ್ಯ ನೀಡಿದ್ದರು. ಏಕೆಂದರೆ, ಸಿರಿಯಾ, ಈಜಿಪ್ಟ್ ಮತ್ತು ಫೆಲೆಸ್ತೀನ್ ಅಂದು ರೋಮನರ ಅಧೀನದಲ್ಲಿದ್ದುವು. ಅಲ್ಲಿಯ ಜನರು ರೋಮನರ ಕಿರಾತ ಆಡಳಿತದಿಂದ ರೋಸಿ ಹೋಗಿದ್ದರು. ಅವರು ಗುಲಾಮರಂತೆ ಜೀವನ ಸಾಗಿಸಬೇಕಾಗಿತ್ತು. ಆದ್ದರಿಂದ, ಮುಸ್ಲಿಮರಿಗೆ ಊರವರ ಬೆಂಬಲ ಧಾರಾಳವಾಗಿ ದೊರೆಯಬಹುದೆಂದು ಅಬೂಬಕರ್(ರ) ಅರಿತಿದ್ದರು. ಪ್ರಬಲ ರೋಮನ್ ಶಕ್ತಿಯನ್ನು ಎದುರಿಸುವುದಕ್ಕಾಗಿ ಒಂದು ಉತ್ತಮ ಸೇನೆಯನ್ನು ಅವರು ಸಜ್ಜುಗೊಳಿಸಿದರು. ಅವರು, ಸೇನೆಯನ್ನು ನಾಲ್ಕು ತಂಡಗಳಾಗಿ ವಿಂಗಡಿಸಿದರು: ಅಮೀನುಲ್ ಉಮ್ಮತ್ ಅಬೂ ಉಬೈದ ಬಿನ್ ಜರ್ರಾಹ್‌ರ(ರ) ನಾಯಕತ್ವದ ತಂಡವು ಹಿಂಸ್‌ನಲ್ಲಿ ಆಕ್ರಮಣ ನಡೆಸುವಾಗ ಯಝೀದ್ ಬಿನ್ ಅಬೂ ಸುಫ್‌ಯಾನ್‌ರ(ರ) ನಾಯಕತ್ವದಲ್ಲಿರುವ ಎರಡನೆಯ ತುಕಡಿಯು ಡೆಮಾಸ್ಕಸ್‌ಗೆ ಸಾಗಬೇಕಾಗಿತ್ತು. ಅದೇ ವೇಳೆ ಶುರಹ್‌ಬೀಲ್ ಬಿನ್ ಹಸನತ್‌ರ(ರ) ಸೇನಾ ತುಕಡಿಯು ಜೋರ್ಡಾನ್ ಕಣಿವೆಗೂ ಅಮ್ರ್ ಬಿನ್ ಆಸ್‌ರ(ರ) ಕೈಕೆಳಗಿನ ನಾಲ್ಕನೆಯ ವಿಭಾಗವು ಫೆಲಸ್ತೀನಿನ ವಿಮೋಚನೆಗೂ ಹೊರಟಿತ್ತು. ಅಮೀನುಲ್ ಉಮ್ಮತ್ ಅಬೂ ಉಬೈದರು(ರ) ಒಟ್ಟು 12,000 ಯೋಧರಿದ್ದ ಈ ಸೇನಾ ವಿಭಾಗಗಳ ಪ್ರಧಾನ ದಂಡನಾಯಕರಾಗಿದ್ದರು.

ಸಿದ್ದೀಕ್‌ರ(ರ) ಆಜ್ಞೆಯಂತೆ ಸೇನೆಗಳು ನಾಲ್ಕು ದಿಕ್ಕುಗಳಿಗೆ ಸಾಗಿದುವು. ಅಷ್ಟರಲ್ಲಿ ಮುಸ್ಲಿಮರ ತಂತ್ರವನ್ನು ಮನಗಂಡ ಹಿರ್ಕಲ್(ಹರ್ಕ್ಯುಲಿಸ್) ರಾಜನು ಅವರನ್ನು ಎದುರಿಸುವುದಕ್ಕಾಗಿ ಒಂದು ಲಕ್ಷ ಯೋಧರ ನಾಲ್ಕು ಸಶಕ್ತ ತಂಡಗಳನ್ನು ಅದಾಗಲೇ ಸಜ್ಜುಗೊಳಿಸಿದ್ದನು. ಆದ್ದರಿಂದ ಆಯುಧ ಮತ್ತು ಜನಬಲದಲ್ಲಿ ರೋಮನರಿಗಿಂತ ದುರ್ಬಲವಾಗಿದ್ದ ಮುಸ್ಲಿಮ್ ಸೇನೆಗೆ ವಿಶೇಷ ಜಯ ಲಭಿಸಲಿಲ್ಲ. ಆದರೂ ಫೆಲಸ್ತೀನ್

ಭಾಗದಲ್ಲಿ ಅವ್ರ್ ಬಿನ್ ಆಸ್(ರ) ಕೆಲವು ಪ್ರಮುಖ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡರು.

ಸೇನಾ ತುಕಡಿಗಳ ಕಾರ್ಯಾಚರಣೆಯ ಕುರಿತು ಆಗಾಗ ಸುದ್ದಿ ತಿಳಿಯುತ್ತಿದ್ದ ಖಲೀಫರು ಯುದ್ಧ ತಂತ್ರಗಳನ್ನು ಬದಲಾಯಿಸಿದರು. ವಿಭಜಿತ ಸೇನೆಗಳಿಂದ ರೋಮನರನ್ನು ಸೋಲಿಸಲು ಮುಸ್ಲಿಮರಿಗೆ ಸಾಧ್ಯವಿಲ್ಲ. ಆದ್ದರಿಂದ ನಾಲ್ಕು ಸೇನಾ ತುಕಡಿಗಳನ್ನು ಒಂದುಗೂಡುವಂತೆ ಸೂಚಿಸಿದರು. ತರುವಾಯ ಇರಾಕ್‌ನಲ್ಲಿ ಪರ್ಶಿಯನರ ವಿರುದ್ಧ ಹೋರಾಡುತ್ತಿದ್ದ ಖಾಲಿದ್ ಬಿನ್ ವಲೀದ್‌ರಿಗೆ, ತನ್ನ ಸೇನೆಯ ಅರ್ಧಾಂಶ ಯೋಧರನ್ನು ಸಿರಿಯಾಕ್ಕೆ ಕರೆತಂದು ಪ್ರಧಾನ ದಂಡನಾಯಕ ಸ್ಥಾನವನ್ನು ವಹಿಸುವಂತೆ ಆಜ್ಞಾಪಿಸಿದರು.

ಖಾಲಿದ್ ಸೈಫುಲ್ಲಾ(ರ) ಎರಡು ಸಾವಿರ ಯೋಧರ ಜತೆ ಸಿರಿಯಾಕ್ಕೆ ತಲಪಿದಾಗ ಮುಸ್ಲಿಮ್ ಸೇನೆಗೆ ಹೊಸ ಚೈತನ್ಯ ಬಂತು. ಪರ್ಶಿಯನರು ಹೊಂಚು ಹಾಕಿ ಆಕ್ರಮಿಸಬಹುದೆಂಬ ಭೀತಿಯಿಂದ ಬಹಳಷ್ಟು ಸಂಕಷ್ಟಗಳನ್ನು ಸಹಿಸಿ ದುರ್ಗಮ ಹಾದಿಯಿಂದ ಅವರು ಅಲ್ಲಿಗೆ ಬಂದು ತಲಪಿದ್ದರು. ಹೊಸ ನಾಯಕನ ಆಜ್ಞೆಯಂತೆ ಹೊಸ ತಂತ್ರಗಳನ್ನು ಹೆಣೆದು ಅವರು ಅಜ್ನಾದೀಸ್ ಎಂಬ ಸ್ಥಳದಲ್ಲಿ ರೋಮನರೊಡನೆ ಹೋರಾಡಿದರು. ಅಧಿಕ ಸೇನಾಬಲವನ್ನು ಹೊಂದಿದ್ದ ರೋಮನರ ಮುಂದೆ ಹೆಚ್ಚಿನ ಧಾರ್ಮಿಕ ಸ್ಥೈರ್ಯವೇ ಮುಸ್ಲಿಮರ ಬಂಡವಾಳವಾಗಿತ್ತು. ಅಲ್ಲಾಹನ ಮೇಲಿರುವ ಅಚಂಚಲ ವಿಶ್ವಾಸದಿಂದ ಅವರು ಸತ್ಯಧರ್ಮಕ್ಕಾಗಿ ಧೈರ್ಯದಿಂದ ಹೋರಾಡಿದರು. ರೋಮನ್ ಸೇನೆಯ ಅರ್ಧಾಂಶ ಮಂದಿ ರಣರಂಗದಲ್ಲಿ ಮಡಿದು ಬಿದ್ದರು. ಉಳಿದವರು ನಾಗಾಲೋಟದಿಂದ ಪಲಾಯನ ಮಾಡಿದರು. ಈ ಸುದ್ದಿ ತಿಳಿದ ಹಿರ್ಕಲ್(ಹರ್ಕ್ಯುಲಿಸ್) ಚಕ್ರವರ್ತಿಗೆ ಹಿಂಸ್‌ನಲ್ಲಿ ನಿಲ್ಲುವ ಧೈರ್ಯವಿರಲಿಲ್ಲ. ಅವರು ಅಂಟಾಕಿಯಾಕ್ಕೆ ಓಡಿ ಪಾರಾದರು.

ಹಿಜರಿ 13ನೆಯ ವರ್ಷದಲ್ಲಿ ಈ ಹೋರಾಟ ನಡೆಯುತ್ತಿದ್ದಾಗ ಖಲೀಫಾ ಅಬೂಬಕರ್ ಸಿದ್ದೀಕ್(ರ) ನಿಧನರಾದರು.

ಸಿದ್ದೀಕ್‌ರ(ರ) ಆಡಳಿತ

ಅಬೂಬಕರ್‌ರವರು(ರ) ಮುಸ್ಲಿಮರ ಖಲೀಫರಾಗಿ ಎರಡು ವರ್ಷ ಮೂರು ತಿಂಗಳು ಮತ್ತು ಹತ್ತು ದಿನ ಬದುಕಿದ್ದರು. ಈ ಕಾಲಾವಧಿಯಲ್ಲಿ ಇಸ್ಲಾಮಿನ ಕಾನೂನುಗಳನ್ನು ಸಂಪೂರ್ಣ ಜಾರಿಗೊಳಿಸಿ ಒಂದು ಸಮಗ್ರ ಇಸ್ಲಾಮೀ ರಾಷ್ಟ್ರದ ಮಾದರಿಯನ್ನು ಅವರು ಲೋಕದ ಮುಂದಿಟ್ಟರು. ಅದರ ಅನೇಕ ಸತ್ಫಲಗಳು ಅನಂತರ ವ್ಯಕ್ತವಾದರೂ ಪ್ರವಾದಿಯವರು(ಸ) ನೆಟ್ಟು ಬೆಳೆಸಿದ್ದ ಆ ಫಲವೃಕ್ಷಕ್ಕೆ ಸಾಕಷ್ಟು ನೀರೆರೆದು ಬೆಳೆಸಿದ ಶ್ರೇಷ್ಠತೆಯು ಸಿದ್ದೀಕ್‌ರಿಗೆ(ರ) ಸಲ್ಲುತ್ತದೆ. ಆದ್ದರಿಂದ ಅವರ ಸರಕಾರವನ್ನು 'ಪ್ರಥಮ ಇಸ್ಲಾಮೀ ಸರಕಾರ'ವೆಂದು ಕೆಲವರು ಕರೆಯುತ್ತಾರೆ.

ಸಿದ್ದೀಕ್(ರ) ಪ್ರಜೆಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಬಡ, ದುರ್ಬಲ ಜನರಿಗೆ ಎಲ್ಲಾ ಸಂದರ್ಭಗಳಲ್ಲಿಯೂ ನೆರವು ನೀಡುತ್ತಿದ್ದರು. ಖಲೀಫರಾಗುವುದಕ್ಕಿಂತ ಮುಂಚೆ ಅವರು

ಮದೀನಾದ ಓರ್ವ ನಿರ್ಗತಿಕ ವೃದ್ಧೆಯ ಆರೈಕೆಯನ್ನು ಯಾವಾಗಲೂ ಮಾಡುತ್ತಿದ್ದರು. ಆಡಳಿತದ ಹೊಣೆ ವಹಿಸಿದ ಬಳಿಕವೂ ಅವರು ಆ ಕೆಲಸವನ್ನು ಬಿಡಲಿಲ್ಲ.

ಸಿದ್ದೀಕ್‌ರ(ರ) ಸರಕಾರದಲ್ಲಿ ಉಮರುಲ್ ಫಾರೂಕ್‌ರಿಗೆ(ರ) ನ್ಯಾಯಪಾಲನೆಯ ಹೊಣೆಯನ್ನು ನೀಡಲಾಗಿತ್ತು. ಆದರೆ ಉಮರುಲ್ ಫಾರೂಕ್(ರ) ಆ ಹೊಣೆ ವಹಿಸಿದ ಒಂದು ವರ್ಷದ ತನಕ ಅವರ ನ್ಯಾಯಾಲಯಕ್ಕೆ ಯಾವುದೇ ದೂರು ಬಂದಿರಲಿಲ್ಲ. ಇದು ಸಿದ್ದೀಕ್‌ರ(ರ) ಆಡಳಿತ ಕಾಲದಲ್ಲಿ ಜನರಲ್ಲಿದ್ದ ಪರಸ್ಪರ ಪ್ರೀತಿ, ಸಹೋದರತೆ, ಸಮಭಾವ ಮತ್ತು ಸದ್ಗುಣಗಳ ಉತ್ತಮ ಉದಾಹರಣೆಯಾಗಿದೆ.

ಕುರ್‌ಆನಿನ ಕ್ರೋಢೀಕರಣ

ಅಬೂಬಕರ್ ಸಿದ್ದೀಕ್‌ರ(ರ) ಆಡಳಿತ ಕಾಲದಲ್ಲಿ ಪವಿತ್ರ ಕುರ್‌ಆನನ್ನು ಗ್ರಂಥ ರೂಪದಲ್ಲಿ ಕ್ರೋಢೀಕರಿಸಲಾಯಿತು. ಅದಕ್ಕಿಂತ ಮುಂಚೆ ಚರ್ಮ, ತಾಳೆಗರಿ, ಎಲುಬು, ಕಲ್ಲಿನ ತುಂಡು ಮತ್ತು ಸಹಾಬಿಗಳ ಸ್ಮರಣ ಶಕ್ತಿಯಲ್ಲಿ ಅದು ಉಳಿದಿತ್ತು.

ಪವಿತ್ರ ಕುರ್‌ಆನನ್ನು ನಾವಿಂದು ನೋಡುವ ಮತ್ತು ಓದುತ್ತಿರುವ ಕ್ರಮದಲ್ಲಿಯೇ ಚುಕ್ಕೆ-ಗೆರೆ ವ್ಯತ್ಯಾಸವಿಲ್ಲದೆ ಜಿಬ್‌ರೀಲ್(ಅ) ಹಲವು ಬಾರಿ ಪ್ರವಾದಿಯವರಿಗೆ(ಸ) ಓದಿ ಹೇಳಿದ್ದರು. ಪ್ರವಾದಿಯವರು(ಸ) ಅದೇ ರೀತಿ ಸಹಾಬಿಗಳಿಗೆ ಕಲಿಸಿದ್ದರು. ಕೆಲವು ಭಾಗಗಳನ್ನು ಅತ್ತಿತ್ತ ಬರೆದಿಡಲಾಗಿತ್ತು. ಆದರೆ, ಅದನ್ನೊಂದು ಸಂಪೂರ್ಣ ಗ್ರಂಥವಾಗಿ ಕ್ರೋಢೀಕರಿಸಿರಲಿಲ್ಲ. ಹೀಗಿರಲು ಪ್ರವಾದಿಯವರು(ಸ) ಈ ಲೋಕಕ್ಕೆ ವಿದಾಯ ಕೋರಿದರು. ಅನಂತರ ಅಬೂಬಕರ್ ಸಿದ್ದೀಕ್(ರ) ಖಲೀಫರಾದ ಕೂಡಲೇ 'ಯಮಾಮ'ದಲ್ಲಿ ಕಪಟ ಪ್ರವಾದಿಯ ವಿರುದ್ಧ ಹೋರಾಡಬೇಕಾಯಿತು. ಆ ಯುದ್ಧದಲ್ಲಿ ಕುರ್‌ಆನ್ ಕಂಠಪಾಠವಿದ್ದ ಅನೇಕ ಸಹಾಬಿಗಳು ಹುತಾತ್ಮರಾದರು. ಹೀಗೆ ಕುರ್‌ಆನ್ ಕಂಠಪಾಠವಿರುವ ಸಹಾಬಿಗಳು ನಿಧನರಾದರೆ ಮುಸ್ಲಿಮರಿಗೆ ಕುರ್‌ಆನ್ ಇಲ್ಲದಂತಾದೀತೇ ಎಂಬ ಸಂದೇಹ ಫಾರೂಕ್(ರ) ಅವರನ್ನು ಕಾಡಿತು. ಅವರು ಕೂಡಲೇ ಈ ವಿಷಯವನ್ನು ಸಿದ್ದೀಕ್‌ರಿಗೆ(ರ) ಮನಗಾಣಿಸಿದರು: "ನಾವು ಪವಿತ್ರ ಕುರ್‌ಆನನ್ನು ಗ್ರಂಥ ರೂಪದಲ್ಲಿ ಕ್ರೋಢೀಕರಿಸಬೇಕು."

"ಆದರೆ, ಪ್ರವಾದಿಯವರು(ಸ) ಮಾಡದಂತಹ ಕೆಲಸವನ್ನು ನಾವು ಮಾಡುವುದು ಹೇಗೆ?" ಎಂದು ಸಿದ್ದೀಕ್(ರ) ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಫಾರೂಕ್(ರ), ಯಮಾಮ ಯುದ್ಧ ಮತ್ತು ಸಹಾಬಿಗಳ ಮರಣ ಇತ್ಯಾದಿಗಳನ್ನು ವಿವರಿಸಿ ಸಿದ್ದೀಕ್‌ರಿಗೆ(ರ) ಮಂದಟ್ಟು ಮಾಡಲು ಪ್ರಯತ್ನಿಸಿದರು. ಆ ಬಳಿಕವೂ ಖಲೀಫರು ಅದೇ ಮಾತನ್ನು ಪುನರಾವರ್ತಿಸಿದರು. "ಪ್ರವಾದಿಯವರು(ಸ) ಮಾಡದ ಕೆಲಸವನ್ನು ನಾವು ಮಾಡುವುದು ಹೇಗೆ?" ಆದರೆ ಉಮರ್(ರ) ಪಟ್ಟು ಬಿಡಲಿಲ್ಲ. ಅದು ಸಮುದಾಯದ ಅವಶ್ಯಕ ಕೆಲಸವೆಂದು ಅವರು ವಾದಿಸಿದರು. ಕೊನೆಗೆ ಅಬೂಬಕರ್(ರ) ಉಮರ್‌ರ(ರ) ಅಭಿಪ್ರಾಯವನ್ನು ಅಂಗೀಕರಿಸಬೇಕಾಯಿತು. ಅದು ಸರಿಯೆಂದು ಅವರಿಗೆ ಮನವರಿಕೆಯಾಯಿತು. ಕೂಡಲೇ ಝೈದ್ ಬಿನ್ ಸಾಬಿತ್‌ರನ್ನು ಕರೆದು ಅಬೂಬಕರ್(ರ) ಹೀಗೆಂದರು:

"ನೀವು ನಂಬಿಗಸ್ಥ ಮತ್ತು ಬುದ್ಧಿವಂತ ಯುವಕರಾಗಿದ್ದೀರಿ. ನೀವು ಪ್ರವಾದಿ(ಸ) ಅವರಿಗೆ ಬರುತ್ತಿದ್ದ ದಿವ್ಯವಾಣಿ(ವಹ್ಯ್)ಯನ್ನು ಬರೆದಿಡುತ್ತಿದ್ದಿರಷ್ಟೆ. ಆದ್ದರಿಂದ, ವಿವಿಧೆಡೆಗಳಲ್ಲಿ ಬರೆದಿರಿಸಿರುವ ಕುರ್‌ಆನಿನ ಭಾಗಗಳನ್ನು ಶೇಖರಿಸಿ ಅವುಗಳನ್ನು ಗ್ರಂಥ ರೂಪದಲ್ಲಿ ಕ್ರೋಡೀಕರಿಸಬೇಕು."

ಖಲೀಫರ ಈ ಆಜ್ಞೆಯು ಅತ್ಯಂತ ಭಾರವಾದುದೆಂದು ಝೈದ್‌ರಿಗೆ(ರ) ತೋಚಿತು. ಆದ್ದರಿಂದ, ಅವರು ಮೊದಲು ಸಿದ್ದೀಕ್(ರ) ಮಾಡಿದಂತೆ, ಕೆಲವೊಂದು ನೆಪಗಳನ್ನು ಹೇಳಿದರು. ಆದರೆ ಸಿದ್ದೀಕ್(ರ) ಪುನಃ ತಿಳಿಸಿ ಒತ್ತಾಯಿಸಿದ ಬಳಿಕ ಅವರಿಗೆ ಆ ನಿರ್ಧಾರ ಸರಿ ಕಂಡಿತು. ತರುವಾಯ ತಡಮಾಡದೆ ತನಗೆ ನೀಡಲಾದ ಹೊಣೆಯನ್ನು ಸುಂದರವಾಗಿ ಮತ್ತು ಪ್ರಾಮಾಣಿಕವಾಗಿ ನಿರ್ವಹಿಸಿದರು.

ಆ ಕುರ್‌ಆನ್ ಪ್ರತಿಯು(ಮುಸ್ಹಫ್) ಮರಣದ ತನಕ ಸಿದ್ದೀಕ್‌ರ(ರ) ಬಳಿಯಿತ್ತು. ಅನಂತರ ಅದು ಹ. ಉಮರ್‌ರವರ(ರ) ಪುತ್ರಿ ಉಮ್ಮುಲ್ ಮುಅ್‌ಮಿನೀನ್ ಹಫ್ಸಾರ(ರ) ಸ್ವಾಧೀನವಿತ್ತು.

ರೋಗ ಮತ್ತು ನಿಧನ

ಪ್ರವಾದಿ(ಸ) ಮದೀನಾಕ್ಕೆ ವಲಸೆ(ಹಿಜ್ರತ್) ಹೋಗಿ 12 ವರ್ಷ ಕಳೆದಿತ್ತು. ಹದಿಮೂರನೆಯ ವರ್ಷದ ಜುಮಾದಿಲ್ ಆಖಿರ್ ತಿಂಗಳ ಏಳನೆಯ ತಾರೀಕು ಸೋಮವಾರ. ವಾತಾವರಣ ಬಹಳ ಶೀತವಾಗಿತ್ತು. ಅಬೂಬಕರ್(ರ) ಸ್ನಾನದ ಕೋಣೆಗೆ ಹೋಗಿದ್ದರು. ಸ್ನಾನ ಮಾಡಿದಾಗ ಮೈಯಲ್ಲಿ ನಡುಕ. ಅನಂತರ ಜ್ವರ. ಜ್ವರ ವಿಪರೀತ ಏರಿತು. ನಮಾಝಿಗಾಗಿ ಮಸೀದಿಗೆ ಹೋಗಲಾಗಲಿಲ್ಲ. ನಮಾಝ್‌ನ ನೇತೃತ್ವದ(ಇಮಾಮತ್) ಹೊಣೆಯನ್ನು ಉಮರ್‌ರಿಗೆ(ರ) ವಹಿಸಿದರು. ಆದರೂ ಅವರ ಮನಸ್ಸಿಗೆ ಸಮಾಧಾನವಿರಲಿಲ್ಲ. ಪ್ರವಾದಿ(ಸ) ಅವರ ನಿಧನದ ಬಳಿಕ ಖಿಲಾಫತ್‌ಗಾಗಿ ಉದ್ಭವಿಸಿದ ಬಿಕ್ಕಟ್ಟು ಅವರ ಮನದಲ್ಲಿ ಮೂಡಿತು. "ಬೇಡ, ಹಾಗಾಗಬಾರದು. ಒಬ್ಬರನ್ನು ಖಲೀಫರಾಗಿ ಈಗಲೇ ನಿರ್ಣಯಿಸುವುದು ಉತ್ತಮ" ಎಂದು ಮನದಲ್ಲಿ ನಿರ್ಧರಿಸಿದರು. ಅನಂತರ ಅಬ್ದುರ್ರಹ್ಮಾನ್ ಬಿನ್ ಔಫ್‌ರನ್ನು(ರ) ಕರೆಸಿ ಗುಟ್ಟಿನಲ್ಲಿ ಕೇಳಿದರು: "ಉಮರ್‌ರ ಕುರಿತು ನಿಮ್ಮ ಅಭಿಪ್ರಾಯವೇನು?" ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳಿದರು: "ಅಲ್ಲಾಹನಾಣೆ! ಅವರು ಜನರಲ್ಲಿ ಅತ್ಯುತ್ತಮರಾಗಿದ್ದಾರೆ. ಆದರೆ ಸ್ವಲ್ಪ ಕಠೋರತೆಯಿದೆ."

"ನಾನು ಹೆಚ್ಚು ಮೃದುವಾಗಿರುವುದರಿಂದ ನಿಮಗೆ ಹಾಗೆ ತೋರುತ್ತದೆ. ಈ ಆಡಳಿತ ಹೊಣೆಯನ್ನು ನೀಡಿದರೆ, ಅವರು ಬಹುವಂಶ ಅದನ್ನು ತೊರೆಯಬಹುದು" ಎಂದು ಅಬೂಬಕರ್ ಹೇಳಿದರು. ಅನಂತರ ಅವರು ಉಸ್ಮಾನ್‌ರನ್ನು(ರ) ಕರೆಸಿ ಉಮರ್‌ರ(ರ) ಕುರಿತು ಪ್ರಶ್ನಿಸಿದರು: "ಅಲ್ಲಾಹನಾಣೆ! ಅವರ ಖಾಸಗಿ ಜೀವನವು ಸಾರ್ವಜನಿಕ ಜೀವನಕ್ಕಿಂತ ಉತ್ತಮವಾಗಿದೆ. ಅಂತಹ ಇನ್ನೊಬ್ಬರು ನಮ್ಮ ಕೂಟದಲ್ಲಿಲ್ಲ" ಎಂದು ಉಸ್ಮಾನ್(ರ) ಉತ್ತರಿಸಿದರು. ಆ ಬಳಿಕ ಉಸೈದ್ ಬಿನ್ ಹುದೈರ್(ರ), ಸಈದ್ ಬಿನ್ ಝೈದ್(ರ)

ಮುಂತಾದ ಅನ್ಸಾರ್ ಮತ್ತು ಮುಹಾಜಿರ್‌ಗಳಾದ ಎಲ್ಲ ಪ್ರಮುಖ ಸಹಾಬಿಗಳೊಂದಿಗೆ ಅಬೂಬಕರ್(ರ) ಸಮಾಲೋಚನೆ ನಡೆಸಿದರು. ಎಲ್ಲರೂ ಉಮರ್‌ರ(ರ) ಗುಣವನ್ನು ಪ್ರಶಂಸಿಸಿದರು. ಕೊನೆಗೆ ಉಸ್ಮಾನ್‌ರನ್ನು(ರ) ಕರೆದು ಈ ರೀತಿ ಬರೆಯುವಂತೆ ಆದೇಶಿಸಿದರು: ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ. ಇದು ಅಬೂ ಕುಹಾಫರ ಪುತ್ರ ಅಬೂಬಕರ್ ಮುಸ್ಲಿಮರಿಗೆ ನೀಡುವ ಆದೇಶವಾಗಿದೆ. ನಾನು ಉಮರ್ ಬಿನ್ ಖತ್ತಾಬ್‌ರನ್ನು ನಿಮ್ಮ ಖಲೀಫರಾಗಿ ನೇಮಿಸಿರುತ್ತೇನೆ, ನೀವು ಅವರನ್ನು ಅನುಸರಿಸಿರಿ. ಅಲ್ಲಾಹ್ ಮತ್ತು ಆತನ ಧರ್ಮದ ವಿಷಯದಲ್ಲಿ ನಾನು ಯಾವೊಂದು ಒಳಿತನ್ನೂ ನಿಮಗೆ ನಿರಾಕರಿಸಿಲ್ಲ. ಆದ್ದರಿಂದ ಅವರು ನ್ಯಾಯಪಾಲಿಸಿದರೆ, ಅವರು ಪಾಲಿಸುವವರೆಂದೇ ನನ್ನ ನಿರೀಕ್ಷೆ ಮತ್ತು ನಂಬಿಕೆಯಾಗಿದೆ. ಇನ್ನು ಒಂದು ವೇಳೆ ತದ್ವಿರುದ್ಧವಾದರೆ, ಪ್ರತಿಯೊಬ್ಬನಿಗೂ ಆತನ ಕರ್ಮಗಳನುಸಾರ ಪ್ರತಿಫಲ ದೊರೆಯುವುದು. ನಾನು ಕೇವಲ ಹಿತವನ್ನೇ ಬಯಸಿದ್ದೇನೆ. ಅಗೋಚರ ವಿಷಯಗಳನ್ನು ನಾನು ತಿಳಿದಿಲ್ಲ.

ಅಬೂಬಕರ್(ರ) ಪತ್ರ ತೆಗೆದು ಓದಿ ನೋಡಿದ ಬಳಿಕ ಮುದ್ರೆ ಒತ್ತಿ ಉಸ್ಮಾನ್‌ರ(ರ) ವಶಕ್ಕೊಪ್ಪಿಸಿದರು. ಉಸ್ಮಾನ್(ರ) ಈ ವಿಷಯವನ್ನು ಜನರಿಗೆ ತಿಳಿಸಿದರು. ಜನರೆಲ್ಲರೂ ಉಮರ್ ಬಿನ್ ಖತ್ತಾಬ್‌ರನ್ನು(ರ) ಖಲೀಫರಾಗಿ ಅಂಗೀಕರಿಸಿದರು. ಜಮಾದಿಲ್ ಆಖಿರ್ 22ನೆಯ ದಿನಾಂಕ ಸೋಮವಾರ ಅವರು ನೆಮ್ಮದಿಯಿಂದ ಈ ಲೋಕದಿಂದ ಹೊರಟು ಹೋದರು. ಪ್ರವಾದಿಯವರ(ಸ) ಮಸೀದಿಯಲ್ಲಿ ಉಮರ್‌ರ(ರ) ನೇತೃತ್ವದಲ್ಲಿ ಜನಾಝಾ ನಮಾಝ್ ನಿರ್ವಹಿಸಿದ ಬಳಿಕ ಅವರ ಪಾರ್ಥಿವ ಶರೀರವನ್ನು ದಫನ ಮಾಡಲಾಯಿತು. ಸರ್ವಶಕ್ತನಾದ ಅಲ್ಲಾಹನು ಅಬೂಬಕರ್ ಸಿದ್ದೀಕ್‌ರೊಂದಿಗೆ(ರ) ಕರುಣೆ ತೋರಲಿ. ಸೃಷ್ಟಿಕರ್ತ ಮತ್ತು ಸೃಷ್ಟಿಯೊಂದಿಗಿನ ಹೊಣೆಯನ್ನು ಅವರು ಚೆನ್ನಾಗಿ ನಿಭಾಯಿಸಿದ್ದರು. ಅನುಯಾಯಿಗಳಿಗೆ ಅವರು ಪ್ರಕಾಶಮಯ ಹಾದಿಯನ್ನು ತೋರಿಸಿದ್ದರು. ಶ್ರೇಷ್ಠ ಯುಗಪುರುಷರ ಇತಿಹಾಸದಲ್ಲಿ ಅವರ ಹೆಸರು ಸರ್ವಥಾ ಅಚ್ಚಳಿಯದೆ ಉಳಿದಿರುವುದು.

AA

ಉಮರುಲ್ ಫಾರೂಕ್(ರ)

(ಆಡಳಿತ ಕಾಲ-ಹಿ.ಶ. : 13-23, ಕ್ರಿ.ಶ.: 634-644)

ಖತ್ತಾಬ್‌ರ ಪುತ್ರ ಉಮರ್(ರ) ಕುರೈಶ್ ಗೋತ್ರದ ವಿಖ್ಯಾತ ಬನೂ ಅದಿಯ್ಯ್ ಕುಟುಂಬದಲ್ಲಿ ಜನಿಸಿದರು. ಹಿಶಾಮ್‌ರ ಪುತ್ರಿ ಮತ್ತು ಅಬೂಜಹಲ್‌ನ ಸಹೋದರಿ ಹಂತಮಾ ಅವರ ತಾಯಿ. ಆಗ ಆನೆ ಗಲಭೆ ನಡೆದು 13 ವರ್ಷಗಳಾಗಿದ್ದುವು. (ಕ್ರಿ.ಶ. 584)

ಚಿಕ್ಕಂದಿನಲ್ಲಿ ತಂದೆಯ ಜತೆ ಆಡು ಮೇಯಿಸುತ್ತಿದ್ದ ಉಮರ್ ಅನಂತರ ವ್ಯಾಪಾರಿಯಾದರು. ಯುವ ಪ್ರಾಯದಲ್ಲಿಯೇ ಊರಿನ ಓರ್ವ ಗಣ್ಯರಾಗಿದ್ದರು. ಯಾರ ಮುಂದೆಯೂ ಸತ್ಯ ಹೇಳಲು ಹಿಂಜರಿಯುತ್ತಿರಲಿಲ್ಲ. 'ಜಾಹಿಲಿಯ್ಯಾ' ಕಾಲದಲ್ಲಿ ನೆರೆ ರಾಜ್ಯಗಳೊಂದಿಗೆ ಯುದ್ಧ ಅಥವಾ ವಿವಾದವುಂಟಾದರೆ ಉಮರ್ ಬಿನ್ ಖತ್ತಾಬ್‌ರನ್ನು ರಾಯಭಾರಿಯಾಗಿ ಕಳುಹಿಸಲಾಗುತ್ತಿತ್ತು. ಅವರು ಸದಾ ಶೌರ್ಯ ಮತ್ತು ಮನೋಸ್ಥೈರ್ಯದ ಮಾದರಿಯಾಗಿದ್ದರು. ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚೆ ಮುಸ್ಲಿಮರ ಕಡುವೈರಿಯಾಗಿದ್ದ ಉಮರ್(ರ) ಹಲವು ದುರಭ್ಯಾಸಗಳನ್ನು ಹೊಂದಿದ್ದರು. ಆದರೆ ಮುಸ್ಲಿಮರಾದ ಬಳಿಕ ಉಮರ್(ರ) ಎಂಬ ಹೆಸರು ನ್ಯಾಯದ ಪರ್ಯಾಯವಾಯಿತು. ಇದರಿಂದಾಗಿ ಅವರಿಗೆ 'ಅಲ್ ಫಾರೂಕ್' ಎಂಬ ಬಿರುದು ದೊರೆಯಿತು.

ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ಆರಂಭ ಕಾಲದಲ್ಲಿ ಬೆರಳೆಣಿಕೆಯಷ್ಟು ಮಂದಿ ಮಾತ್ರ ಅಂಗೀಕರಿಸಿದ್ದರಷ್ಟೆ. ಅಂದು ಬಡಪಾಯಿ ಮುಸ್ಲಿಮರನ್ನು ಎಲ್ಲೆಡೆ ಮರ್ದಿಸಲಾಗುತ್ತಿತ್ತು. ಅವರಿಗೆ ಸತ್ಯವಿಶ್ವಾಸವನ್ನು ಘೋಷಿಸುವ ಅಥವಾ ಆರಾಧನಾ ಕರ್ಮಗಳನ್ನು ಬಹಿರಂಗವಾಗಿ ನಿರ್ವಹಿಸುವ ಅನುಮತಿಯಿರಲಿಲ್ಲ. ಮುಸ್ಲಿಮರು ಭಯದ ನೆರಳಲ್ಲಿ ದಿನದೂಡುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಮುಸ್ಲಿಮರಿಗೆ ಸ್ವಲ್ಪ ಶಕ್ತಿ ಮತ್ತು ಆತ್ಮವಿಶ್ವಾಸ ದೊರೆಯಲಿಕ್ಕಾಗಿ ಅಮ್ರ್ ಬಿನ್ ಹಿಶಾಮ್(ಅಬೂಜಹಲ್) ಅಥವಾ ಉಮರ್ ಬಿನ್ ಖತ್ತಾಬ್‌ರ ಪೈಕಿ ಯಾರಾದರೊಬ್ಬರು ಇಸ್ಲಾಮ್ ಸ್ವೀಕರಿಸುವಂತಾಗಲೆಂದು ಪ್ರವಾದಿ(ಸ) ಪ್ರಾರ್ಥಿಸುತ್ತಿದ್ದರು. ಅಲ್ಲಾಹನು ಅವರ ಪ್ರಾರ್ಥನೆಯನ್ನು ಉಮರ್‌ರ ಪರವಾಗಿ ಸ್ವೀಕರಿಸಿದನು ಮತ್ತು ಅವರು ಮುಸ್ಲಿಮರಾದರು. ಅವರು ಇಸ್ಲಾಮ್ ಸ್ವೀಕರಿಸಿದ ಕಥೆ ಸುಪ್ರಸಿದ್ಧವಾಗಿದೆ.

ಇಸ್ಲಾಮ್ ಸ್ವೀಕಾರ

ಅದೊಂದು ದಿನ ಉಮರ್ ಕೈಯಲ್ಲಿ ನಗ್ನ ಖಡ್ಗ ಹಿಡಿದು ಬಹಳ ಅವಸರದಿಂದ ಎಲ್ಲಿಗೋ ಹೋಗುತ್ತಿದ್ದರು. ಆಗ ನಈಮ್ ಬಿನ್ ಅಬ್ದುಲ್ಲಾ ಎದುರಿನಿಂದ ಬರುತ್ತಿದ್ದರು. ಉಮರ್‌ರ ಹಾವಭಾವವನ್ನು ಗಮನಿಸಿದಾಗ ಏನೋ ಅಚಾತುರ್ಯವಾಗಿದೆಯೆಂದು ಅವರಿಗೆ ತೋರಿತು. ಅವರು ಉಮರ್‌ರೊಡನೆ "ಉಮರ್, ಎತ್ತ ಹೊರಟಿದ್ದೀರಿ?" ಎಂದು ಕೇಳಿದರು. "ನಾನು ಮುಹಮ್ಮದ್‌ನ(ಸ) ಬಳಿಗೆ ಹೋಗುತ್ತಿದ್ದೇನೆ. ಆತ ಒಂದು ಹೊಸ ಧರ್ಮವನ್ನು ತಂದು ಕುರೈಶರನ್ನು ಒಡೆದಿದ್ದಾನೆ. ಅವರನ್ನು ಮುರ್ಖಗೊಳಿಸಿ ಅವರ ಧರ್ಮವನ್ನೂ ದೇವರನ್ನೂ ತುಚ್ಛೀಕರಿಸಿದ್ದಾನೆ. ಆತನ ತಲೆ ಕಡಿದ ಬಳಿಕವೇ ಮುಂದಿನ ಕೆಲಸ."

"ಉಮರ್, ಸೃಷ್ಟಿಕರ್ತನಾಣೆ! ನೀನು ಮೋಸಗೊಂಡಿರುವೆ. ನೀನು ಮುಹಮ್ಮದ್‌ನನ್ನು(ಸ) ಕೊಂದರೆ, ಅನಂತರ ಅಬ್ದುಮನಾಫ್‌ರ ಮಕ್ಕಳು ನಿನ್ನನ್ನು ಬಿಡಬಹುದೆಂದು ಭಾವಿಸಿದ್ದೀಯಾ? ಅದಿರಲಿ, ನೀನು ಮೊದಲು ನಿನ್ನ ಸ್ವಂತ ಕುಟುಂಬದ ಬಳಿಗೆ ಹೋಗು. ಅವರನ್ನು ಸರಿಪಡಿಸಿದ ಬಳಿಕ ಇತರರ ವಿಷಯ ನೋಡಿದರೆ ಸಾಲದೇ?"

"ನನ್ನ ಕುಟುಂಬದಲ್ಲಿ...?" ಉಮರ್ ಚಕಿತರಾದರು.

"ಹೌದು! ನಿನ್ನ ಸಹೋದರಿ ಫಾತಿಮಾ ಮತ್ತು ಅವರ ಪತಿ ಸಈದ್ ಮುಹಮ್ಮದರ(ಸ) ಧರ್ಮವನ್ನು ಸೇರಿದ್ದಾರೆ." ನಈಮ್ ಸ್ಪಷ್ಟಪಡಿಸಿದರು.

ಈ ವಿಷಯ ತಿಳಿದ ಕೂಡಲೇ ಉಮರ್ ಸಹೋದರಿಯ ಮನೆಯತ್ತ ನಡೆದರು. ಮನೆ ಸಮೀಪಿಸಿದಾಗ ಸುಮಧುರ ರಾಗವೊಂದು ಕೇಳಿಸಿತು. ಒಳಗೆ ಖಬ್ಬಾಬ್(ರ) ಎಂಬೋರ್ವ ಸಹಾಬಿಯಿದ್ದರು. ಅವರು ಕುರ್‌ಆನಿನ 'ತಾಹಾ' ಅಧ್ಯಾಯವನ್ನು ಫಾತಿಮಾ ಮತ್ತು ಅವರ ಪತಿಗೆ ಓದಿ ಹೇಳುತ್ತಿದ್ದರು. ತನಗೆ ದೊರೆತ ಸುದ್ದಿ ಸತ್ಯವೆಂದು ಉಮರ್‌ರಿಗೆ ಮನವರಿಕೆಯಾಯಿತು. ಅವರು ಕೋಪಾವೇಶದಿಂದ ಬಾಗಿಲು ಬಡಿದರು. ಉಮರ್ ಬಂದರೆಂದರಿತ ಖಬ್ಬಾಬ್(ರ) ಮನೆಯೊಳಗೆ ಅಡಗಿಕೊಂಡರು. ಫಾತಿಮಾ(ರ) ಕುರ್‌ಆನಿನ ಕಡತಗಳನ್ನು ಅಡಗಿಸಿಟ್ಟರು.

"ಇಲ್ಲಿ ಏನೋ ರಾಗ ಕೇಳಿಸಿತು. ಅದೇನು?" ಉಮರ್ ಆರ್ಭಟಿಸಿದರು.

ಫಾತಿಮಾ ಮತ್ತು ಸಈದ್ ಚಕಾರವೆತ್ತಲಿಲ್ಲ. ಆದರೆ ಉಮರ್‌ರ ಕೋಪ ಕಾವೇರುತ್ತಿತ್ತು. ತನ್ನ ತಂದೆಯ ಸಹೋದರ ಪುತ್ರರೂ ಆಗಿದ್ದ ಸಈದ್‌ರನ್ನು ನೋಡಿ ಅವರು ಘರ್ಜಿಸಿದರು: "ನನಗೆ ಎಲ್ಲವೂ ತಿಳಿದಿದೆ. ನೀವು ಮುಹಮ್ಮದ್‌ನ(ಸ) ಹೊಸ ಧರ್ಮದಲ್ಲಿ ಸೇರಿದ್ದೀರಲ್ಲವೇ" ಎನ್ನುತ್ತಾ ಸಈದ್‌ರ ಮುಖಕ್ಕೆ ಬಲವಾಗಿ ಹೊಡೆದರು. ಇದನ್ನು ನೋಡಿದ ಫಾತಿಮಾ ಮಧ್ಯ ಪ್ರವೇಶಿಸಿ ಉಮರ್‌ರ ಕೈ ಹಿಡಿದರು. ಅವರ ಮುಖಕ್ಕೂ ಏಟು ಬಿತ್ತು. ಆದರೂ ಅವರು ಹಿಂಜರಿಯಲಿಲ್ಲ. ಧೈರ್ಯದಿಂದ ಉಮರ್‌ರ ಮುಖವನ್ನು ನೋಡಿ ಹೀಗೆಂದರು:

"ಹೌದು! ನಾವು ಅಲ್ಲಾಹ್ ಮತ್ತು ಆತನ ಪ್ರವಾದಿಯವರ(ಸ) ಮೇಲೆ ವಿಶ್ವಾಸವಿರಿಸಿದ್ದೇವೆ. ಇನ್ನು ನೀವು ನಿಮಗೆ ತೋಚಿದಂತೆ ಮಾಡಬಹುದು."

ಅವರೀರ್ವರ ಮುಖದಿಂದ ರಕ್ತ ಹರಿಯುತ್ತಿತ್ತು. ಅದನ್ನು ನೋಡಿ ಉಮರ್‌ರಿಗೆ(ರ)

ಖೇದವಾಯಿತು. ಶಾಂತರಾಗಿ ಅವರು ಓದುತ್ತಿದ್ದ ಕಡತವನ್ನು ಕೇಳಿದರು. ಫಾತಿಮಾ(ರ) ಹೀಗೆಂದರು: "ನೀವು ಶಿರ್ಕ್‌ನಿಂದಾಗಿ ಮಲಿನಗೊಂಡಿದ್ದೀರಿ. ಇದನ್ನು ಕೇವಲ ಶುದ್ಧಿಯಿಂದ ಸ್ಪರ್ಶಿಸಬೇಕಾಗಿದೆ."

ಉಮರ್ ಸ್ನಾನ ಮಾಡಿ ಶುದ್ಧರಾಗಿ ಬಂದ ಬಳಿಕ 'ತಾಹಾ' ಎಂಬ ಅಧ್ಯಾಯ ಬರೆದ ಕಡತಗಳನ್ನು ಅವರಿಗೆ ನೀಡಿದರು. ಅರಬಿ ಸಾಹಿತ್ಯದ ಬಗ್ಗೆ ಉತ್ತಮ ಜ್ಞಾನವಿದ್ದ ಉಮರ್‌ರಿಗೆ(ರ) ಆ ವಾಕ್ಯಗಳು ಬಹಳ ಆಕರ್ಷಕವಾಗಿ ತೋರಿತು. ಯಾವುದೋ ದಿವ್ಯತೆಯು ಆ ವಾಕ್ಯಗಳಲ್ಲಿ ಅಡಗಿದೆಯೆಂದು ಅವರಿಗೆ ಭಾಸವಾಯಿತು. "ಎಂತಹ ಸುಂದರ ವಾಕ್ಯಗಳು" ಎಂಬ ಉದ್ಗಾರ ಅವರಿಗರಿವಿಲ್ಲದೆಯೇ ಹೊರಬಂತು.

ಅದನ್ನು ಕೇಳಿದಾಗ ಅಡಗಿಕೊಂಡಿದ್ದ ಖಬ್ಬಾಬ್(ರ) ಉಮರ್‌ರ ಬಳಿ ಬಂದರು. "ಉಮರ್, ಅಲ್ಲಾಹನಾಣೆ! ಪ್ರವಾದಿಯವರ(ಸ) ಪ್ರಾರ್ಥನೆಯನ್ನು ಅಲ್ಲಾಹ್ ಸ್ವೀಕರಿಸಿದಂತೆ ಭಾಸವಾಗುತ್ತದೆ. ಅವರು ನಿನ್ನೆ, ಉಮರ್ ಅಥವಾ ಅಮ್ರ್‌ರ ಮನದಲ್ಲಿ ಇಸ್ಲಾಮಿನ ಒಲವು ಮೂಡಿಸಬೇಕೆಂದು ಪ್ರಾರ್ಥಿಸಿದ್ದರು. ಉಮರ್, ಅಲ್ಲಾಹನನ್ನು ಭಯಪಡಿರಿ."

ಅದಾಗಲೇ, ಇಸ್ಲಾಮ್ ಸ್ವೀಕರಿಸುವ ನಿರ್ಧಾರ ಮಾಡಿದ್ದ ಉಮರ್(ರ) ಹೇಳಿದರು: "ಖಬ್ಬಾಬ್ ಬನ್ನಿ, ನೀವು ನನಗೆ ಮುಹಮ್ಮದ್‌ರನ್ನು(ಸ) ತೋರಿಸಿರಿ. ನಾನು ಈ ಸತ್ಯ ಧರ್ಮವನ್ನು ಸ್ವೀಕರಿಸುತ್ತೇನೆ."

ಅಂತೆಯೇ ಸಫಾ ಬೆಟ್ಟದ ಬದಿಯಲ್ಲಿರುವ 'ದಾರುಲ್ ಅರ್ಕಮ್'ಗೆ ಹೋಗಿ ಪ್ರವಾದಿಯವರ(ಸ) ಸಮಕ್ಷಮ ಉಮರ್ ಇಸ್ಲಾಮ್ ಸ್ವೀಕರಿಸಿದರು.

ಇಸ್ಲಾಮೀ ಆಂದೋಲನದ ಐದನೆಯ ವರ್ಷದಲ್ಲಿ ಉಮರ್ ಬಿನ್ ಖತ್ತಾಬ್(ರ) ಮುಸ್ಲಿಮರಾದರು. ಇದು ಇಸ್ಲಾಮಿನ ಮಟ್ಟಿಗೆ ಮಹಾ ವಿಜಯವಾಗಿದ್ದಿತು. ಪ್ರವಾದಿಯವರ(ಸ) ಓರ್ವ ಪ್ರಮುಖ ಸಹಾಬಿಯಾಗಿದ್ದ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳುವುದನ್ನು ನೋಡಿರಿ: "ಉಮರ್‌ರ ಇಸ್ಲಾಮ್ ಸ್ವೀಕಾರವು ಮಹಾ ವಿಜಯ, ಅವರ ವಲಸೆ ಮಹಾ ಸಹಾಯ ಮತ್ತು ಅವರ ಆಡಳಿತವು ಮಹಾ ಅನುಗ್ರಹ ಆಗಿದ್ದಿತು. ಕಅಬಾಲಯದಲ್ಲಿ ನಮಗೆ ನಮಾಝ್ ನಿರ್ವಹಿಸಲು ಸಾಧ್ಯವಿರಲಿಲ್ಲ. ಉಮರ್ ಮುಸ್ಲಿಮರಾದಾಗ ಅವರೊಂದಿಗೆ ಹೋರಾಡಿದರು. ಅನಂತರ ಅವರು ನಮಗೆ ನಮಾಝ್‌ಗೆ ಅವಕಾಶ ಮಾಡಿಕೊಟ್ಟರು."

ಉಮರ್‌ರ(ರ) ವಲಸೆ

ಇಸ್ಲಾಮ್‌ಗೆ ಸೇರುವುದಕ್ಕಿಂತ ಮುಂಚಿನಂತೆಯೇ ಅನಂತರವೂ ಶೌರ್ಯದಲ್ಲಿ ಉಮರ್‌ರನ್ನು(ರ) ಮೀರಿಸುವವರಿರಲಿಲ್ಲ. ಅಲೀಯವರು(ರ) ಹೀಗೆಂದಿದ್ದರು: ಮುಹಾಜಿರರೆಲ್ಲರೂ ಗುಟ್ಟಾಗಿಯೇ ವಲಸೆ ಹೋಗಿದ್ದರು. ಆದರೆ ಉಮರ್ ಮಾತ್ರ ಅದಕ್ಕೆ ಅಪವಾದವಾಗಿದ್ದರು. ಅವರು ವಲಸೆ(ಹಿಜ್ರತ್) ಹೊರಟಾಗ ತಮ್ಮ ಖಡ್ಗವನ್ನು ಸೊಂಟದಲ್ಲಿ ಧರಿಸಿದರು. ಬಿಲ್ಲನ್ನು ಹೆಗಲಿಗೇರಿಸಿದರು. ಕೆಲವು ಬಾಣಗಳನ್ನು ಕೈಯಲ್ಲಿ ಹಿಡಿದುಕೊಂಡರು. ಒಂದು ಬೆತ್ತವನ್ನು ಬೆನ್ನ ಹಿಂದೆ ಇರಿಸಿದರು. ಅಲ್ಲಿಂದ ನೇರವಾಗಿ ಕಅಬಾಲಯಕ್ಕೆ ಹೋದರು. ಅಲ್ಲಿ ಅನೇಕ

ಕುರೈಶಿ ಗಣ್ಯರು ಉಪಸ್ಥಿತರಿದ್ದರು. ಅವರನ್ನು ಗಮನಿಸದೆ ಉಮರ್ 7 ಬಾರಿ ಕಅಬಾಲಯಕ್ಕೆ ಪ್ರದಕ್ಷಿಣೆ ಬಂದರು. ತರುವಾಯ ಮಕಾಮು ಇಬ್‌ರಾಹೀಮ್ ಬಳಿ ನಮಾಝ್ ಮಾಡಿದ ಬಳಿಕ ಕುರೈಶರತ್ತ ನೋಡಿ ಹೀಗೆಂದರು: "ಯಾರ ತಾಯಿಗಾದರೂ ಮಗ ಬೇಡವೆಂದಿದ್ದರೆ, ಯಾರ ಮಕ್ಕಳಾದರೂ ಅನಾಥರಾಗಬೇಕೆಂದಿದ್ದರೆ ಈ ಕಣಿವೆಯಾಚೆ ನನ್ನನ್ನು ಎದುರಿಸಿರಿ." ಆದರೆ, ಯಾರೂ ಉಮರ್(ರ) ಹೋಗುವ ಹಾದಿಯ ಬಳಿ ನಿಲ್ಲುವ ಧೈರ್ಯ ತೋರಿಸಲಿಲ್ಲ. ಹೀಗೆ ಬಹಳ ಧೈರ್ಯದಿಂದ ಎಲ್ಲರಿಗೂ ತಿಳಿಸಿ ಉಮರ್(ರ) ಮದೀನಾಕ್ಕೆ ವಲಸೆ ಹೋದರು.

ಇಸ್ಲಾಮಿೂ ದಾರ್ಶನಿಕ

ಹ. ಉಮರ್(ರ) ಮುಸ್ಲಿಮರಾದ ಬಳಿಕ ಪ್ರವಾದಿಯವರ(ಸ) ಆಪ್ತ ಸಂಗಾತಿಗಳಲ್ಲೋರ್ವರಾದರು. ಅವರು ಇಸ್ಲಾಮ್ ಧರ್ಮವನ್ನು ಪ್ರವಾದಿಯವರ(ಸ) ನಾಲಗೆಯಿಂದಲೇ ಕೇಳಿ ಕಲಿಯಲು ಪ್ರಯತ್ನಿಸಿದರು. ಕೆಲವೊಮ್ಮೆ ಉದ್ಯೋಗಾರ್ಥ ಪ್ರವಾದಿಯವರ(ಸ) ಬಳಿಯಿಂದ ದೂರ ಹೋಗುವ ಸಂದರ್ಭ ಬಂದರೆ, ತಮ್ಮ ಬದಲಿಗೆ ಓರ್ವ ಅನ್ಸಾರಿಯನ್ನು ನೇಮಿಸುತ್ತಿದ್ದರು. ಮರಳಿ ಬಂದ ಬಳಿಕ ಪ್ರವಾದಿಯವರು(ಸ) ಹೇಳಿದ ಮತ್ತು ಕಲಿಸಿದ ವಿಷಯಗಳನ್ನು ಸಂಗಡಿಗನಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಇಮಾಮ್ ನವವಿಯವರು ಉಲ್ಲೇಖಿಸಿದ ವರದಿಯೊಂದರಲ್ಲಿ ಹೀಗೆ ಹೇಳಲಾಗಿದೆ: ಅಬ್ದುಲ್ಲಾ ಬಿನ್ ಉಮರ್‌ರೊಡನೆ ಯಾರೋ ಕೇಳಿದರು: "ಪ್ರವಾದಿಯವರ(ಸ) ಕಾಲದಲ್ಲಿ 'ಫತ್ವಾ' ನೀಡುತ್ತಿದ್ದ ಸಹಾಬಿಗಳು ಯಾರು?" ಅವರು ಹೇಳಿದರು.

"ಅಬೂಬಕರ್ ಮತ್ತು ಉಮರ್."

ಅಬೂಬಕರ್ ಸಿದ್ದೀಕ್‌ರಂತೆಯೇ(ರ) ಉಮರ್‌ರೂ(ರ) ಕುರ್‌ಆನಿನ ಗಾಢ ಅಧ್ಯಯನ ನಡೆಸಿದ್ದರು. ಪ್ರವಾದಿಯವರ(ಸ) ಚರ್ಯೆಯನ್ನು ಶ್ರದ್ಧೆಯಿಂದ ತಿಳಿದುಕೊಂಡಿದ್ದರು. ಆದ್ದರಿಂದ, ಯಾವ ವಿಷಯಗಳಲ್ಲಿಯೂ ಇಸ್ಲಾಮಿನ ರೀತಿ ನೀತಿಗಳನ್ನು ಮೈಗೂಡಿಸಲು ಉಮರ್‌ರಿಗೆ(ರ) ಕಷ್ಟವಾಗಲಿಲ್ಲ. ಕೆಲವೊಮ್ಮೆ ಉಮರ್(ರ) ಇತರ ಸಹಾಬಿಗಳಿಗಿಂತ ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಅನಂತರ ಉಮರ್‌ರ(ರ) ಅಭಿಪ್ರಾಯವನ್ನು ಸಮರ್ಥಿಸುವ ಕುರ್‌ಆನ್ ವಾಕ್ಯಗಳು ಅವತೀರ್ಣಗೊಂಡಿದ್ದವು. ಬದ್ರ್ ಯುದ್ಧದ ಕೈದಿಗಳ ಸಮಸ್ಯೆಯು ಅದಕ್ಕೆ ಉದಾಹರಣೆಯಾಗಿದೆ.

ಬದ್ರ್ ಯುದ್ಧದಲ್ಲಿ ಮುಸ್ಲಿಮರು 70ಕುರೈಶಿ ಗಣ್ಯರನ್ನು ಬಂಧಿಸಿದ್ದರು. ಏನಾದರೂ ಪರಿಹಾರ ನೀಡಿ ಅವರನ್ನು ಬಿಡುಗಡೆಗೊಳಿಸಲಿಕ್ಕಾಗಿ ಪ್ರವಾದಿಯವರೊಡನೆ(ಸ) ಮಾತುಕತೆ ನಡೆಸಲು ಅವರು ಅಬೂಬಕರ್‌ರ(ರ) ಬಳಿಗೆ ಹೋದರು. ಅವರು ಅದಕ್ಕೆ ಒಪ್ಪಿದರು. ಆರ್ಥಿಕವಾಗಿ ಬಹಳ ಸೊರಗಿದ್ದ ಆ ಸಂದರ್ಭದಲ್ಲಿ ಕೈದಿಗಳ ಪರವಾಗಿ ಅವರಿಂದ ಪರಿಹಾರಧನ ದೊರೆತರೆ ಮುಸ್ಲಿಮರಿಗೆ ಪ್ರಯೋಜನವಾದೀತೆಂದು ಸಿದ್ದೀಕ್(ರ) ಭಾವಿಸಿದ್ದರು. ಆದರೆ ಇದೇ ಅಗತ್ಯಕ್ಕಾಗಿ ಅವರು ಉಮರ್‌ರ(ರ) ಬಳಿ ಹೋದಾಗ ಅವರನ್ನು ನಿರ್ಲಕ್ಷಿಸಿದ್ದರು. ಈ ಸತ್ಯನಿಷೇಧಿಗಳ ನಾಯಕರನ್ನು ಬಿಟ್ಟರೆ ಅವರು ಪುನಃ ಉಗ್ರ ದಾಳಿ ನಡೆಸಬಹುದೆಂದು

ಉಮರ್(ರ) ಮನಗಂಡಿದ್ದರು. ಅನಂತರ ಈ ಸಮಸ್ಯೆ ಪ್ರವಾದಿಯವರ(ಸ) ಮುಂದೆ ಬಂತು. ಅವರು ಸಹಾಬಿಗಳೊಡನೆ ಸಮಾಲೋಚಿಸಿದರು. ಉಮರ್(ರ) ಹೇಳಿದರು: "ಅಲ್ಲಾಹನ ಪ್ರವಾದಿಗಳೇ(ಸ), ಅವರು ಅಲ್ಲಾಹನ ವೈರಿಗಳಾಗಿದ್ದಾರೆ. ಅವರು ನಿಮ್ಮನ್ನು ಗೇಲಿ ಮಾಡಿದರು. ಊರಿನಿಂದ ಹೊರ ಹಾಕಿದರು. ನಿಮ್ಮೊಡನೆ ಯುದ್ಧ ಮಾಡಿದರು. ಆದ್ದರಿಂದ ಅವರ ತಲೆ ಕಡಿಯಬೇಕು. ಅವರು ಸತ್ಯನಿಷೇಧದ ಮುಖಂಡರು ಮತ್ತು ದುರ್ಮಾರ್ಗದ ನಾಯಕರಾಗಿದ್ದಾರೆ. ಅವರ ನಿರ್ಮೂಲನದಿಂದ ಅಲ್ಲಾಹನು ಇಸ್ಲಾಮಿನ ಮಾರ್ಗವನ್ನು ಸುಗಮಗೊಳಿಸಿ ಬಹುದೇವಾರಾಧಕರನ್ನು ನಿಂದ್ಯಗೊಳಿಸುತ್ತಾನೆ."

ಇತರ ಸಹಾಬಿಗಳು ಅಬೂಬಕರ್ ಸಿದ್ದೀಕ್‌ರ(ರ) ಅಭಿಪ್ರಾಯಕ್ಕೆ ಒತ್ತು ನೀಡಿದರು. ಆದ್ದರಿಂದ ಪ್ರವಾದಿಯವರು(ಸ) ಅದನ್ನು ಸ್ವೀಕರಿಸಿದರು. ಆದರೆ ಆ ಕೂಡಲೇ ಅವತೀರ್ಣಗೊಂಡ ಕುರ್‌ಆನ್ ವಾಕ್ಯವು ಆ ಅಭಿಪ್ರಾಯವನ್ನು ಖಂಡಿಸಿ ಉಮರ್‌ರ(ರ) ಅಭಿಪ್ರಾಯವನ್ನು ಸಮರ್ಥಿಸಿತ್ತು. ಭೂಮಿಯಲ್ಲಿ ಶತ್ರುಗಳನ್ನು ಚೆನ್ನಾಗಿ ಸದೆಬಡಿಯುವವರೆಗೂ ತನ್ನ ಬಳಿ ಸೆರೆಯಾಳುಗಳಿರುವುದು ಓರ್ವ ಪ್ರವಾದಿಗೆ ಶೋಭಿಸುವುದಿಲ್ಲ. ನೀವು ಲೌಕಿಕ ಲಾಭಗಳನ್ನು ಬಯಸುತ್ತೀರಿ. ವಸ್ತುತಃ ಅಲ್ಲಾಹನ ದೃಷ್ಟಿಯಲ್ಲಿ ಪರಲೋಕವಿದೆ. ಅಲ್ಲಾಹ್ ಮಹಾ ಪ್ರತಾಪಿಯೂ ಧೀಮಂತನೂ ಆಗಿರುತ್ತಾನೆ. (8:67)

ಉಮರ್‌ರ(ರ) ಅಭಿಪ್ರಾಯಕ್ಕೆ ಪೂರಕವಾಗಿ ಹಲವು ಬಾರಿ ಕುರ್‌ಆನ್ ವಾಕ್ಯಗಳು ಅವತೀರ್ಣಗೊಂಡಿವೆ. ಅಬ್ದುಲ್ಲಾ ಬಿನ್ ಉಬೈ ಎಂಬಾತನು ಇಸ್ಲಾಮಿನ ನಾಶಕ್ಕಾಗಿ ಸರ್ವರೀತಿಯಿಂದಲೂ ಪ್ರಯತ್ನಿಸಿ ಸೋತ ಓರ್ವ ಕಪಟವಿಶ್ವಾಸಿಯಾಗಿದ್ದನು. ಆತನು ನಿಧನನಾದಾಗ ಪ್ರವಾದಿಯವರು(ಸ) ಆತನ ಜನಾಝ ನಮಾಝ್ ನಿರ್ವಹಿಸಬಾರದೆಂದು ಉಮರ್‌ರ(ರ) ಅಭಿಪ್ರಾಯವಾಗಿತ್ತು. ಆತನು ಇಸ್ಲಾಮಿನ ವಿರುದ್ಧ ಪ್ರಯೋಗಿಸಿದ್ದ ಕುತಂತ್ರಗಳನ್ನು ವಿವರಿಸುತ್ತಾ ಉಮರ್(ರ) ತನ್ನ ಅಭಿಪ್ರಾಯವನ್ನು ಪ್ರವಾದಿಯವರಿಗೆ(ಸ) ತಿಳಿಸಿದರು. ಆದರೆ, ಪ್ರವಾದಿಯವರು(ಸ) ಧರ್ಮದ ಬಗ್ಗೆ ಉಮರ್‌ರ(ರ) ಅಭಿಪ್ರಾಯ ಪ್ರಜ್ಞೆಯನ್ನು ಬಹಳಷ್ಟು ಹೊಗಳಿದರಾದರೂ ಆ ಅಭಿಪ್ರಾಯವನ್ನು ಅಂಗೀಕರಿಸಲಿಲ್ಲ. ಬದಲಾಗಿ ಇಬ್ನ್ ಉಬೈಗಾಗಿ ನಮಾಝ್ ಮಾಡಿ ದಫನ ಭೂಮಿಯ ತನಕ ಮಯ್ಯಿತ್ತನ್ನು ಹಿಂಬಾಲಿಸಿದರು. ಆದರೆ ಆ ಬಳಿಕ ಈ ರೀತಿಯ ಕುರ್‌ಆನ್ ವಾಕ್ಯ ಅವತೀರ್ಣಗೊಂಡಿತು.

وَلَا تُصَلِّ عَلَىٰٓ أَحَدٍ مِّنْهُم مَّاتَ أَبَدًا وَلَا تَقُمْ عَلَىٰ قَبْرِهِۦٓ

"ಇನ್ನು ಮುಂದೆ ಅವರಲ್ಲಿ(ಕಪಟ ವಿಶ್ವಾಸಿಗಳಲ್ಲಿ) ಯಾರಾದರೂ ಮರಣ ಹೊಂದಿದರೆ ಅವರ ಜನಝಾ ನಮಾಝನ್ನು ಎಷ್ಟು ಮಾತ್ರಕ್ಕೂ ನಿರ್ವಹಿಸಬಾರದು ಮತ್ತು ಅವರ ಸಮಾಧಿಯ ಬಳಿ ಎಂದಿಗೂ ನಿಲ್ಲಬಾರದು." (9:84)

ಅಜ್ಞಾನ ಕಾಲದಲ್ಲಿ ಉಮರ್(ರ) ಮದ್ಯದ ಅಮಲನ್ನು ಚೆನ್ನಾಗಿ ಸವಿದಿದ್ದರು. ಆದರೆ ಮುಸ್ಲಿಮರಾದ ಬಳಿಕ ಮದ್ಯವು, ಇಸ್ಲಾಮ್ ಬಯಸುವ ಸಂಸ್ಕೃತಿ ಮತ್ತು ಸ್ನೇಹ ಬಾಂಧವ್ಯ ಭಾವನೆಗಳಿಗೆ ತಕ್ಕುದಲ್ಲವೆಂದು ಅವರು ಮನಗಂಡರು. ಮದ್ಯವನ್ನು ಮುಸ್ಲಿಮರಿಗೆ ನಿಷೇಧಿಸಿದರೆ

ಒಳಿತೆಂದು ಭಾವಿಸಿ ಆ ಕುರಿತು ಪ್ರವಾದಿಯವರೊಡನೆ(ಸ) ವಿಚಾರಿಸಿದರು. ಆಗ ಈ ಕುರ್‌ಆನ್ ವಾಕ್ಯ ಅವತೀರ್ಣಗೊಂಡಿತು.

"ಮದ್ಯಪಾನ ಮತ್ತು ಜೂಜಾಟದ ಬಗ್ಗೆ ಏನು ಆದೇಶವಿದೆಯೆಂದು ಕೇಳುತ್ತಾರೆ. ಹೇಳಿರಿ! ಅವೆರಡರಲ್ಲೂ ಮಹತ್ತರವಾದ ಕೇಡಿದೆ. ಅವುಗಳಲ್ಲಿ ಜನರಿಗೆ ಕೆಲವು ಪ್ರಯೋಜನಗಳು ಇದ್ದರೂ ಅವುಗಳಿಂದಾಗುವ ಹಾನಿಯು ಪ್ರಯೋಜನಗಳಿಗಿಂತ ಬಹಳಷ್ಟು ಹೆಚ್ಚು."(2:129)

ಈ ವಚನದಲ್ಲಿ ಮದ್ಯವನ್ನು ಸ್ಪಷ್ಟವಾಗಿ ನಿಷೇಧಿಸಿರಲಿಲ್ಲ. ಆದ್ದರಿಂದ ಉಮರ್(ರ) ಮತ್ತೊಮ್ಮೆ ಪ್ರವಾದಿಯವರೊಡನೆ(ಸ) ಈ ಬಗ್ಗೆ ಹೇಳಿದರು. ಬುದ್ಧಿ ಮತ್ತು ಸಂಪತ್ತನ್ನು ಕೆಡಿಸುವ ಮದ್ಯದ ಬಗ್ಗೆ ಒಂದು ಸ್ಪಷ್ಟವಾದ ನಿಯಮವನ್ನು ನಮಗೆ ತಿಳಿಸೆಂದು ಅಲ್ಲಾಹನೊಡನೆ ಪ್ರಾರ್ಥಿಸಿದರು. ಆ ಬಳಿಕ ಮದ್ಯ ಸೇವಿಸಿ ಅಮಲುಕೋರರಾಗಿ ನಮಾಝ್‌ಗೆ ನಿಲ್ಲಬೇಡಿರೆಂಬ ಕುರ್‌ಆನ್ ವಾಕ್ಯ ಅವತೀರ್ಣಗೊಂಡಿತು. ಆ ಆಜ್ಞೆಯಲ್ಲಿಯೂ ಮದ್ಯವನ್ನು ಸಂಪೂರ್ಣವಾಗಿ ನಿಷೇಧಿಸಿರಲಿಲ್ಲ. ಆ ಕುರಿತು ಪುನಃ ಪ್ರವಾದಿಯವರೊಡನೆ(ಸ) ಮಾತಾಡಿ ಅಲ್ಲಾಹನೊಡನೆ ಪ್ರಾರ್ಥಿಸಿದರು. ಕೊನೆಗೆ ಉಮರ್‌ರ(ರ) ಆಗ್ರಹದಂತೆಯೇ ಮದ್ಯವನ್ನು ಸಂಪೂರ್ಣವಾಗಿ ನಿಷೇಧಿಸುವ ಕುರ್‌ಆನ್ ವಾಕ್ಯಗಳು ಅವತೀರ್ಣಗೊಂಡವು.

ಪ್ರವಾದಿಯವರ(ಸ) ಪತ್ನಿಯರು ಇತರ ಮಹಿಳೆಯರಿಗಿಂತ ವಿಶಿಷ್ಟರಾಗಿದ್ದರು. ಎಲ್ಲ ವಿಷಯಗಳಲ್ಲಿಯೂ ಅವರು ಇತರರಿಗೆ ಮಾದರಿಯಾಗಬೇಕಿತ್ತು. ಆದ್ದರಿಂದ, ಸಮಯ ಪರಿವೆಯಿಲ್ಲದೇ ಯಾರು ಯಾವಾಗ ಬೇಕಾದರೂ ಅವರ ಬಳಿ ಹೋಗಿ ಮಾತಾಡುವ ಸ್ಥಿತಿಯಿರಬಾರದೆಂಬುದು ಉಮರ್‌ರ(ರ) ಅಭಿಪ್ರಾಯವಾಗಿತ್ತು. ಆದ್ದರಿಂದ ಉಮ್ಮಹಾತುಲ್ ಮುಅ್‌ಮಿನೀನ್(ಪ್ರವಾದಿಯ ಪತ್ನಿಯರು) ಪರದೆಯ ಅಡ್ಡ ನಿಂತು ಮಾತಾಡಬೇಕು ಅಥವಾ ನೋಡಿದರೆ ಸರಿಯಾಗಿ ಗುರುತಿಸಲಾಗದಂತಹ ಉಡುಪು ಧರಿಸಬೇಕೆಂಬ ಬಯಕೆಯನ್ನು ಉಮರ್(ರ) ಪ್ರವಾದಿಯವರಿಗೆ(ಸ) ತಿಳಿಸಿದರು. ಪ್ರವಾದಿಯವರಿಗೆ(ಸ) ಈ ಅಭಿಪ್ರಾಯ ಸರಿಕಂಡಿತು. ಆದರೆ ಕೆಲವು ಕಾರಣಗಳಿಂದಾಗಿ ಆ ಅಭಿಪ್ರಾಯವನ್ನು ಕಾರ್ಯಗತಗೊಳಿಸಿರಲಿಲ್ಲ. ಕೆಲ ಸಮಯದಲ್ಲಿಯೇ ಉಮರ್‌ರ(ರ) ಅಭಿಲಾಷೆಯಂತೆಯೇ ಕುರ್‌ಆನ್ ಮೂಲಕ ನಿಯಮವು ಅವತೀರ್ಣಗೊಂಡಿತು. ಅದೇ 'ಆಯತುಲ್ ಹಿಜಾಬ್.'

ಇತರ ಕೆಲವು ಸಂದರ್ಭಗಳಲ್ಲಿಯೂ ಉಮರ್‌ರ ಅಭಿಪ್ರಾಯಕ್ಕೆ ಅನುಕೂಲವಾದ ಕುರ್‌ಆನ್ ವಾಕ್ಯಗಳು ಅವತೀರ್ಣಗೊಂಡಿದ್ದುವು. ಉಮರ್(ರ) ವಿಷಯಗಳನ್ನು ಸಮರ್ಥವಾಗಿ ವಿಶ್ಲೇಷಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಹಾಗಿದ್ದರೂ ಕೆಲವೊಮ್ಮೆ ಪ್ರವಾದಿಯವರು(ಸ) ಉಮರ್‌ರ(ರ) ಅಭಿಪ್ರಾಯವನ್ನು ತಿರಸ್ಕರಿಸಿ, ಅನಂತರ ಆ ಅಭಿಪ್ರಾಯವು ಸರಿಯಾದುದಲ್ಲವೆಂದು ಸ್ವಯಂ ಉಮರ್‌ರಿಗೆ(ರ) ಮನವರಿಕೆಯಾದ ಸಂದರ್ಭಗಳೂ ಇದ್ದವು. ಆದರೂ ಅವು ಉಮರ್‌ರ(ರ) ಅಭಿಪ್ರಾಯಗಳ ಘನತೆಯನ್ನು ಕುಗ್ಗಿಸಿರಲಿಲ್ಲ. ಎಲ್ಲ ಪ್ರಮುಖ ವಿಷಯಗಳ ಬಗ್ಗೆಯೂ ಪ್ರವಾದಿಯವರು(ಸ) ಉಮರ್‌ರೊಡನೆ ಅಭಿಪ್ರಾಯ ಕೇಳುತ್ತಿದ್ದರು. "ಅಲ್ಲಾಹನು ಉಮರ್‌ರ(ರ) ನಾಲಗೆ ಮತ್ತು ಹೃದಯದಲ್ಲಿ ಸತ್ಯವನ್ನು ನೆಲೆಗೊಳಿಸಿರುವನು" ಎಂದು ಅವರನ್ನು ಪ್ರಶಂಸಿಸುತ್ತಿದ್ದರು. ಅನಂತರ ಅಬೂಬಕರ್ ಸಿದ್ದೀಕ್‌ರೂ(ರ) ಉಮರ್‌ರ(ರ)

ಅಭಿಪ್ರಾಯಗಳಿಗೆ ಹೆಚ್ಚಿನ ಆದ್ಯತೆ ನೀಡಿದರು. ಸಹಾಬಿಗಳಲ್ಲಿ ಉಮರ್‌ರಂತೆ(ರ) ಸರಿಯಾದ ರೀತಿಯಲ್ಲಿ ವಿಚಾರ ಮಾಡಿ ಕೆಲಸ ಮಾಡಬಲ್ಲಂತಹ ಅನ್ಯ ವ್ಯಕ್ತಿಗಳಿಲ್ಲದಿದ್ದುದರಿಂದಲೇ ಅಬೂಬಕರ್(ರ) ಉಮರ್‌ರನ್ನು(ರ) ಮುಂದಿನ ಖಲೀಫರಾಗಿ ನಿರ್ಣಯಿಸಿದ್ದರು.

ಪರ್ಶಿಯನ್ ಸಾಮ್ರಾಜ್ಯದ ವಿಜಯ

ಅಬೂಬಕರ್(ರ) ತಮ್ಮ ನಿಧನದ ವೇಳೆ ಮುಸ್ಲಿಮರಿಗೆ ನೀಡಿದ ಆದೇಶ(ವಸಿಯ್ಯತ್)ದನ್ವಯ ಅವರು ಉಮರ್‌ರನ್ನು(ರ) ದ್ವಿತೀಯ ಖಲೀಫರಾಗಿ ಅಂಗೀಕರಿಸಿದರು. ಇಬ್ನ್ ಮಸ್‌ಊದ್(ರ) ಹೇಳಿರುವಂತೆ, ಉಮರ್‌ರ(ರ) ಖಿಲಾಫತ್ ಮುಸ್ಲಿಮರಿಗೆ ದೊಡ್ಡ ಅನುಗ್ರಹವಾಗಿತ್ತು.

ಅಬೂಬಕರ್ ಸಿದ್ದೀಕ್(ರ) ಮುಸ್ಲಿಮರ ಕಡುವೈರಿಗಳಾಗಿದ್ದ ಎರಡು ಮಹಾಶಕ್ತಿಗಳನ್ನು ಅಣಗಿಸುವ ಪ್ರಯತ್ನವನ್ನು ಆರಂಭಿಸಿದ್ದರು. ಅಷ್ಟರಲ್ಲಿ ಅವರು ನಿಧನರಾದರು. ಆದ್ದರಿಂದ ಖಲೀಫ ಉಮರ್(ರ) ಮೊದಲು ಸಿದ್ದೀಕ್(ರ) ಆರಂಭಿಸಿದ್ದ ಕೆಲಸವನ್ನು ಪೂರ್ಣಗೊಳಿಸಬೇಕಾಗಿತ್ತು.

ಇರಾಕ್ ವಿಜಯ

ಅಬೂಬಕರ್(ರ) ಇರಾಕ್‌ನಿಂದ ಖಾಲಿದ್‌ರನ್ನು(ರ) ಅರ್ಧಸೇನೆಯ ಜೊತೆಗೆ ಯರ್ಮೂಕ್‌ಗೆ ಕಳುಹಿಸಿ ಉಳಿದರ್ಧ ಸೇನೆಯನ್ನು ಮುಸನ್ನಾರ(ರ) ನಾಯಕತ್ವದಲ್ಲಿ ಅಲ್ಲಿಯೇ ನಿಲ್ಲಿಸಿದ್ದರು. ಆದರೆ, ಸಿದ್ದೀಕ್‌ರ(ರ) ಮರಣದ ಬಳಿಕ ಪರ್ಶಿಯನ್ನರು ಮುಸ್ಲಿಮರನ್ನು ಒಂದು ಕೈ ನೋಡಲು ನಿರ್ಧರಿಸಿದರು. ಆದ್ದರಿಂದ ಮುಸನ್ನಾರ ಬಯಕೆಯಂತೆ ಉಮರ್(ರ) ಹಿಜರಿ 13ನೆಯ ವರ್ಷದಲ್ಲಿ ಅಬೂ ಉಬೈದ(ರ) ನಾಯಕತ್ವದಲ್ಲಿ ಒಂದು ಸೇನೆಯನ್ನು ಅಲ್ಲಿಗೆ ಕಳುಹಿಸಿದರು. ಅಬೂ ಉಬೈದ(ರ) ಸೇನೆಯ ಪ್ರಧಾನ ದಂಡನಾಯಕರಾಗಿದ್ದರು. ಆದರೆ ರುಸ್ತುಮ್‌ನ ನಾಯಕತ್ವದಲ್ಲಿ ವ್ಯಾಪಕ ಸಿದ್ಧತೆಯಿಂದ ಆಗಮಿಸಿದ್ದ ಪರ್ಶಿಯನ್ ಸೇನೆಯನ್ನು ಹಿರಾದಲ್ಲಿ ನಡೆದ ಸಂಘರ್ಷದಲ್ಲಿ ಮುಸ್ಲಿಮರಿಗೆ ಸೋಲಿಸಲು ಸಾಧ್ಯವಾಗಲಿಲ್ಲ. ತರುವಾಯ ಒಂದು ವರ್ಷದ ಬಳಿಕ ಹಿಜರಿ 15ರಲ್ಲಿ ಉಮರ್(ರ) ಜರೀರ್ ಬಿನ್ ಅಬ್ದುಲ್ಲಾರ(ರ) ನಾಯಕತ್ವದಲ್ಲಿ ಮುಸನ್ನಾರ(ರ) ಜತೆ ಒಂದು ಸೇನೆಯನ್ನು ಇರಾಕಿಗೆ ಕಳುಹಿಸಿದರು. ಅಂದು ಮಹ್ರಾನ್ ಎಂಬಾತನು ಪರ್ಶಿಯನ್ ಸೇನೆಯ ನಾಯಕನಾಗಿದ್ದನು. ಮುಸ್ಲಿಮರು ಇಲ್ಲಿ ಹಿರಾದ ಸೋಲಿಗೆ ಸೇಡು ತೀರಿಸಿದರು. ಮಹ್ರಾನ್ ಮತ್ತು ಆತನ ಅನೇಕ ಸಂಗಡಿಗರ ಹತ್ಯೆಯಾಯಿತು. ಉಳಿದವರು ಓಡಿ ಹೋದರು.

ಕಾದಿಸಿಯಾ ಯುದ್ಧ

ಹಿಜರಿ 16ರಲ್ಲಿ ಹಿಂದಿನ ವರ್ಷದ ಸೋಲಿನ ಸೇಡು ತೀರಿಸಲಿಕ್ಕಾಗಿ ಪರ್ಶಿಯನ್ನರು ರುಸ್ತುಮ್‌ನ ನೇತೃತ್ವದಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ಯೋಧರ ಸೇನೆಯನ್ನು

ಸಜ್ಜುಗೊಳಿಸಿರುವರೆಂಬ ಸುದ್ದಿ ಬಂತು. ಆಗ ಉಮರ್(ರ) ಸಹಕಾರ್ಯಕರ್ತರೊಡನೆ ಸಮಾಲೋಚನೆ ನಡೆಸಿದರು. ಸೇನೆಯ ನಾಯಕತ್ವವನ್ನು ಸ್ವಯಂ ವಹಿಸಿ ರಣರಂಗಕ್ಕೆ ಹೊರಡಲು ಖಲೀಫಾ ನಿರ್ಧರಿಸಿದರು. ಆದರೆ ಪ್ರಮುಖ ಸಹಾಬಿಗಳು ಅದಕ್ಕೆ ಒಪ್ಪಲಿಲ್ಲ. ಆ ವೇಳೆ ಮುಸನ್ನ ಬಿನ್ ಹಾರಿಸ್(ರ) ನಿಧನರಾಗಿದ್ದರು. ಕೊನೆಗೆ ಹಲವರ ಅಭಿಪ್ರಾಯದಂತೆ ಸೇನೆಯ ನಾಯಕತ್ವವನ್ನು ಸಅದ್ ಬಿನ್ ಅಬೀವಕ್ಕಾಸ್‌ರಿಗೆ(ರ) ನೀಡಿದರು. ಜತೆಗೆ ಮುಗೀರ ಬಿನ್ ಶುಅ್‌ಬ, ಖೈಸ್ ಬಿನ್ ಹುಬೈರ(ರ) ಮುಂತಾದ ಪ್ರಸಿದ್ಧ ಯೋಧರೂ ಇದ್ದರು. ಹೀಗೆ ಉಮರ್(ರ) ಸೂಕ್ತ ಆದೇಶಗಳನ್ನು ನೀಡಿ ಸೇನೆಯನ್ನು ಕಳುಹಿಸಿದರು.

ಸುಮಾರು ಎಂಟು ಸಾವಿರ ಯೋಧರಿದ್ದ ಸಅದ್‌ರ ಸೇನೆಯು ಇರಾಕ್‌ನ ಮುಖ್ಯ ದ್ವಾರವಾಗಿರುವ ಕಾದಿಸಿಯಾಕ್ಕೆ ತಲುಪಿದಾಗ ರುಸ್ತುಮ್‌ರ ಬೃಹತ್ ಪರ್ಶಿಯನ್ ಸೇನೆಯೂ ಅಲ್ಲಿಗೆ ಮುಟ್ಟಿತ್ತು. ಯುದ್ಧವು ಆರಂಭವಾಗುವುದಕ್ಕಿಂತ ಮುಂಚೆ ರುಸ್ತುಮ್, ಮುಸ್ಲಿಮರ ಪ್ರತಿನಿಧಿಗಳನ್ನು ಕರೆಸಿ ಯುದ್ಧವನ್ನು ಕೈ ಬಿಡುವ ಕುರಿತು ಮಾತನಾಡಿದರು. ಆದರೆ ಆತನು, ದುರಹಂಕಾರದಿಂದ ಮುಸ್ಲಿಮರನ್ನು ನಿಂದಿಸಿ ಮಾತನಾಡಿದನು. ಮುಸ್ಲಿಮರ ಪ್ರತಿನಿಧಿಯಾಗಿದ್ದ ಮುಗೀರರೂ(ರ) ಮಾತು-ವರ್ತನೆಯಲ್ಲಿ ಸಡಿಲು ಬಿಡಲಿಲ್ಲ. ಇದರಿಂದ ರುಸ್ತುಮ್ ದಿಗ್ಭ್ರಾಂತನಾದನು. ಮಾತುಕತೆ ವಿಫಲಗೊಂಡಾಗ ಯುದ್ಧದಿಂದ ಹಿಂದೆ ಸರಿಯುವಂತೆ ತನ್ನ ಸೈನಿಕರಿಗೆ ಆದೇಶವಿತ್ತನು. ಆದರೆ ಸೈನಿಕರು, ಅಲ್ಪಸಂಖ್ಯೆಯಲ್ಲಿದ್ದ ಮುಸ್ಲಿಮ್ ಸೇನೆಯನ್ನು ನೋಡಿ ಹಿಂದೆ ಸರಿಯಲೊಪ್ಪಲಿಲ್ಲ.

ಯುದ್ಧ ಆರಂಭವಾಯಿತು. ಹಲವು ದಿನಗಳ ಕಾಲ ಮುಂದುವರಿಯಿತು. ಕೊನೆಗೆ ಗಾಳಿಯು ಪರ್ಶಿಯನ್ನರ ವಿರುದ್ಧ ತಿರುಗಿತು. ಸುಮಾರು ಎಂಟು ಸಾವಿರ ಯೋಧರಿದ್ದ ಮುಸ್ಲಿಮ್ ಸೇನೆಯು ಒಂದು ಲಕ್ಷಕ್ಕೂ ಮೀರಿದ ಪರ್ಶಿಯನ್ ಸೇನೆಯನ್ನು ಸೋಲಿಸಿತು. ರುಸ್ತುಮ್ ಮತ್ತು ಬಹುಮಂದಿ ಸೈನಿಕರು ರಣರಂಗದಲ್ಲಿಯೇ ಮಡಿದುಬಿದ್ದರು. ಉಳಿದವರು ಓಡಿಹೋದರು. ಸಅದ್ ಅವರನ್ನು ಬೆನ್ನಟ್ಟಿದರು. ಜಲೂಲಾಅ್ ಎಂಬ ಸ್ಥಳದಲ್ಲಿ ಪುನಃ ಸಂಘರ್ಷಿಸಿದರು. ಅನೇಕ ಪರ್ಶಿಯನ್ನರು ಅಲ್ಲಿಯೂ ವಧಿಸಲ್ಪಟ್ಟರು. ಪರ್ಶಿಯನ್ ಚಕ್ರವರ್ತಿ ಕಿಸ್ರಾ(ಕುಸ್ರ್)ರ ಪುತ್ರಿಯೋರ್ವಳನ್ನು ಮುಸ್ಲಿಮರು ಅಲ್ಲಿ ಬಂಧಿಸಿದರು. ಅನಂತರ ಸಅದ್(ರ) ಪರ್ಶಿಯನ್ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಮದಾಯನ್ ನಗರದತ್ತ ಸಾಗಿದರು. ಟೈಗ್ರಿಸ್ ನದಿಯ ಇಕ್ಕೆಡೆಗಳಲ್ಲಿದ್ದ 'ಮದಾಯಿನ್' ಪ್ರದೇಶವು ಬಹಳ ಮನೋಹರವಾಗಿತ್ತು.

ಎರಡು ತಿಂಗಳ ಪ್ರತಿರೋಧದ ಬಳಿಕ ಆ ನಗರವು ಮುಸ್ಲಿಮರ ಅಧೀನವಾಯಿತು. ಕೊನೆಗೆ ಪರ್ಶಿಯನ್ ಚಕ್ರವರ್ತಿಯಾಗಿದ್ದ ತೃತೀಯ ಯಝ್ದುಜಿರ್ದ್, ಹಲ್ವಾನ್ ಎಂಬ ಸ್ಥಳಕ್ಕೆ ಓಡಿ ಹೋದನು. ಕಿಸ್ರಾ(ಕುಸ್ರ್) ರಾಜಮಂದಿರ ಹೇರಳ ಸಂಪತ್ತು 'ಯುದ್ಧನಿಧಿ'(ಗನೀಮತ್)ಯಾಗಿ ಮುಸ್ಲಿಮರಿಗೆ ದೊರೆಯಿತು. ಇರಾಕನ್ನು ಸಂಪೂರ್ಣವಾಗಿ ಗೆದ್ದುಕೊಂಡ ಸಅದ್(ರ) 'ಕೂಫ'ವನ್ನು ಮುಸ್ಲಿಮರ ಕೇಂದ್ರವಾಗಿ ಮಾಡಿಸಿಕೊಂಡರು. ಅನಂತರ ಉಮರ್‌ರ(ರ) ವಿಶೇಷಾಜ್ಞೆಯಂತೆ ಅಲ್ಲಿ ಮಸೀದಿ ಮತ್ತು ನಿವಾಸಗಳಿರುವ ನಗರವನ್ನು ನಿರ್ಮಿಸಿದರು.

ಪರ್ಶಿಯನ್ ಸಾಮ್ರಾಜ್ಯದ ಪತನ

ಕಾದಿಸಿಯಾ, ಜಲೂಲಾ ಮತ್ತು ಮದಾಯಿನ್‌ಗಳಲ್ಲಿ ಮುಸ್ಲಿಮರಿಂದ ಹೀನಾಯ ಸೋಲುಂಡ ಕುಸ್ರೊ ಸಾಮ್ರಾಜ್ಯದ ಕೊನೆಯ ಸಾಸಾನ್ ದೊರೆ ಮೂರನೆಯ ಯಝ್ದಜಿರ್ದ್ ನಾಲ್ಕು ವರ್ಷಗಳ ತನಕ ಯುದ್ಧಕ್ಕೆ ಕೈಹಾಕಲಿಲ್ಲ. ಕೊನೆಗೆ ಹಿಜರಿ 20ರಲ್ಲಿ ಯಝ್ದಜಿರ್ದ್ ಅಂತಿಮ ಹೋರಾಟಕ್ಕೆ ಸಜ್ಜಾದರು. ಫೈರಾನಾನ್ ಎಂಬ ಯೋಧನು ಅವರ ಒಂದು ಲಕ್ಷ ಸೈನಿಕರ ದಂಡನಾಯಕನಾಗಿದ್ದನು. ನುಅ್‌ಮಾನ್ ಬಿನ್ ಮುಕರ್ರಿನ್ ಮುಸ್ಲಿಮ್ ಸೇನೆಯ ನಾಯಕರಾಗಿದ್ದರು. ಕೂಫಾದಲ್ಲಿ ಸಅದ್ ಬಿನ್ ಅಬೀವಕ್ಕಾಸ್‌ರವರ(ರ) ಕುರಿತು ಕೆಲವು ನಿರಾಧಾರ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಖಲೀಫಾ ಉಮರ್(ರ) ಸಾರ್ವಜನಿಕ ಹಿತದೃಷ್ಟಿಯಿಂದ ಅವರನ್ನು ಕೈ ಬಿಟ್ಟು ನುಅ್‌ಮಾನ್‌ರಿಗೆ ಸೇನಾ ನಾಯಕತ್ವವನ್ನು ವಹಿಸಿದ್ದರು. ನಹಾವಂತ್ ಎಂಬ ಸ್ಥಳದಲ್ಲಿ ಉಭಯ ಸೇನೆಗಳೂ ಸಂಧಿಸಿದುವು. ಆರಂಭದಲ್ಲಿಯೇ ನುಅ್‌ಮಾನ್ ಹುತಾತ್ಮರಾದರೂ ಮುಸ್ಲಿಮರು ಹುದೈಫತುಲ್ ಯಮಾನ್‌ರ ನಾಯಕತ್ವದಲ್ಲಿ ವೀರಾವೇಶದಿಂದ ಹೋರಾಡಿದರು. ಪರ್ಶಿಯನ್ ಸೈನಿಕರು ಯುದ್ಧರಂಗದಿಂದ ಓಡಿ ಹೋಗದಿರಲಿಕ್ಕಾಗಿ ಸಂಕೋಲೆಗಳಿಂದ ಸ್ವಯಂ ಪರಸ್ಪರ ಬಿಗಿದುಕೊಂಡಿದ್ದರು. ಆದರೆ ಯಾವ ಸಂಕೋಲೆಗೂ ಅವರನ್ನು ರಕ್ಷಿಸಲಾಗಲಿಲ್ಲ. ಮುಸ್ಲಿಮ್ ಸೇನೆಯು ಜಯಗಳಿಸುತ್ತಿತ್ತು. ನವಾಹಂತ್‌ನ ಬಳಿಕ ಕಾಸಾನ್, ಆಝುರ್ ಬೈಜಾನ್ ಮುಂತಾದ ಪ್ರದೇಶಗಳನ್ನು ಅವರು ಜಯಿಸಿದರು. ಇಸ್ಲಾಮಿನ ಆರಂಭ ಕಾಲದಲ್ಲಿ ಜಗತ್ತಿನ ಪ್ರಬಲ ಶಕ್ತಿಗಳಲ್ಲೊಂದಾಗಿದ್ದ ಪರ್ಶಿಯನ್ ಸಾಮ್ರಾಜ್ಯವು ನಹಾವಂತ್‌ನಲ್ಲಿ ಅದರ ಕೊನೆಯ ಆಟವಾಡಿತು. ಅಲ್ಲಿ ಆ ಸಾಮ್ರಾಜ್ಯದ ಪತನ ಪೂರ್ಣವಾಯಿತು.

ಅರಬರೊಂದಿಗೆ ಹಲವು ರೀತಿಯ ನಿಕಟ ಸಂಬಂಧವಿದ್ದ ಇರಾಕಿನ ಜನರು ಮುಸ್ಲಿಮ್ ಸೈನಿಕರನ್ನು ಆಕ್ರಮಣಕಾರಿಗಳೆನ್ನುವ ಬದಲಾಗಿ ಪರ್ಶಿಯನ್ ಸಾಮ್ರಾಜ್ಯಶಾಹಿಯ ಗುಲಾಮಗಿರಿಯಿಂದ ಮುಕ್ತಗೊಳಿಸಲಿಕ್ಕಾಗಿ ದೇವನು ನೇಮಿಸಿದ ವಿಮೋಚಕರೆಂದು ಪರಿಗಣಿಸಿದ್ದರು. ಆದ್ದರಿಂದ ಇರಾಕ್‌ನಾದ್ಯಂತ ಅಲ್ಲಿನ ಗೋತ್ರ-ವರ್ಗಗಳು ಮುಸ್ಲಿಮರನ್ನು ಸ್ವಾಗತಿಸಿ ಅವರಿಗೆ ಸಹಾಯ ನೀಡಿದುವು. ಮುಸ್ಲಿಮರೂ ಗೌರವದಿಂದ ವರ್ತಿಸಿದ್ದರು. ಆದ್ದರಿಂದಲೇ ಇರಾಕ್, ಇಸ್ಲಾಮಿ ಸಂಸ್ಕೃತಿಯ ತೊಟ್ಟಿಲೆಂದು ಇತಿಹಾಸದಲ್ಲಿ ಸ್ಮರಣೀಯವಾಗಿದೆ.

ಸೀಝರನ ಸಾಮ್ರಾಜ್ಯದಲ್ಲಿ

ಖಲೀಫಾ ಅಬೂಬಕರ್ ಸಿದ್ದೀಕ್‌ರ(ರ) ಆಜ್ಞಾನುಸಾರ ಖಾಲಿದ್‌ರವರು(ರ) ಇರಾಕ್‌ನಿಂದ ಸಿರಿಯಾಕ್ಕೆ ಬಂದು, ಅಜ್ನಾದೀನ್‌ನಲ್ಲಿ ನಾಲ್ಕು ಸೇನಾ ವಿಭಾಗಗಳು ಒಟ್ಟಾಗಿ ಖಾಲಿದ್‌ರವರ(ರ) ನಾಯಕತ್ವದಲ್ಲಿ ಹೋರಾಡಿದ ಘಟನೆಯನ್ನು ನಾವು ಈ ಹಿಂದೆ ಓದಿದ್ದೇವೆ. ತನ್ಮಧ್ಯೆ ಸಿದ್ದೀಕ್(ರ) ನಿಧನರಾಗಿ ಉಮರುಲ್ ಫಾರೂಕ್(ರ) ಖಲೀಫರಾದರು. ಆ ಕೂಡಲೇ ಅವರು ಖಾಲಿದ್‌ರನ್ನು(ರ) ದಂಡನಾಯಕ ಸ್ಥಾನದಿಂದ ಇಳಿಸಿ ಅಬೂ ಉಬೈದರನ್ನು ನೇಮಿಸಿದರು.

ಸಾಮಾನ್ಯವಾಗಿ ಉಮರ್‌ರ(ರ) ಈ ನಿರ್ಧಾರವು ಹಲವು ಗಂಭೀರ ಪರಿಸ್ಥಿತಿಗಳಿಗೆ ಕಾರಣವಾಗಬಹುದಾಗಿತ್ತು. ಆದರೆ ಖಾಲಿದ್(ರ) ಅತ್ಯಂತ ವಿಧೇಯ ಮುಸ್ಲಿಮ್ ಯೋಧರಾಗಿದ್ದರು. ಅವರು ಖ್ಯಾತಿ ಅಥವಾ ಹೆಗ್ಗಳಿಕೆಯ ಬದಲಾಗಿ ಇಸ್ಲಾಮಿನ ಉನ್ನತಿಗಾಗಿ ಖಡ್ಗ ಹಿಡಿದಿದ್ದರು. ಆದ್ದರಿಂದ, ಖಲೀಫರ ಆಜ್ಞೆಯನ್ನು ಗೊಣಗದೆ ಅಂಗೀಕರಿಸಿದರು. ಆ ತನಕ ತನ್ನ ಆಜ್ಞೆಗಳನ್ನು ಪಾಲಿಸುತ್ತಿದ್ದ ಅಬೂ ಉಬೈದರನ್ನು ನಾಯಕರಾಗಿ ಅಂಗೀಕರಿಸಿ ಅನಂತರ ಅವರ ಆಜ್ಞೆಗಳಿಗೆ ಖಾಲಿದ್(ರ) ಬದ್ಧರಾದರು. ಮಹಾ ದಂಡನಾಯಕರಾಗಿದ್ದ ಖಾಲಿದ್(ರ) ಥಟ್ಟನೆ ಸಾಮಾನ್ಯ ಯೋಧರಾದರು. ಇದು ಇಸ್ಲಾಮ್ ಜನರಲ್ಲಿ ಬೆಳೆಸಿದ ಉದಾತ್ತ ಗುಣದ ವೈಶಿಷ್ಟ್ಯವಾಗಿದೆ. ಇತಿಹಾಸದಲ್ಲಿ ಇಂತಹ ವಿಶಿಷ್ಟ ಗುಣವನ್ನು ಬೆಳೆಸಲು ಬೇರೆ ಯಾವ ಆಂದೋಲನಕ್ಕೂ ಸಾಧ್ಯವಾಗಲಿಲ್ಲ.

ಯರ್ಮೂಕ್‌ನಲ್ಲಿ

ಅಜ್ನಾದೀನ್‌ನಲ್ಲಿ ಸೋತ ಬಳಿಕ ಅಂಟಾಕಿಯಾಕ್ಕೆ ಓಡಿ ಹೋದ ರೋಮನ್ ಚಕ್ರವರ್ತಿ ಹರ್ಕ್ಯುಲಸ್(ಹಿರ್ಕಲ್) ಅಲ್ಲಿ ದೊರೆತ ನೆರವಿನಿಂದ ಒಂದು ದೊಡ್ಡ ಸೇನೆಯನ್ನು ಕಟ್ಟಿ ಮುಸ್ಲಿಮರ ನಿರ್ಮೂಲನಕ್ಕೆ ಹೊರಟಿದ್ದರು. ಅವರ ಸೇನೆಯಲ್ಲಿ ಕನಿಷ್ಠ ಎರಡು ಲಕ್ಷ ಸೈನಿಕರಿದ್ದರು. ಅಬೂ ಉಬೈದರ ಅಧೀನವಿದ್ದ ಮುಸ್ಲಿಮ್ ಸೇನೆಯಲ್ಲಿ ಕೇವಲ ಹತ್ತು ಸಾವಿರ ಸೈನಿಕರಿದ್ದರು. ಯರ್ಮೂಕ್ ನದಿಯ ದಡದಲ್ಲಿ ಉಭಯ ಸೇನೆಗಳೂ ಸಂಘರ್ಷಿಸಿದುವು. ಸಿರಿಯನ್ ವಲಯದಲ್ಲಿ ಅಂತಹ ಭೀಕರ ಯುದ್ಧ ಅದಕ್ಕಿಂತ ಮುಂಚೆ ನಡೆದಿರಲಿಲ್ಲ. ಕೊನೆಗೆ ಎರಡು ಲಕ್ಷ ಯೋಧರಿದ್ದ ರೋಮನ್ ಸೇನೆಯು ಚೆಲ್ಲಾಪಿಲ್ಲಿಯಾಯಿತು. ಎಪ್ಪತ್ತು ಸಾವಿರ ಯೋಧರು ಹಿಂದಕ್ಕೆ ಓಡಿದರು. ಅನೇಕ ರೋಮನ್ನರು ಹತರಾದರು.

ಸೋಲಿನ ಸುದ್ದಿ ಕೇಳಿದ ಕೂಡಲೇ ಮಹಾಶೂರನೆಂದು ಖ್ಯಾತನಾಗಿದ್ದ ಹರ್ಕ್ಯುಲಸ್ ಚಕ್ರವರ್ತಿಯು ಕಣ್ಣೀರು ಸುರಿಸುತ್ತಾ ಸಿರಿಯಾಕ್ಕೆ ವಿದಾಯ ಹೇಳಿ ಅಂಟಾಕಿಯಾದಿಂದ ಕಾನ್‌ಸ್ಟೆಂಟಿನೋಪಲ್‌ಗೆ ಓಡಿ ಹೋದನು.

ಯರ್ಮೂಕ್ ಯುದ್ಧದ ಬಳಿಕ ಮುಸ್ಲಿಮ್ ಸೇನೆಯನ್ನು ಮೂರು ಭಾಗಗಳಾಗಿ ಮಾಡಲಾಯಿತು. ಅಬೂ ಉಬೈದರ ನಾಯಕತ್ವದಲ್ಲಿ ಖಾಲಿದ್‌ರನ್ನೊಳಗೊಂಡ ಸೇನಾ ವಿಭಾಗವು ಉತ್ತರಕ್ಕೂ ಅಮ್ರ್ ಬಿನ್ ಆಸ್‌ರ ಆಶ್ರಯದಲ್ಲಿ ಇನ್ನೊಂದು ಸೇನೆಯು ದಕ್ಷಿಣಕ್ಕೂ ಸಾಗಿತು. ಯಝೀದ್ ಬಿನ್ ಅಬೀ ಸುಫ್‌ಯಾನ್‌ರ ಅಧೀನವಿದ್ದ ಮೂರನೆಯ ಸೇನಾ ತುಕಡಿಯು, ಆ ವರೆಗಿನ ಸಾಧನೆಗಳನ್ನು ಕಾಯ್ದುಕೊಳ್ಳಲಿಕ್ಕಾಗಿ ಡಮಾಸ್ಕಸ್‌ನಲ್ಲಿಯೇ ಉಳಿಯಿತು. ಅಬೂ ಉಬೈದರ ಸೇನೆಯು ಹಿಂಸ್, ಬಿನ್‌ಸಿರೀನ್, ವಾದಖಿಯ್ಯ, ಹಲ್ಬ್ ಮುಂತಾದ ರೋಮನ್ ಪ್ರದೇಶಗಳನ್ನು ಜಯಿಸಿತು. ಅಮ್ರ್ ಬಿನ್ ಆಸ್‌ರ ಸೇನೆಯು ಅಕ್ಕಾ, ಹೈಫಾ, ಯಾಫಾ ಮುಂತಾದ ಭೂಮಧ್ಯ ಸಮುದ್ರ ತೀರದ ಪ್ರದೇಶಗಳನ್ನು ಸುಲಭದಲ್ಲಿ ಜಯಿಸಿತು.

ಬೈತುಲ್ ಮಕ್ದಿಸ್‌ನಲ್ಲಿ

ಫೆಲೆಸ್ತೀನನ್ನು ಇತರ ಪ್ರದೇಶಗಳಂತೆ ಸುಲಭದಲ್ಲಿ ಜಯಿಸಲು ಮುಸ್ಲಿಮರಿಗೆ ಸಾಧ್ಯವಿರಲಿಲ್ಲ. ಮಹಾದಂಡನಾಯಕ ಮತ್ತು ಫೆಲೆಸ್ತೀನ್‌ನ ಆಡಳಿತಗಾರನಾಗಿದ್ದ 'ಅತ್ವ್‌ರ ಬೂನ್'ರ ಆಶ್ರಯದಲ್ಲಿ ರೋಮನ್ನರು ಅದನ್ನು ಅಷ್ಟೊಂದು ಬಲವಾಗಿ ರಕ್ಷಿಸಿಕೊಂಡಿದ್ದರು. ಆದ್ದರಿಂದ ಮುಸ್ಲಿಮರಿಗೆ ಆರಂಭದಲ್ಲಿ ಸ್ವಲ್ಪ ನಾಶ-ನಷ್ಟವುಂಟಾಯಿತು. ಅನಂತರ ರೋಮನ್ನರು ಕುದ್ಸ್ ನಗರಕ್ಕೆ ಹಿಂತೆರಳಿ ಅಲ್ಲಿ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿದರು. ಆದರೆ ಮುಸ್ಲಿಮರು ಹಿಂದೆ ಸರಿಯಲಿಲ್ಲ. ಮುಸ್ಲಿಮರು ನಾಲ್ಕು ತಿಂಗಳ ಕಾಲ ಕುದ್ಸ್ ನಗರವನ್ನು ಸುತ್ತುವರಿದು ನಿಂತರು. ಅದು ಮುಸ್ಲಿಮರ ಮೂರನೆಯ ಪುಣ್ಯ ಯಾತ್ರಾಸ್ಥಳ ಮತ್ತು ಪ್ರಥಮ ಕಿಬ್ಲಾ ಆಗಿದ್ದುದೇ ಅದಕ್ಕೆ ಕಾರಣವಾಗಿತ್ತು. ಆದ್ದರಿಂದ ಅವರ ದೃಷ್ಟಿಯಲ್ಲಿ ಆ ನಗರಕ್ಕೆ ರಾಜಕೀಯಕ್ಕಿಂತ ಧಾರ್ಮಿಕ ಪ್ರಾಮುಖ್ಯ ಅಧಿಕವಿತ್ತು. ಕೊನೆಗೆ ಕುದ್ಸ್ ನಿವಾಸಿಗಳು ಹಿಂತಿರುಗಿ ನೋಡಿದರು. ಸಿರಿಯಾದ ಎಲ್ಲ ಪ್ರಮುಖ ಹಳ್ಳಿ ಪಟ್ಟಣಗಳನ್ನು ಮುಸ್ಲಿಮರು ಸ್ವಾಧೀನ ಪಡಿಸಿದ್ದರು. ಸಮುದ್ರದ ಮೂಲಕ ನೆರವು ತಲಪಿಸುವ ಅವಕಾಶವೂ ಇರಲಿಲ್ಲ. ರಫಅ, ಗಸ್ಸ, ಸಬಸ್ತಿಯ, ನಾಬುಲ್ಸ್, ಲುದ್ದ್, ಬೈತು ಜಿಬ್‌ರೀಲ್, ಯಾಫಾ ಮುಂತಾದ ಎಲ್ಲ ತೀರ ಪ್ರದೇಶಗಳಲ್ಲಿಯೂ ಮುಸ್ಲಿಮರು ತಳವೂರಿದ್ದರು. ಇನ್ನು ತಪ್ಪಿಸಿಕೊಳ್ಳುವ ಹಾದಿಯಿಲ್ಲವೆಂದು ರೋಮನರಿಗೆ ಮನವರಿಕೆಯಾಯಿತು.

ಕುದ್ಸ್ ನಿವಾಸಿಗಳು ರೋಮನರ ಸ್ವೇಚ್ಛಾಧಿಪತ್ಯದಿಂದ ರೋಸಿ ಹೋಗಿದ್ದರು. ಆದ್ದರಿಂದ ಮುಸ್ಲಿಮರ ವಿರುದ್ಧ ಹೋರಾಡಲೂ ಅವರು ಉತ್ಸುಕರಾಗಿರಲಿಲ್ಲ. ಪರಿಸ್ಥಿತಿ ಹದಗೆಡುತ್ತಿರುವುದನ್ನು ಮನಗಂಡು ಅತ್ವ್‌ರಬೂನ್‌ರ ಆದೇಶಕ್ಕೆ ಕಾಯದೆ ಅವರು ಮುಸ್ಲಿಮರ ಜತೆ ಒಪ್ಪಂದಕ್ಕೆ ಸಿದ್ಧರಾದರು. ಈ ಸುದ್ದಿ ತಿಳಿದು ಅತ್ವ್‌ರಬೂನ್ ಈಜಿಪ್ಟ್‌ಗೆ ಓಡಿ ಹೋದನು.

ಆದರೆ, ಈ ಹಿಂದೆ ಮುಸ್ಲಿಮರಿಗೆ ಹಲವು ನಾಶನಷ್ಟಗಳನ್ನುಂಟು ಮಾಡಿದ್ದುದರಿಂದ ಶರಣಾಗುವಾಗ ಅವರು ಸೇಡು ತೀರಿಸಬಹುದೆಂದು ಕುದ್ಸ್ ನಿವಾಸಿಗಳು ಹೆದರಿದ್ದರು. ಆದ್ದರಿಂದ ಖಲೀಫ ಉಮರುಲ್ ಫಾರೂಕ್‌ರೇ(ರ) ಸ್ವತಃ ಬಂದು ಅದಕ್ಕೆ ಒಪ್ಪಂದ ಮಾಡಬೇಕೆಂದು ಅವರು ವಿನಂತಿಸಿದರು. ಖಲೀಫರು ಅದಕ್ಕೆ ಒಪ್ಪಿ ಅವರೊಂದಿಗಿನ ಕರಾರುಪತ್ರಕ್ಕೆ ಸಹಿ ಹಾಕಿದರು. ಇದರಿಂದಾಗಿ ಕುದ್ಸ್ ನಿವಾಸಿಗಳಿಗೆ ಸಂಪೂರ್ಣ ಧಾರ್ಮಿಕ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ದೊರೆಯಿತು. ಮಾತ್ರವಲ್ಲ ಅವರ ಸೊತ್ತು, ವಿತ್ತ, ಪ್ರಾಣ, ಆರಾಧನಾಲಯಗಳನ್ನು ರಕ್ಷಿಸುವ ಹೊಣೆಯನ್ನು ಮುಸ್ಲಿಮರು ವಹಿಸಬೇಕಾಯಿತು.

ಕುದ್ಸ್‌ನಲ್ಲಿ ಮುಸ್ಲಿಮರು ಜಯಗಳಿಸಿದ್ದಾಗ ಸಮೀಪದ ಕೈಸಾರಿಯ್ಯಾ ಪ್ರದೇಶದಲ್ಲಿ ಹರ್ಕ್ಯುಲಸ್ ಚಕ್ರವರ್ತಿಯ ಪುತ್ರ ಕಾನ್‌ಸ್ಟೆಂಟೈನ್(ದ್ವಿತೀಯ) ಮುಸ್ಲಿಮರ ವಿರುದ್ಧ ಹೋರಾಟದ ಸಿದ್ಧತೆ ನಡೆಸುತ್ತಿದ್ದನು. ತಕ್ಷಣವೇ ಅಮ್ರ್ ಬಿನ್ ಆಸ್(ರ) ಅಲ್ಲಿಗೆ ಹೊರಟರು.

ಅಮ್ರ್‌ರವರ(ರ) ಆಗಮನದ ಸುದ್ದಿ ತಿಳಿದ ಕೂಡಲೇ ಕಾನ್ಸ್‌ಟೆಂಟೈನ್ ರಾತೋರಾತ್ರಿ ಕಾನ್ಸ್‌ಟೆಂಟಿನೋಪಲ್‌ಗೆ* ಪಲಾಯನ ಮಾಡಿದ.

ಈಜಿಪ್ಟ್‌ನಲ್ಲಿ

ಖಲೀಫಾ ಉಮರ್(ರ) ಮುಸ್ಲಿಮರ ದಿಗ್ವಿಜಯವನ್ನು ಫೆಲೆಸ್ತೀನಿನಲ್ಲಿ ಕೊನೆಗೊಳಿಸಲು ನಿರ್ಧರಿಸಿದ್ದರು. ಈ ಕುರಿತು ಅವರು ಅಮ್ರ್ ಬಿನ್ ಆಸ್‌ರಿಗೆ(ರ) ಪತ್ರ ಬರೆದರು. ಆದರೆ, ಫೆಲೆಸ್ತೀನ್ ಮತ್ತು ಈಜಿಪ್ಟ್‌ಗಳ ಮಧ್ಯೆ ಪ್ರತ್ಯೇಕ ಗಡಿಗಳಿರಲಿಲ್ಲ. ಅದಲ್ಲದೆ, ರೋಮನ್ನರು ಹಿಂದೆ, ಫೆಲೆಸ್ತೀನಿನಲ್ಲಿ ಮಾಡಿದಂತೆಯೇ ಈಜಿಪ್ಟ್‌ನಲ್ಲಿ ಒಂದು ಬೃಹತ್ ಸೇನೆಯನ್ನು ಇರಿಸಿದರು. ಇದರಿಂದಾಗಿ ಮುಸ್ಲಿಮರು ಫೆಲೆಸ್ತೀನಿನಲ್ಲಿ ಸದಾ ಭೀತಿಯ ನೆರಳಲ್ಲಿಯೇ ಇರಬೇಕಾಗಿತ್ತು. ಈ ವಿಷಯವನ್ನು ಖಲೀಫಾರಿಗೆ ಪತ್ರದ ಮೂಲಕ ತಿಳಿಸಿದಾಗ ಅವರು ಅಮ್ರ್‌ರೊಂದಿಗೆ ಸಹಮತ ತೋರಿದರು. ಅಂತೆಯೇ ಅಮ್ರ್ ಬಿನ್ ಆಸ್(ರ) ಈಜಿಪ್ಟ್‌ಗೆ ಹೊರಟರು.

ಅಮ್ರ್‌ರ(ರ) ಸೇನೆಯು ಸೀನಾ ಮರುಭೂಮಿಯ ಅರೀಶಿಗೆ ತಲಪಿತು. ಅಲ್ಲಿ ಅವರಿಗೆ ವಿಶೇಷ ಪ್ರತಿಭಟನೆ ಎದುರಾಗಲಿಲ್ಲ. ಅನಂತರ ಈಜಿಪ್ಟ್‌ನ ದ್ವಾರವಾಗಿದ್ದ ಫರ್ಮಾ ಪಟ್ಟಣವು ಅವರ ಗುರಿಯಾಗಿತ್ತು. ಮುಸ್ಲಿಮರು ಒಂದು ತಿಂಗಳ ಕಾಲ ಆ ನಗರಕ್ಕೆ ಮುತ್ತಿಗೆ ಹಾಕಿದರು. ಕೊನೆಗೆ ಈಜಿಪ್ಟ್‌ನವರು ರೋಮನರ ವಿರುದ್ಧ ಮುಸ್ಲಿಮರಿಗೆ ನೆರವಾದುದರಿಂದ ಅವರು ಆ ನಗರವನ್ನೂ ತೊರೆಯಬೇಕಾಯಿತು. ಹಿಜರಿ 19ರಲ್ಲಿ ಫರ್ಮಾ ಮುಸ್ಲಿಮರ ಅಧೀನವಾಯಿತು.

ಅನಂತರ ಅಮ್ರ್‌ರ ಸೇನೆಯು ಬಲ್‌ಬೀಸ್‌ಗೆ ಸಾಗಿತು. ಹಿಂದೆ ಬೈತುಲ್ ಮಕ್ದಿಸ್‌ನಿಂದ ಓಡಿ ಪಾರಾಗಿದ್ದ ಅತ್ವ್‌ರಬೂನ್‌ನ ನಾಯಕತ್ವದಲ್ಲಿ ರೋಮನರು ಒಂದು ದೊಡ್ಡ ಸೇನೆಯನ್ನು ಸಜ್ಜುಗೊಳಿಸಿದ್ದರು. ಇದರಿಂದಾಗಿ ಅಲ್ಲಿ ಹಲವು ತಿಂಗಳ ತನಕ ಉಗ್ರ ಕಾದಾಟ ನಡೆಯಿತು. ಕೊನೆಗೆ ಮುಸ್ಲಿಮರು ಆ ನಗರವನ್ನೂ ಸ್ವಾಧೀನಪಡಿಸಿದರು. ಅಂದು ಈಜಿಪ್ಟನ್ನು ರೋಮನರ ಪ್ರತಿನಿಧಿಯೆಂಬ ನೆಲೆಯಲ್ಲಿ ಮುಕೌಕಿಸ್ ಆಳುತ್ತಿದ್ದನು. ಈ ಯುದ್ಧದಲ್ಲಿ ಮುಕೌಕಿಸ್‌ನ ಓರ್ವ ಪುತ್ರಿಯನ್ನು ಸೆರೆಹಿಡಿಯಲಾಗಿತ್ತು. ಆದರೂ ಯುದ್ಧವನ್ನು ಗೆದ್ದ ಬಳಿಕ ಅಮ್ರ್(ರ) ಆಕೆಯನ್ನು ತಂದೆಯ ಬಳಿಗೆ ಕಳುಹಿಸಿ ಕೊಟ್ಟರು. ಈ ಘಟನೆಯಿಂದ ಈಜಿಪ್ಟ್‌ನವರಿಗೆ ಮುಸ್ಲಿಮರ ಬಗ್ಗೆ ಒಲವು ಹೆಚ್ಚಿತು.

ಅನಂತರ ಉಮ್ಮು ದನೀನ್ ಎಂಬಲ್ಲಿ ಮುಸ್ಲಿಮರು ರೋಮನರೊಡನೆ ಕಾದಾಡಿದರು. ಇದರಲ್ಲಿ ಮುಸ್ಲಿಮರಿಗೆ ಜಯ ದೊರೆಯಲಿಲ್ಲ. ಆದ್ದರಿಂದ, ತುರ್ತಾಗಿ ಇನ್ನೊಂದು ಪೋಷಕ ಸೇನೆಯನ್ನು ಕಳಿಸುವಂತೆ ಅಮ್ರ್(ರ) ಖಲೀಫಾರಿಗೆ ಪತ್ರ ಬರೆದರು. ಆ ಕೂಡಲೇ ಝುಬೈರ್,

*ರೋಮನ್ ಸಾಮ್ರಾಜ್ಯದ ರಾಜಧಾನಿಯನ್ನು ರೋಮ್‌ನಿಂದ ಬಿಸಂತಿಯಕ್ಕೆ ಒಂದನೆಯ ಕಾನ್ಸ್‌ಟೆಂಟೈನ್ ಬದಲಾಯಿಸಿದ್ದರು. ಬಿಸಂತಿಯಾವನ್ನು ಕಾನ್ಸ್‌ಟೆಂಟಿನೋಪಲ್ ಎಂದು ಅವರೇ ಹೆಸರಿಸಿದ್ದರು. ಈ ಪೂರ್ವ ರೋಮನ್ ಸಾಮ್ರಾಜ್ಯವನ್ನು ಅರಬರು ಬಿಸಂತಿಯಾವೆಂದೂ ಕರೆಯುತ್ತಾರೆ.

ಉಬಾದಃ ಬಿನ್ ಸಾಮಿತ್, ಮಿಕ್ದಾದ್ ಬಿನ್ ಅಸ್ವದ್(ರ) ಮುಂತಾದ ವೀರ ಯೋಧರನ್ನೊಳಗೊಂಡ 4000 ಮಂದಿಯ ಸೇನೆಯನ್ನು ಖಲೀಫಾ ಉಮರ್(ರ) ಕಳುಹಿಸಿದರು. ತ್ಯೋಡಾಕ್ ಎಂಬೋರ್ವ ಖ್ಯಾತ ದಂಡನಾಯಕನು 20,000 ಯೋಧರಿದ್ದ ರೋಮನ್ ಸೇನೆಯ ನಾಯಕತ್ವ ವಹಿಸಿದ್ದನು. ಆದರೆ ಅಮ್ರ್‌ರವರ(ರ) ತಂತ್ರವು ಈ ಯುದ್ಧದಲ್ಲಿಯೂ ಮುಸ್ಲಿಮರಿಗೆ ಜಯಗಳಿಸಿಕೊಟ್ಟಿತು. ಅಮ್ರ್(ರ) ಸೇನೆಯನ್ನು ಮೂರು ಭಾಗಗಳಾಗಿ ವಿಂಗಡಿಸಿ, ಮೊದಲು ಒಂದು ವಿಭಾಗವನ್ನು ರೋಮನರೊಡನೆ ನೇರ ಯುದ್ಧಕ್ಕೆ ತೊಡಗಿಸಿದರು. ಯುದ್ಧ ನಡೆಯುತ್ತಿದ್ದಾಗ ಉಳಿದೆರಡು ವಿಭಾಗಗಳು ಬೇರೆ ದಿಕ್ಕುಗಳಿಂದ ಆಕ್ರಮಣ ನಡೆಸಿತು. ಈ ಮೂರು ಸೇನಾ ವಿಭಾಗಗಳ ಮಧ್ಯೆ ಸಿಕ್ಕಿ ಬಿದ್ದ ರೋಮನರು ಗಾಬರಿಗೊಂಡು ಚೆಲ್ಲಾಪಿಲ್ಲಿಯಾಗಿ ಓಡಿದರು. ಅನೇಕ ಯೋಧರು ಮಡಿದರು. ಅಲ್ಲಿಂದ ಪಾರಾದವರು ಬಾಬಿಲೋನ್ ಕೋಟೆಯಲ್ಲಿ ಆಶ್ರಯ ಪಡೆದರು.

ಬಾಬಿಲೋನ್ ಕೋಟೆಯಲ್ಲಿ

ಬಾಬಿಲ್ ಅಥವಾ ಬಾಬಿಲೋನ್ ಎಂಬ ಪ್ರಾಚೀನ ನಗರವು ಇಂದಿನ ಕೈರೋದ ಸಮೀಪವಿತ್ತು. ಅಲ್ಲಿನ ಭದ್ರ ಕೋಟೆಯು ರೋಮನ್ ಸೈನಿಕರ ಇನ್ನೊಂದು ನೆಲೆಯಾಗಿತ್ತು. ಹಿಜರಿ 20ರಲ್ಲಿ ಮುಸ್ಲಿಮರು ಆ ಕೋಟೆಯನ್ನು ಸುತ್ತುವರಿದರು. ಆರು ತಿಂಗಳ ತನಕ ಯಾವ ಫಲವೂ ದೊರೆಯಲಿಲ್ಲ. ಕೊನೆಗೆ ಈಜಿಪ್ಟ್‌ನ ಆಡಳಿತಗಾರನಾಗಿದ್ದ ಮುಕೌಕಿಸ್ ಮಾತುಕತೆಗಾಗಿ ಅಮ್ರ್ ಬಿನ್ ಆಸ್‌ರ(ರ) ಬಳಿಗೆ ಒಂದು ತಂಡವನ್ನು ಕಳುಹಿಸಿದರು. ಎರಡು ದಿನಗಳ ಮಾತುಕತೆಯ ಬಳಿಕ ಅಮ್ರ್(ರ) ಅವರಿಗೆ ಈ ಕೆಳಗಿನ ಮೂರಲ್ಲೊಂದು ಮಾರ್ಗ ಅಂಗೀಕರಿಸುವ ಸ್ವಾತಂತ್ರ್ಯ ನೀಡಿದರು. ಒಂದೋ ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಬೇಕು. ಹಾಗಾದರೆ ಅವರನ್ನು ಇತರ ಮುಸ್ಲಿಮರಂತೆಯೇ ಪರಿಗಣಿಸಲಾಗುವುದು. ಅದಲ್ಲದಿದ್ದರೆ, ಮುಸ್ಲಿಮರು ಅವರ ಪ್ರಾಣ, ಸೊತ್ತು ಮತ್ತು ಧರ್ಮಾಚಾರಗಳಿಗೆ ರಕ್ಷಣೆ ನೀಡುತ್ತಾರೆ. ಅದಕ್ಕೆ ಪ್ರತಿಯಾಗಿ ಮುಸ್ಲಿಮರಿಗೆ ಜಿಝಿಯಾ ನೀಡಬೇಕು ಅಥವಾ ಯುದ್ಧ. ಈ ಮೂರು ಮಾರ್ಗಗಳನ್ನು ಅವರ ಮುಂದಿರಿಸಲಾಯಿತು.

ನಿಯೋಗವು ಮರಳಿ ಹೋಗಿ ಮುಕೌಕಿಸ್‌ರಿಗೆ ವಿವರ ನೀಡಿತು. ಅದರೊಂದಿಗೆ ಇಸ್ಲಾಮಿನ ಉದಾತ್ತ ತತ್ವಗಳನ್ನೂ ಪ್ರಸ್ತಾಪಿಸಿತು. ಇದರಿಂದಾಗಿ ಈಜಿಪ್ಟ್‌ನವರು ಸಾಮೂಹಿಕವಾಗಿ ಇಸ್ಲಾಮ್ ಸ್ವೀಕರಿಸುತ್ತಿರುವ ವಿಷಯವನ್ನು ಅವರಿಗೆ ತಿಳಿಸಿದರು. ಈ ಸ್ಥಿತ್ಯಂತರದ ಹಿನ್ನಲೆಯಲ್ಲಿ ಜಿಝಿಯಾ ನೀಡಿ ಒಪ್ಪಂದ ಮಾಡಿಕೊಳ್ಳುವುದೇ ಉತ್ತಮವೆಂದು ಮುಕೌಕಿಸ್‌ರಿಗೆ ತೋಚಿತು. ಈಜಿಪ್ಟ್‌ನವರು ಮುಸ್ಲಿಮರಿಗೆ ನೀಡಬೇಕಾಗಿದ್ದ ಜಿಝಿಯಾದ ಮೊತ್ತವು ಈ ಹಿಂದೆ ಅವರು ರೋಮನರಿಗೆ ನೀಡುತ್ತಿದ್ದ ಮೊತ್ತಕ್ಕಿಂತ ತುಂಬಾ ಕಡಿಮೆಯಾಗಿತ್ತು. ಆದರೆ, ರೋಮನ್ ಸಾಮ್ರಾಟ ಹಿರ್ಕಲ್(ಹರ್ಕ್ಯುಲಿಸ್) ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಹರ್ಕ್ಯುಲಿಸ್‌ರನ್ನು ಧಿಕ್ಕರಿಸಿ ಮುಕೌಸಿಸ್ ಮುಸ್ಲಿಮರೊಡನೆ ಒಪ್ಪಂದ ಮಾಡಿಕೊಂಡರು. ಇದರಿಂದಾಗಿ ಈಜಿಪ್ಟ್‌ನಲ್ಲಿ ಅಲೆಕ್ಸಾಂಡ್ರಿಯಾ ಮಾತ್ರ ಮುಸ್ಲಿಮರ ಅಧೀನವಾಗದೆ ಉಳಿದಿತ್ತು.

ಅಲೆಕ್ಸಾಂಡ್ರಿಯಾದಲ್ಲಿ

ಈಜಿಪ್ಟ್‌ನ ರಾಜಧಾನಿಯಾಗಿದ್ದ ಅಲೆಗ್ಸಾಂಡ್ರಿಯಾ ಒಂದು ರೇವು ಪಟ್ಟಣವಾಗಿರುವುದರಿಂದ ರೋಮನ್ನರಿಗೆ ಕಾನ್‌ಸ್ಟಂಟಿನೋಪಲ್‌ನಿಂದ ನೆರವು ತಲಪಲು ತುಂಬಾ ಅನುಕೂಲವಾಗಿತ್ತು. ಈಜಿಪ್ಟ್‌ನಲ್ಲಿ ರೋಮನರ ಭದ್ರ ನೆಲೆಯಾಗಿದ್ದ ಅಲೆಗ್ಸಾಂಡ್ರಿಯಾವನ್ನು ಮುಸ್ಲಿಮರು ನಿರ್ಲಕ್ಷಿಸುವಂತಿರಲಿಲ್ಲ. ಏಕೆಂದರೆ, ಅದರಿಂದಾಗಿ ಆ ತನಕ ಮುಸ್ಲಿಮರು ಜಯಿಸಿದ್ದ ಪ್ರದೇಶಗಳನ್ನು ಪುನಃ ರೋಮನರಿಗೆ ಅರ್ಪಿಸಿದಂತಾಗುತ್ತಿತ್ತು. ಆದ್ದರಿಂದ ಖಲೀಫಾ ಉಮರ್‌ರ(ರ) ಆದೇಶದನ್ವಯ ಮುಸ್ಲಿಮರು ಅಲೆಕ್ಸಾಂಡ್ರಿಯಾವನ್ನು ಸುತ್ತುವರಿದರು. ಆದರೆ, ಹಲವು ತಿಂಗಳ ಈ ದಿಗ್ಬಂಧನದಿಂದ ರೋಮನರಿಗೆ ಯಾವ ತೊಂದರೆಯೂ ಆಗಲಿಲ್ಲ. ಅವರಿಗೆ ಸಮುದ್ರದ ಮೂಲಕ ಧಾರಾಳ ಆಹಾರ ಪದಾರ್ಥ ಮತ್ತು ಆಯುಧ ಸಾಮಗ್ರಿಗಳು ಬರುತ್ತಿದ್ದುವು. ಹತಾಶರಾದ ಮುಸ್ಲಿಮರು ಅಂತಿಮವಾಗಿ ಕೋಟೆಯನ್ನು ಆಕ್ರಮಿಸಿದರು. ಮುಸ್ಲಿಮರ ಈ ದಿಢೀರ್ ಆಕ್ರಮಣದಿಂದ ಅಲ್ಲಿನ ಯೋಧರು ಕಂಗಾಲಾದರು. ಕೆಲವರು ಪ್ರಾಣ ಭಯದಿಂದ ಬಂದರಿನಲ್ಲಿ ನಿಂತಿದ್ದ ಹಡಗುಗಳಲ್ಲಿ ಆಶ್ರಯ ಪಡೆದರು. ಹಲವು ಮಂದಿಯನ್ನು ಮುಸ್ಲಿಮರು ಬಂಧಿಸಿದರು. ಹೀಗೆ ಕ್ರಿ.ಪೂ. 30ರಲ್ಲಿ ಈಜಿಪ್ಟ್‌ಗೆ ಆಗಮಿಸಿದ್ದ ರೋಮನರು ತಮ್ಮ ಕೊನೆಯ ನೆಲೆಯನ್ನೂ ಮುಸ್ಲಿಮರಿಗೆ ಒಪ್ಪಿಸಿದರು. ಈ ಒಪ್ಪಂದಕ್ಕೂ ಪುನಃ ಮುಕೌಕಿಸ್‌ರೇ ಸಹಿ ಹಾಕಿದರು. ಒಪ್ಪಂದದನ್ವಯ ರೋಮ್‌ನ ಪ್ರತಿನಿಧಿಗಳಿಗೆ(ರಾಜಕುಟುಂಬಕ್ಕೆ) ಈಜಿಪ್ಟ್‌ನಿಂದ ಹೊರ ಹೋಗುವ ಸ್ವಾತಂತ್ರ್ಯವಿತ್ತು. ಹಾಗಿದ್ದರೂ ಅವರು ಮುಸ್ಲಿಮರನ್ನು ಪುನಃ ಆಕ್ರಮಿಸುವುದಿಲ್ಲವೆಂಬುದನ್ನು ಖಚಿತಪಡಿಸಲಿಕ್ಕಾಗಿ ಅವರ ಪೈಕಿ 50 ಮಂದಿಯನ್ನೂ 150 ಸಾಮಾನ್ಯ ಯೋಧರನ್ನೂ ಭದ್ರತೆಗಾಗಿ ಮುಸ್ಲಿಮರ ಜತೆ ನೆಲೆಗೊಳಿಸಬೇಕಾಗಿತ್ತು. ಹಾಗೆಯೇ ಕ್ರೈಸ್ತ ಮತ್ತು ಯಹೂದಿಯರಿಗೆ ಆರಾಧನಾ ಸ್ವಾತಂತ್ರ್ಯ ನೀಡಿ, ಅವರ ಪ್ರಾಣ, ಸೊತ್ತು, ವಿತ್ತ ಮತ್ತು ಆರಾಧನಾಲಯಗಳನ್ನು ರಕ್ಷಿಸಬೇಕೆಂಬ ಶರತ್ತಿತ್ತು. ಅದಕ್ಕೆ ಪ್ರತಿಯಾಗಿ ವರ್ಷಕ್ಕೆ ಕೇವಲ 2 ದೀನಾರ್ ಜಿಝಿಯಾ ನಿಗದಿ ಪಡಿಸಲಾಗಿತ್ತು.

ಈ ಹಿಂದೆ ಇರಾಕ್‌ನ ಬಗ್ಗೆ ಹೇಳಿದಂತೆಯೇ ರೋಮನರಿಂದ ಮುಸ್ಲಿಮರು ಗೆದ್ದುಕೊಂಡ ಸಿರಿಯಾ, ಫೆಲೆಸ್ತೀನ್, ಈಜಿಪ್ಟ್ ಮುಂತಾದ ಪ್ರದೇಶಗಳ ಜನರು ರೋಮನರ ಆಧಿಪತ್ಯವನ್ನು ಯಾವ ರೀತಿಯಲ್ಲಿಯೂ ಮೆಚ್ಚಿರಲಿಲ್ಲ. ಏಕೆಂದರೆ ಅವರ ಆಡಳಿತವು ಅತ್ಯಂತ ಕ್ರೂರ ಮತ್ತು ಕಿರಾತವಾಗಿತ್ತು. ಅವರಿಗೆ ಅರಬರೊಂದಿಗೆ ರೋಮನರಿಗಿಂತ ಹೆಚ್ಚಿನ ಸಂಬಂಧವಿತ್ತು. ಇಸ್ಲಾಮ್ ಅರಬರಲ್ಲಿ ಮೂಡಿಸಿದ್ದ ಉನ್ನತ ಗುಣ ಸ್ವಭಾವವನ್ನು ಮನಗಂಡು ಹಲವೆಡೆ ಜನರು ರೋಮನರ ವಿರುದ್ಧ ಮುಸ್ಲಿಮರಿಗೆ ನೆರವು ನೀಡಿದ್ದರು. ವಿಜಯದ ಬಳಿಕ ಅವರ ನಿರೀಕ್ಷೆಯು ನಿಜವೆಂಬುದನ್ನು ಮುಸ್ಲಿಮರು ಸಾಬೀತುಪಡಿಸಿದರು. ಧರ್ಮ ಮತ್ತು ಆಚಾರದ ಹೆಸರಲ್ಲಿ ಯಾರನ್ನೂ ಪೀಡಿಸಲಿಲ್ಲ. ಯಾರ ಧಾರ್ಮಿಕ ಸ್ವಾತಂತ್ರ್ಯಕ್ಕೂ ಅಡ್ಡಿಯುಂಟು ಮಾಡಲಿಲ್ಲ. ಯಾರ ಧಾರ್ಮಿಕ ಚಿಹ್ನೆಗಳನ್ನೂ ಅಗೌರವಿಸಲಿಲ್ಲ.

ವೈಯಕ್ತಿಕ ನಿಯಮಗಳಲ್ಲಿ ಹಸ್ತಕ್ಷೇಪ ನಡೆಸಲಿಲ್ಲ. ರಾಜ್ಯಾಡಳಿತದಲ್ಲಿ ನಿಷ್ಪಕ್ಷ ನ್ಯಾಯ ಎದ್ದು ತೋರುತ್ತಿತ್ತು. ಅಲ್ಲಿ ವಾಸವಾಗಿದ್ದ ಮುಸ್ಲಿಮರೂ ಇಸ್ಲಾಮಿನ ಜೀವಂತ ಮಾದರಿಯಾಗಿದ್ದರು. ಈ ಕಾರಣಗಳಿಂದಾಗಿ ಹಲವು ಪ್ರದೇಶಗಳ ಜನರು ಮನಃಪೂರ್ವಕ ಇಸ್ಲಾಮ್ ಸ್ವೀಕರಿಸಿದರು. ಇತರರಿಗೂ ಆಡಳಿತಗಾರರ ಬಗ್ಗೆ ಯಾವುದೇ ಆಕ್ಷೇಪಗಳಿರಲಿಲ್ಲ. ಒಂದು ವೇಳೆ ಅಂತಹ ಸ್ಪಷ್ಟ ಆಕ್ಷೇಪಗಳಿದ್ದರೆ ಖಲೀಫಾ ಉಮರ್(ರ) ಆ ಆಡಳಿತಗಾರರ ವಿರುದ್ಧ ಕ್ರಮ ಕೈಗೊಳ್ಳುತ್ತಿದ್ದರು. ಖಲೀಫಾ ಉಮರ್‌ರಿಗೆ(ರ) ಮುಸ್ಲಿಮೇತರರಾಗಿದ್ದ ಕ್ರೈಸ್ತರೇ ಪ್ರಥಮವಾಗಿ 'ಉಮರುಲ್ ಫಾರೂಕ್'(ನ್ಯಾಯನಿಷ್ಠ ಉಮರ್) ಎಂಬ ಬಿರುದು ನೀಡಿದ್ದರೆಂದು ಇತಿಹಾಸಕಾರರು ಹೇಳಿದ್ದಾರೆ. ಒಟ್ಟಿನಲ್ಲಿ, ಉಮರ್(ರ) ಸ್ವಾಧೀನ ಪಡಿಸಿದ ಪ್ರದೇಶಗಳ ಸ್ಥಿತಿಯು ನೆಮ್ಮದಿದಾಯಕವಾಗಿತ್ತು. ಅನಂತರದ ಕಾಲಗಳಲ್ಲಿಯೂ ಇಸ್ಲಾಮಿನ ಈ ಚೈತನ್ಯವು ಆ ವಿಭಾಗದಲ್ಲಿ ಅಲ್ಪ ಪ್ರಮಾಣದಲ್ಲಾದರೂ ನೆಲೆ ನಿಂತಿತ್ತು. ಆದ್ದರಿಂದಲೇ ಇಸ್ಲಾಮ್ ಇಂದಿಗೂ ಅಲ್ಲಿ ಜೀವಂತವಾಗಿದೆ.

ಉಮರ್‌ರ(ರ) ಆಡಳಿತ

ಉಮರ್‌ರ(ರ) ಆಡಳಿತವು ಹೋರಾಟ ಮತ್ತು ವಿಜಯದ ಕಾಲವಾಗಿತ್ತು. ಆದರೆ ಈ ನಿರಂತರ ಹೋರಾಟ-ವಿಜಯಗಳ ಮಧ್ಯೆಯೂ ಅವರು ಜನರ ಕ್ಷೇಮಾಭಿವೃದ್ಧಿ ಕಾರ್ಯವನ್ನು ಕ್ಷಣಕಾಲವೂ ಮರೆಯಲಿಲ್ಲ.

ಉಮರ್(ರ) ಪ್ರಥಮವಾಗಿ ರಾಷ್ಟ್ರದ ಆಂತರಿಕ ಭದ್ರತೆ ಮತ್ತು ಶಾಂತಿ ವ್ಯವಸ್ಥೆಯನ್ನು ಸಂರಕ್ಷಿಸಬೇಕಾಗಿತ್ತು. ಏಕೆಂದರೆ, ಪ್ರವಾದಿಯವರ(ಸ) ನಿಧನದ ಬಳಿಕ ರಾಷ್ಟ್ರದ ನಾನಾ ಕಡೆಗಳಲ್ಲಿ ಗಲಭೆ ತಲೆದೋರಿದ್ದನ್ನು ಅವರು ಕಣ್ಣಾರೆ ಕಂಡಿದ್ದರು. ಅಬೂಬಕರ್‌ರ(ರ) ದಿಟ್ಟ ಕ್ರಮಗಳಿಂದ ಆ ಗಲಭೆಗಳು ಅಣಗಿದ್ದುವು. ಅವು ಪುನಃ ತಲೆಯೆತ್ತದಂತೆ ಉಮರ್(ರ) ಜಾಗ್ರತೆ ವಹಿಸಬೇಕಾಗಿತ್ತು.

ಅರೇಬಿಯನ್ ಉಪ ಭೂಖಂಡದಲ್ಲಿ ಒಂದೇ ಭಾಷೆ ರೂಢಿಯಲ್ಲಿತ್ತು. ಅಂತೆಯೇ ಅವರ ವಿಶ್ವಾಸವೂ ಒಂದಾದರೆ ಮಾತ್ರ ರಾಜಧಾನಿಯಲ್ಲಿ ಸಂಪೂರ್ಣ ಶಾಂತಿ ನೆಲೆಸಬಹುದೆಂದು ಉಮರ್(ರ) ಮನಗಂಡರು. ರಾಜಧಾನಿ ಸುಭದ್ರವಾದರೆ ಇತರೆಡೆಗಳಲ್ಲಿಯೂ ಶಾಂತಿ ನೆಲೆಸಬಹುದು. ಆದರೆ ಆಗ ಅರೇಬಿಯಾದಲ್ಲಿ ಯಹೂದಿಯರು ಮತ್ತು ಕ್ರೈಸ್ತರು ವಾಸವಾಗಿದ್ದರು. ಖೈಬರ್ ಯಹೂದಿಯರ ತಾಣವಾಗಿತ್ತು. ಒಪ್ಪಂದ ಉಲ್ಲಂಘಿಸಿ ಮುಸ್ಲಿಮರಿಗೆ ಮೋಸ ಮಾಡಿದ ಕಾರಣಕ್ಕಾಗಿ ಅವರನ್ನು ಪ್ರವಾದಿಯವರು(ಸ) ಅಲ್ಲಿಂದ ಹೊರಹಾಕಿದ್ದರು. ಆದರೆ ಹಳೆಯ ಕುತಂತ್ರಗಳನ್ನು ಅವರು ಕೊಂಚವೂ ತೊರೆದಿರಲಿಲ್ಲ. ಆದ್ದರಿಂದ ಉಮರ್(ರ) ಅವರನ್ನು ಅಲ್ಲಿಂದ ಎಬ್ಬಿಸಿ ಸಿರಿಯಾದಲ್ಲಿ ನೆಲೆಗೊಳಿಸಿದರು. ಆದರೆ ಅವರಿಗೆ ಯಾವ ಅನ್ಯಾಯವನ್ನೂ ಮಾಡಲಿಲ್ಲ. ಅವರಿಗೆ ಸಿರಿಯಾದಲ್ಲಿ ಪುನರ್ವಸತಿ ಒದಗಿಸಿದಾಗ ಅವರು ಖೈಬರ್‌ನಲ್ಲಿ ಹೊಂದಿದ್ದ ಸಂಪತ್ತನ್ನು ಸಂಪೂರ್ಣವಾಗಿ ನೀಡಿದರು.

ಇದೇ ರೀತಿ ನಜ್ರಾನ್‌ನ ಕ್ರೈಸ್ತರು ಮುಸ್ಲಿಮರ ವಿರುದ್ಧ ಯಾವಾಗಲೂ ಯಹೂದಿಯರ ಜತೆಗೂಡುತ್ತಿದ್ದರು. ಉಮರ್(ರ) ಅವರನ್ನು ಇರಾಕಿಗೆ ಸ್ಥಳಾಂತರಿಸಿದರು. ಅವರಿಗೆ ನಜ್ರಾನ್‌ನಲ್ಲಿದ್ದಂತೆಯೇ ಇರಾಕಿನಲ್ಲಿಯೂ ಜಮೀನನ್ನು ನೀಡಿದರು. ವಿಶ್ವಾಸ ಮತ್ತು ಧರ್ಮದ ಹೆಸರಲ್ಲಿ ಅವರಿಗೆ ಅನ್ಯಾಯವಾಗದಂತೆಯೂ ನೋಡಿಕೊಂಡರು. ಈ ಯುಕ್ತಿಪೂರ್ಣ ಕ್ರಮಗಳಿಂದ ಅರೇಬಿಯನ್ ಪರ್ಯಾಯದ್ವೀಪದ ಭಾಷೆ, ವಿಶ್ವಾಸ ಮತ್ತು ಆಚಾರ ಸಂಪ್ರದಾಯಗಳನ್ನು ಅವರು ಏಕೀಕರಿಸಿದರು. ಇದು ಅವರ ಮಹಾ ರಾಜಕೀಯ ಸಾಧನೆಯಾಗಿದ್ದಿತು.

ಅರೇಬಿಯಾದ ತುದಿಯಲ್ಲಿದ್ದ ಯಮನ್‌ನಂತಹ ಪ್ರದೇಶಗಳೂ ಮುಸ್ಲಿಮರು ಹೊಸತಾಗಿ ಗೆದ್ದುಕೊಂಡ ಇತರ ಪ್ರದೇಶಗಳೂ ಕೇಂದ್ರಾಧೀನ ರಾಜ್ಯಗಳಾಗಿದ್ದುವು. ಅಲ್ಲಿ ಉಮರ್(ರ) ರಾಜತಾಂತ್ರಿಕ ತಜ್ಞರನ್ನು ರಾಜ್ಯಪಾಲರಾಗಿ ನೇಮಿಸಿದರು. ಅಲ್ಲಾಹನ ವಿಧಿ ನಿಯಮಗಳನ್ವಯ ನ್ಯಾಯೋಚಿತ ಆಡಳಿತ ನಡೆಸುವುದು, ಅಲ್ಲಾಹನ ಧರ್ಮವನ್ನು ಜನರಿಗೆ ಕಲಿಸಿಕೊಡುವುದು, ಅವರ ಜೀವನವನ್ನು ಅದಕ್ಕೆ ಅನುಗುಣವಾಗಿ ವ್ಯವಸ್ಥೆಗೊಳಿಸುವುದು, ಇವು ರಾಜ್ಯಪಾಲರ ಪ್ರಧಾನ ಹೊಣೆಯಾಗಿತ್ತು. ಖಲೀಫಾ ಉಮರ್(ರ) ಅವರ ಮೇಲ್ವಿಚಾರಣೆ ನಡೆಸುತ್ತಿದ್ದರು. ರಾಜ್ಯಪಾಲರು ಕರ್ತವ್ಯ ನಿರ್ವಹಣೆಯಲ್ಲಿ ಲೋಪ ತೋರಿದರೆಂದು ಭಾಸವಾದರೆ ಆ ಕೂಡಲೇ ಅವರನ್ನು ವಜಾಗೊಳಿಸುತ್ತಿದ್ದರು. ಉಮರ್(ರ) ಮದೀನಾದಲ್ಲಿ ಪ್ರವಾದಿಯವರು(ಸ) ನಿರ್ಮಿಸಿದ್ದ ಸೋಗೆ ಹಾಸಿದ ಮಸೀದಿಯಲ್ಲಿಯೇ ಕುಳಿತು ಕೊನೆಯ ತನಕ ವಿಶಾಲವಾದ ತಮ್ಮ ಸಾಮ್ರಾಜ್ಯವನ್ನು ಆಳಿದರು. ಕಿಸ್ರಾ(ಕುಸ್ರೊ), ಕೈಸರ್(ಸೀಝರ್)ರ ಅಮೂಲ್ಯ ಸಿಂಹಾಸನಗಳನ್ನು ಗೆದ್ದುಕೊಂಡರೂ ಉಮರ್‌ರ(ರ) ಆಸನ ಬದಲಾಗಲಿಲ್ಲ. ಖಲೀಫರು ಆಡಳಿತ ವ್ಯವಹಾರ ನಡೆಸುತ್ತಿದ್ದ ಪ್ರವಾದಿಯವರ(ಸ) ಮಸೀದಿಯನ್ನು ನವೀಕರಿಸಲೂ ಅವರು ಒಪ್ಪಲಿಲ್ಲ. ಕೊನೆಗೆ ಮಸೀದಿಯಲ್ಲಿ ಜನರಿಗೆ ಸ್ಥಳಾಭಾವವುಂಟಾದಾಗ ಅದರ ಹಳೆಯ ರೂಪವನ್ನು ಬದಲಿಸದೆ ಸ್ವಲ್ಪ ವಿಶಾಲಗೊಳಿಸಿದರು.

ಉಮರ್(ರ) ಆಡಳಿತದಲ್ಲಿ ಶೂರಾ(ಸಮಾಲೋಚನೆ) ಕ್ರಮವನ್ನು ಅಂಗೀಕರಿಸಿದ್ದರು. ಕುರ್‌ಆನಿನ ಆದೇಶದನ್ವಯ ಪ್ರವಾದಿ(ಸ) ಹಾಗೂ ಅಬೂಬಕರ್(ರ) ಅವಲಂಬಿಸಿದ್ದ ಈ ಕ್ರಮವನ್ನು ಸರ್ವಥಾ ಕೈಬಿಡದಂತೆ ಸೇನಾನಾಯಕರಿಗೂ ರಾಜ್ಯಪಾಲರಿಗೂ ಅವರು ಉಪದೇಶ ನೀಡಿದ್ದರು. ಪ್ರವಾದಿಯವರ(ಸ) ನಿಕಟವರ್ತಿಗಳು ಮತ್ತು ಧರ್ಮದಲ್ಲಿ ಖ್ಯಾತನಾಮರಾದವರು ಉಮರ್‌ರ(ರ) 'ಸಮಾಲೋಚನಾ ಸಮಿತಿ'ಯ ಪ್ರಮುಖ ಸದಸ್ಯರಾಗಿದ್ದರು. ಅವರನ್ನು ಸೇನಾ ನಾಯಕರಾಗಿ ಅಥವಾ ರಾಜ್ಯಪಾಲರಾಗಿ ಕಳುಹಿಸಲು ಉಮರ್‌ರಿಗೆ(ರ) ಮನಸ್ಸಿರಲಿಲ್ಲ. ಏಕೆಂದರೆ, ರಾಷ್ಟ್ರನಾಯಕ, ಪ್ರಧಾನಿ, ಮಹಾ ದಂಡನಾಯಕ ಹಾಗೂ ಕುರ್‌ಆನ್ ಮತ್ತು ಪ್ರವಾದಿಚರ್ಯೆಯನ್ವಯ ಕಾನೂನು ನಿರ್ಮಾತೃವಾಗಿದ್ದ ಓರ್ವ ಆಡಳಿತಗಾರನಿಗೆ ಜನರನ್ನು ಸರಿಯಾದ ಹಾದಿಯಲ್ಲಿ ಮುನ್ನಡೆಸಲು ಸೂಕ್ತ ಸಲಹೆ ಸೂಚನೆಗಳು ಆಗಾಗ್ಗೆ ದೊರೆಯಬೇಕಾದ ಅಗತ್ಯವಿತ್ತು. ಆದ್ದರಿಂದಲೇ ಉಮರ್(ರ) ಪ್ರಮುಖ ಸಹಾಬಿಗಳಿಗೆ ಮದೀನಾದಿಂದ ಹೊರಹೋಗಿ ವಾಸಹೂಡುವ ಅನುಮತಿ ನೀಡಿರಲಿಲ್ಲ.

ಅಲ್ಲಾಹನ ಕಾನೂನಿನನ್ವಯ ಉಮರ್(ರ) ರಾಷ್ಟ್ರದ ಪರಮಾಧಿಕಾರಿಯಾಗಿದ್ದರು. ಆದರೆ ಈ ಅಧಿಕಾರಗಳು ಅವರನ್ನು ಕೆಡಿಸಲಿಲ್ಲ. ಅವರನ್ನು ಅಹಂಕಾರಿಯಾಗಿ ಮಾಡಲಿಲ್ಲ. ಓರ್ವ ಸಾಮಾನ್ಯ ಪ್ರಜೆಯಂತೆ ಅವರು ಬಾಳಿದರು. ಪ್ರಜೆಗಳು ಅನುಭವಿಸಿದ್ದ ಎಲ್ಲ ಕಷ್ಟಗಳನ್ನು ಅವರೂ ಅನುಭವಿಸಿದ್ದರು.

ಉಮರ್‌ರ(ರ) ಆಡಳಿತ ಕಾಲದಲ್ಲಿ ಒಮ್ಮೆ ಭೀಕರ ಬರಗಾಲವುಂಟಾಯಿತು. ಅವರು ತುಪ್ಪ ಅಥವಾ ಮಾಂಸವನ್ನು ಒಮ್ಮೆಯೂ ಮುಟ್ಟಲಿಲ್ಲ. ಇದರಿಂದಾಗಿ ಅವರ ಜೀವಕ್ಕೆ ಅಪಾಯ ಒದಗೀತೆಂದು ಜನರು ಕಳವಳ ಪಡುವಷ್ಟರ ಮಟ್ಟಿಗೆ ಅವರ ದೇಹ ಸೊರಗಿತ್ತು. ಆ ಕುರಿತು ಕೇಳಿದಾಗ ಅವರು ಹೀಗೆ ಉತ್ತರಿಸುತ್ತಿದ್ದರು. "ಜನರ ಸಂಕಷ್ಟಗಳನ್ನು ನಾನೂ ಅನುಭವಿಸದಿದ್ದರೆ ಅವರ ಸ್ಥಿತಿಗತಿ ನನಗೆ ತಿಳಿಯುವುದು ಹೇಗೆ?"

ಬರಗಾಲ ಹೋಯಿತು. ಮದೀನಾದ ಸಾರ್ವಜನಿಕ ಬೊಕ್ಕಸದಲ್ಲಿ(ಬೈತುಲ್‌ಮಾಲ್) ಸಾಕಷ್ಟು ಸಂಪತ್ತು ಸಂಗ್ರಹವಾದಾಗಲೂ ಉಮರ್(ರ) ಮದೀನಾದ ಓರ್ವ ಸಾಮಾನ್ಯ ಪೌರನಿಗೆ ದೊರೆಯುವ ಪಾಲನ್ನಷ್ಟೇ ತನಗಾಗಿ ಪಡೆಯುತ್ತಿದ್ದರು. ಅವರು ಜನರೊಡನೆ ಹೀಗೆ ಹೇಳುತ್ತಿದ್ದರು: "ಬೈತುಲ್ ಮಾಲ್‌ನಿಂದ ನನಗೆ ಅನುಮತಿಸಲಾಗಿರುವುದನ್ನು ನಾನು ನಿಮಗೆ ತಿಳಿಸುತ್ತೇನೆ. ಎರಡು ವಸ್ತ್ರ. ಒಂದು ಚಳಿಗಾಲಕ್ಕೆ ಇನ್ನೊಂದು ಸೆಕೆಗಾಲಕ್ಕೆ. ಹಜ್ಜ್ ಮತ್ತು ಉಮ್ರಾಕ್ಕೆ ಹೋಗಲು ಒಂದು ವಾಹನ(ಒಂಟೆ). ಕುರೈಶರಲ್ಲಿ ಅತಿ ಶ್ರೀಮಂತ ಅಥವಾ ಅತೀ ಬಡವನಲ್ಲದ ಓರ್ವನ ಆಹಾರದಂತೆ ನನಗೆ ಮತ್ತು ನನ್ನ ಕುಟುಂಬಕ್ಕೆ ಅಗತ್ಯವಿರುವ ಆಹಾರ. ಅನಂತರ ನಾನು ಕೇವಲ ಓರ್ವ ಮುಸ್ಲಿಮ್ ವ್ಯಕ್ತಿಯಾಗಿದ್ದೇನೆ. ಇತರರಿಗೆ ಬಾಧಿಸುವುದೆಲ್ಲವೂ ನನ್ನನ್ನೂ ಬಾಧಿಸುವುದು."

ಅವರು ಹೀಗೆ ಹೇಳುತ್ತಿದ್ದರು: "ಅಲ್ಲಾಹನ ಸಂಪತ್ತನ್ನು(ಬೈತುಲ್ ಮಾಲ್) ಓರ್ವ ಅನಾಥನ ಸಂಪತ್ತಿನಂತೆ ನಾನು ವ್ಯವಹರಿಸುತ್ತೇನೆ. ನನಗೆ ಐಶ್ವರ್ಯ ದೊರೆತಾಗ ನಾನು ಅದರಿಂದ ದೂರವಿರುತ್ತೇನೆ. ಬಡತನ ಬಂದಾಗ ನ್ಯಾಯೋಚಿತವಾಗಿ ಅದನ್ನು ಉಪಯೋಗಿಸುತ್ತೇನೆ."

ಈ ನ್ಯಾಯ-ನಿಷ್ಠೆ ಎಷ್ಟರ ಮಟ್ಟಿಗೆ ವ್ಯಾಪಿಸಿತ್ತೆಂದು ನಿಮಗೆ ತಿಳಿದಿದೆಯೇ? ಒಂದು ಘಟನೆಯನ್ನು ನೋಡಿ: ಖಲೀಫಾ ಉಮರ್(ರ) ರೋಗ ಪೀಡಿತರಾಗಿದ್ದಾರೆ. ರೋಗ ಶಮನಕ್ಕೆ ಜೇನು ಸೇವಿಸಬೇಕೆಂದು ವೈದ್ಯರು ಸಲಹೆ ನೀಡಿದ್ದಾರೆ. ಬೈತುಲ್ ಮಾಲ್‌ನಲ್ಲಿ ಧಾರಾಳ ಜೇನು ಸಂಗ್ರಹವಿದೆ. ಆದರೆ ಉಮರ್(ರ) ಅದನ್ನು ಉಪಯೋಗಿಸಲಿಲ್ಲ. ಅವರು ವೇದಿಕೆಯಲ್ಲಿ ನಿಂತು ಜನರೊಡನೆ ಮಾತಾಡುತ್ತಿದ್ದಾಗ ಹೀಗೆ ಹೇಳಿದರು: "ನೀವು ಒಪ್ಪಿಗೆ ನೀಡಿದರೆ ನನಗೆ ಅದನ್ನು ಉಪಯೋಗಿಸಬಹುದು. ಇಲ್ಲದಿದ್ದರೆ ಅದು ನನಗೆ ನಿಷಿದ್ಧ."

ಇನ್ನೊಮ್ಮೆ ಯಮನ್‌ನಿಂದ ಬೈತುಲ್ ಮಾಲ್‌ಗೆ ಕೆಲವು ಬಟ್ಟೆ ಬರೆಗಳು ಬಂದುವು. ಉಮರ್(ರ) ಅದನ್ನು ಜನರಿಗೆ ವಿತರಣೆ ಮಾಡಿದಾಗ ಎಲ್ಲರಿಗೂ ತಲಾ ಒಂದೊಂದು ಬಟ್ಟೆ ದೊರೆಯಿತು. ಖಲೀಫಾರಿಗೂ ಇತರರಂತೆಯೇ ಒಂದು ಬಟ್ಟೆ ದೊರೆಯಿತು. ಉಮರ್(ರ) ಬಹಳ ನೀಳಕಾಯದವರಾಗಿದ್ದರು. ಪುತ್ರ ಅಬ್ದುಲ್ಲಾನ ಬಟ್ಟೆಯೂ ದೊರೆತುದರಿಂದ ಅವರಿಗೆ

ಒಂದು ಅಂಗಿ ಹೊಲಿಸಲು ಸಾಧ್ಯವಾಯಿತು. ಹೊಸ ಬಟ್ಟೆ ಧರಿಸಿ ಉಮರ್(ರ) ವೇದಿಕೆ ಏರಿದರು. ಜನರಿಗೆ ಅಲ್ಲಾಹನ ಮಾರ್ಗದಲ್ಲಿ ಹೋರಾಡುವ ಕರೆ ನೀಡಿದರು. ಆಗ ಒಬ್ಬರು ಸಭೆಯಲ್ಲಿ ಎದ್ದು ನಿಂತು ಹೀಗೆಂದರು:

"ಇಲ್ಲ. ನಾವು ನಿಮ್ಮ ಮಾತನ್ನು ಅನುಸರಿಸುವುದಿಲ್ಲ."

"ಯಾಕೆ?" ಉಮರ್(ರ) ಕೇಳಿದರು.

"ಯಮನ್‌ನಿಂದ ಬಂದ ಬಟ್ಟೆಯಲ್ಲಿ ನಮ್ಮಂತೆಯೇ ನಿಮಗೂ ಕೇವಲ ಒಂದೇ ಪಾಲು ದೊರೆತಿದೆ. ಅದರಿಂದ ನಿಮ್ಮಂತಹ ನೀಳಕಾಯದವರಿಗೆ ಅಂಗಿ ತಯಾರಿಸಲು ಸಾಧ್ಯವಿಲ್ಲ. ಹಾಗಿರುತ್ತಾ ನೀವು ಈ ಅಂಗಿ ಹೊಲಿಸಿದ್ದು ಹೇಗೆ?" ಎಂದು ಕೇಳಿದರು.

ಉಮರ್‌ರ(ರ) ಸ್ವಂತ ನಿಲುಮೆಯಂತೆ ಆ ವ್ಯಕ್ತಿಯ ಮಾತು ನ್ಯಾಯೋಚಿತವಾಗಿತ್ತು. ಆದ್ದರಿಂದ ಅವರು ಸಭೆಯಲ್ಲಿ ಕುಳಿತಿದ್ದ ಪುತ್ರ ಅಬ್ದುಲ್ಲಾರತ್ತ ನೋಡಿ ಹೀಗೆಂದರು:

"ಅಬ್ದುಲ್ಲಾ, ನೀನೇ ಅದಕ್ಕೆ ಉತ್ತರ ನೀಡು."

"ನನ್ನ ಪಾಲಿಗೆ ಬಂದ ಬಟ್ಟೆಯನ್ನು ಸೇರಿಸಿ ಅವರು ಆ ಅಂಗಿಯನ್ನು ಹೊಲಿಸಿದ್ದಾರೆ" ಅಬ್ದುಲ್ಲಾ ವಿವರಿಸಿದರು.

ಇದರಿಂದ ಪ್ರಶ್ನೆ ಕೇಳಿದವರ ಸಂದೇಹ ದೂರವಾಯಿತು. ಅವರು ಹೇಳಿದರು, "ಹಾಗಾದರೆ ನಾವು ನಿಮ್ಮನ್ನು ಅನುಸರಿಸುತ್ತೇವೆ."

ಹೌದು, ಉಮರ್‌ರಿಗೆ(ರ) ಖಿಲಾಫತ್ ಒಂದು ಪದವಿಯಾಗಿರಲಿಲ್ಲ. ಅದೊಂದು ಭಾರವಾದ ಹೊರೆಯಾಗಿತ್ತು. ಅವರು ಅಲ್ಲಾಹನ ಸಂಪತ್ತಿನ ಓರ್ವ ಪ್ರಾಮಾಣಿಕ ಕಾವಲುಗಾರರಾಗಿದ್ದರು. ಆಡಳಿತದಲ್ಲಿ ಜನರ ಸ್ವಾತಂತ್ರ್ಯ, ಮಾನ, ಹಕ್ಕು ಮತ್ತು ಐಕ್ಯವನ್ನು ರಕ್ಷಿಸುವ ಹೊಣೆ ನೀಡಲಾದ ಓರ್ವ ಕಾವಲುಗಾರ. ಅವರು ಜನರೊಡನೆ ತಂದೆಯು ತಮ್ಮ ಮಕ್ಕಳೊಡನೆ ವರ್ತಿಸುವಂತೆ ವ್ಯವಹರಿಸಿದರು. ಆದ್ದರಿಂದ ಜನರೂ ಅವರನ್ನು ಓರ್ವ ತಂದೆಯಂತೆ ಪ್ರೀತಿಸಿ ಗೌರವಿಸಿದರು.

ಉಮರ್‌ರ(ರ) ಸ್ವಭಾವದಲ್ಲಿ ಕಠೋರತೆಯಿತ್ತು. ಅನ್ಯಾಯ ಅಕ್ರಮಗಳ ವಿರುದ್ಧ ಅವರು ಕಠೋರರಾಗಿದ್ದರು. ಆದರೆ, ಸತ್ಯದ ಮುಂದೆ ಅವರು ಅತ್ಯಂತ ವಿನೀತರಾಗಿದ್ದರು.

ಉಮರ್‌ರ(ರ) ನ್ಯಾಯ ಮತ್ತು ಜನ ಪ್ರೇಮವು ಬಹಳ ಪ್ರಸಿದ್ಧವಾಗಿದೆ. ರಾತ್ರಿಯಲ್ಲಿ ಜನರ ಸ್ಥಿತಿಗತಿಗಳನ್ನು ಅರಿಯಲಿಕ್ಕಾಗಿ ವೇಷ ಬದಲಿಸಿ ತಿರುಗಾಡುತ್ತಿದ್ದ ಖಲೀಫ ಉಮರ್‌ರ(ರ) ಕಥೆಯನ್ನು ತಿಳಿಯದವರು ಯಾರಿದ್ದಾರೆ!

ನ್ಯಾಯ ನಿರ್ವಹಣೆಯ ವಿಷಯದಲ್ಲಿ ಉಮರ್‌ರ ನ್ಯಾಯಾಲಯದಲ್ಲಿ ನಾಯಕ-ಗುಲಾಮ, ದೊಡ್ಡವ-ಸಣ್ಣವ, ಹತ್ತಿರದವ-ದೂರದವ ಎಂಬ ಭೇದಭಾವವಿರಲಿಲ್ಲ. ತಮ್ಮ ಮನೆಯವರು ತಪ್ಪು ಮಾಡಿದರೆ ಅವರಿಗೆ ಇಮ್ಮಡಿ ಶಿಕ್ಷೆ ನೀಡುತ್ತಿದ್ದರು. ಈಜಿಪ್ಟ್‌ನಲ್ಲಿ ಮದ್ಯಪಾನ ಮಾಡಿದ ತನ್ನ ಪುತ್ರ ಅಬ್ದುರ್ರಹ್ಮಾನ್‌ನಿಗೆ ಅಲ್ಲಿನ ರಾಜ್ಯಪಾಲರಾಗಿದ್ದ ಅಮ್ರ್ ಬಿನ್ ಆಸ್ ಕಾನೂನು ಪ್ರಕಾರ ದಂಡಿಸಿದ್ದರು. ಆದರೆ, ಆ ದಂಡನೆಯನ್ನು ಬಹಿರಂಗವಾಗಿ ನೀಡಲಿಲ್ಲವೆಂಬ ಕಾರಣಕ್ಕಾಗಿ ಪುತ್ರನನ್ನು ಮದೀನಾಕ್ಕೆ ಕರೆಸಿ ಜನ

ಸಮ್ಮುಖದಲ್ಲಿ ಛಡಿಯೇಟು ಕೊಡಿಸಿದರು. ಇಂತಹ ಅದೆಷ್ಟೋ ಘಟನೆಗಳು ಅವರ ಆಡಳಿತ ಕಾಲದಲ್ಲಿ ನಡೆದಿವೆ!

ಆಡಳಿತ ಸುಧಾರಣೆ

ಪ್ರವಾದಿಯವರು(ಸ) ಕಟ್ಟಿ ಬೆಳೆಸಿದ ಹಾಗೂ ಅಬೂಬಕರ್(ರ) ಶೋಭಾಯಮಾನ ಗೊಳಿಸಿದ್ದ ಇಸ್ಲಾಮಿ ರಾಷ್ಟ್ರವನ್ನು ಉಮರ್(ರ) ಉತ್ತಮ ರೀತಿಯಲ್ಲಿ ಮುನ್ನಡೆಸಿ ವಿಸ್ತರಿಸಿದರು. ಅವರು ಬೈತುಲ್‌ಮಾಲನ್ನು ರಾಷ್ಟ್ರದ ಬೊಕ್ಕಸವಾಗಿ ಪರಿವರ್ತಿಸಿ ದಾಖಲೆ ಪುಸ್ತಕಗಳನ್ನಿರಿಸಿ ಅದಕ್ಕೆ ಕಚೇರಿಯ ಸ್ವರೂಪ ನೀಡಿದರು. ಗಡಿ ರಕ್ಷಣೆಗಾಗಿ ಒಂದು ಸೇನೆಯನ್ನು ಖಾಯಂಗೊಳಿಸಿದರು. ಅಂಚೆ ಸೌಲಭ್ಯವನ್ನು ಒದಗಿಸಿದರು. ದೇಶದ ವಿವಿಧೆಡೆಗಳಲ್ಲಿ ನ್ಯಾಯಾಧೀಶರನ್ನು ನೇಮಿಸಿದರು. ಅಧಿಕಾರಿಗಳಿಗೆ ಸಂಬಳದ ಏರ್ಪಾಡು ಮಾಡಿದರು. ರಾಷ್ಟ್ರದಾದ್ಯಂತ ಕಾಲ ಗಣನೆಗಾಗಿ ಹಿಜರಿ ಶಕವನ್ನು ರೂಢಿಗೆ ತಂದರು. ಅಬೂಬಕರ್‌ರ(ರ) ಕಾಲದಲ್ಲಿ ಜಯಿಸಿದ ಪ್ರದೇಶಗಳನ್ನು ಸೈನ್ಯಗಳಿಗೆ ಹಂಚಿ ಕೊಡಲಾಗುತ್ತಿತ್ತು. ಉಮರ್(ರ) ಆ ಕ್ರಮವನ್ನು ಬದಲಾಯಿಸಿದರು. ಅವುಗಳನ್ನು ರಾಷ್ಟ್ರದ ಸಾರ್ವಜನಿಕ ಸಂಪತ್ತೆಂದು ಪರಿಗಣಿಸಿ ಅವುಗಳ ಹಳೆಯ ಮಾಲಿಕರಿಗೆ ಬೇಸಾಯಕ್ಕೆ ನೀಡಿದರು. ಅವರಿಂದ ಕಂದಾಯ ವಸೂಲು ಮಾಡಿದರು. ಇಂತಹ ಅನೇಕ ಸುಧಾರಣಾಕ್ರಮಗಳಿಂದ ಉಮರ್(ರ) ಇಸ್ಲಾಮಿ ರಾಷ್ಟ್ರವನ್ನು ಅಂದಿನ ಮುಂದುವರಿದ ರಾಷ್ಟ್ರವಾಗಿ ಬೆಳೆಸಿದರು. ಅವರ ಎಲ್ಲ ಸುಧಾರಣೆಗಳಿಗೂ ಕುರ್‌ಆನ್ ಮತ್ತು ಪ್ರವಾದಿಚರ್ಯೆಯೇ ಮೂಲಾಧಾರವಾಗಿತ್ತು. ಆದ್ದರಿಂದಲೇ ಉಮರ್‌ರ(ರ) ಆಡಳಿತ ಕಾಲವು ಅತ್ಯುತ್ತಮವೆಂದು ಪರಿಗಣಿಸಲ್ಪಡುತ್ತಿದೆ.

ಹುತಾತ್ಮ

ಇಸ್ಲಾಮಿನ ವೈರಿಗಳು ರೂಪಿಸಿದ ಒಳಸಂಚಿನಿಂದ ಉಮರ್‌ರ(ರ) ಕೊಲೆಯಾಯಿತು. ಮುಗೀರತ್ ಬಿನ್ ಶುಅ್‌ಬರ(ರ) ಗುಲಾಮ ಫೈರೋಝ್ ಅಬೂಲುಅ್‌ಲುಅ್ ಎಂಬೋರ್ವ ಫಾರ್ಸಿಯು ಎರಡು ಅಲಗಿನ ಕಠಾರಿಯಿಂದ ಆ ಮಹಾಪುರುಷರನ್ನು ಇರಿದನು. ಅವರು ಜನರಿಗೆ ಇಮಾಮ್ ಆಗಿ ನಿಂತು ಪ್ರಭಾತ ನಮಾಝ್ ನಿರ್ವಹಿಸುತ್ತಿದ್ದರು. ಆಗ ಕತ್ತಲೆ ಸಂಪೂರ್ಣ ಸರಿದಿರಲಿಲ್ಲ. ಈ ಸಂದರ್ಭದಲ್ಲಿ ಆ ವಂಚಕನು ಒಳಗೆ ಬಂದು ಖಲೀಫರಿಗೆ ಒಂದೇ ಸವನೆ ಇರಿದನು. ಬೊಬ್ಬೆ ಕೇಳಿಸಿದಾಗ ಜನರು ಹಂತಕನನ್ನು ಹಿಡಿಯಲು ಮುನ್ನುಗ್ಗಿದ್ದರು. ಆದರೆ ಆತನು ಕಠಾರಿಯನ್ನು ಬೀಸಿ ಹಲವರನ್ನು ಘಾಸಿಗೊಳಿಸಿದನು. ಕೊನೆಗೆ ಒಬ್ಬರು ಹಿಂಬದಿಯಿಂದ ಹೋಗಿ ಆತನನ್ನು ಹಿಡಿದಾಗ ತಪ್ಪಿಸಲು ಸಾಧ್ಯವಿಲ್ಲವೆಂದು ಮನಗಂಡು ಆ ದ್ರೋಹಿಯು ಕಠಾರಿಯನ್ನು ತನ್ನ ಎದೆಗೆ ಚುಚ್ಚಿದನು. ಹಂತಕನು ಆತ್ಮಹತ್ಯೆ ಮಾಡಿಕೊಂಡರೂ ಉಮರ್(ರ) ಪದಚ್ಯುತಗೊಳಿಸಿದ್ದ ಪರ್ಶಿಯನ್ ಆಡಳಿತಗಾರರು, ಕ್ರೈಸ್ತರು ಮತ್ತು ಯಹೂದಿಯರು ಈ ಸಂಚಿನಲ್ಲಿ ಭಾಗಿಯಾಗಿದ್ದರೆಂದು ವ್ಯಕ್ತವಾಗಿತ್ತು.

ಆದರೆ, ಅದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸುವುದಕ್ಕಿಂತ ಮೊದಲೇ, ತಾಳ್ಮೆಗೆಟ್ಟ ಉಬೈದುಲ್ಲಾ ಬಿನ್ ಉಮರ್(ರ), ಸಂಶಯಿತ ಪರ್ಶಿಯಾದ ಮಾಜೀ ದಂಡನಾಯಕ ಹರ್ಮುಝಾನ್ ಮತ್ತು ಹೀರಾದ ಜುಫೈನಾ ಎಂಬೋರ್ವ ಕ್ರೈಸ್ತನನ್ನು, ಅವರ ಜತೆಗೆ ಅಬೂಲುಅ್‌ಲುಅಿನ ಕಿರಿಯ ಮಗಳನ್ನು ಕೊಂದು ಹಾಕಿದರು. ಕೊಲೆಗಾರ ಫೈರೋಝ್ ಈ ಹಿಂದೆ ಉಮರ್‌ರ(ರ) ಬಳಿಗೆ ಒಂದು ದೂರು ತಂದಿದ್ದನು. ಆತನ ಯಜಮಾನ ಮುಗೀರನಿಗೆ ಅವನು ದಿನಂಪ್ರತಿ 2 ದಿರ್ಹಮ್ ನೀಡಬೇಕಾಗಿತ್ತು. ಉಮರ್(ರ) ಫೈರೋಝ್‌ನ ಕೆಲಸದ ಬಗ್ಗೆ ಕೇಳಿ ತಿಳಿದುಕೊಂಡರು. ಆತನಿಗೆ ಕಮ್ಮಾರ, ಬಡಗಿ ಮತ್ತು ಕೆತ್ತನೆ ಕೆಲಸ ತಿಳಿದಿತ್ತು. ಇಂತಹ ನುರಿತ ಗುಲಾಮನು, ಆತನನ್ನು ಖರೀದಿಸಿದ ಯಜಮಾನನಿಗೆ ದಿನಕ್ಕೆ 2 ದಿರ್ಹಮ್ ನೀಡಲು ಕಷ್ಟವಿದೆಯೆಂದು ಉಮರ್‌ರಿಗೆ(ರ) ಅನಿಸಲಿಲ್ಲ. ಅವರು ಹೇಳಿದರು, "ಗಾಳಿಯಿಂದ ತಿರುಗುವಂತಹ ಬೀಸುವ ಕಲ್ಲನ್ನು ತಯಾರಿಸಲು ನಿನಗೆ ಸಾಧ್ಯವಿದೆಯೆಂದು ಹೇಳಿದೆಯಲ್ಲವೇ, ಅಂತಹ ಒಂದು ಕಲ್ಲನ್ನು ನನಗೂ ತಯಾರಿಸಿ ಕೊಡುವೆಯಾ?" ಫೈರೋಝ್ ಇಷ್ಟೊಂದು ನಿಪುಣ ಕಾರ್ಮಿಕನಾಗಿರುವುದರಿಂದ ಆತನು ನೀಡುವ 2 ದಿರ್ಹಮ್ ತೀರಾ ಅಲ್ಪವೆಂದು ಅವನಿಗೆ ಮನಗಾಣಿಸುವುದೇ ಖಲೀಫರ ಉದ್ದೇಶವಾಗಿತ್ತು. ಆದರೆ, ಫೈರೋಝ್ ಆ ಮಾತುಗಳನ್ನು ಕೇಳಿದಾಗ ಮೊದಲೇ ನಿರ್ಧರಿಸಿದ್ದನೋ ಎಂಬಂತೆ ಒಂದು ಬೆದರಿಕೆಯನ್ನು ಹಾಕಿದ. ಆತ ಹೀಗೆಂದ: "ಸರಿ, ಪೂರ್ವ ಪಶ್ಚಿಮಗಳಲ್ಲಿ ಪ್ರಖ್ಯಾತವಾಗುವಂತಹ ಒಂದು ಬೀಸುವ ಕಲ್ಲನ್ನು ನಾನು ನಿಮಗೆ ತಯಾರಿಸಿ ಕೊಡುತ್ತೇನೆ."

ಇದೊಂದು ಕೊಲೆ ಬೆದರಿಕೆಯೆಂದು ಖಲೀಫಾರಿಗೆ ಕೂಡಲೇ ತಿಳಿಯಿತು. ಅವರು ಸಂಗಡಿಗರಿಗೆ ಆ ವಿಷಯ ತಿಳಿಸಿದರು. ಆದರೆ, ಕೇವಲ ಬೆದರಿಸಿದ ಕಾರಣಕ್ಕಾಗಿ ಯಾರನ್ನೇ ಆಗಲಿ - ಆತ ಓರ್ವ ಗುಲಾಮನಾಗಿದ್ದರೂ ಸರಿ - ಬಂಧಿಸಲು ಅಥವಾ ದಂಡಿಸಲು ಉಮರ್‌ರ(ರ) ನ್ಯಾಯಪ್ರಜ್ಞೆ ಒಪ್ಪಲಿಲ್ಲ.

ಫೈರೋಝ್ ಆತನ ಉದ್ದೇಶ ಈಡೇರಿಸಿದ. ಆದರೆ ಅದು ಫೈರೋಝ್ ವೈಯಕ್ತಿಕ ದ್ವೇಷದಿಂದ ಸ್ವಯಂ ಮಾಡಿದ ಕ್ರೂರ ಕೃತ್ಯವಾಗಿರಲಿಲ್ಲ. ಬದಲಾಗಿ ಇತರ ಹಲವರು ಯೋಜಿಸಿದ್ದ ಒಳಸಂಚನ್ನು ಕೆಲವು ಸ್ವಂತ ಕಾರಣಗಳ ಹಿನ್ನಲೆಯಲ್ಲಿ ಫೈರೋಝ್ ಕಾರ್ಯಗತಗೊಳಿಸಿದ್ದ. ಹಿಂದಿನ ದಿನ ಆತನು ಪರ್ಶಿಯಾದ ಮಾಜಿ ರಾಜ್ಯಪಾಲ ಮತ್ತು ದಂಡನಾಯಕನಾಗಿದ್ದ ಹರ್ಮುಝಾನ್, ಪರ್ಶಿಯನ್ನರೊಂದಿಗೆ ಮೈತ್ರಿ ಹೊಂದಿದ್ದ ಹಿರಾದ ಕ್ರೈಸ್ತರಲ್ಲಿ ಪ್ರಮುಖನಾಗಿದ್ದ ಜುಫೈನಾರೊಂದಿಗೆ ಒಳಸಂಚು ನಡೆಸುತ್ತಿದ್ದುದನ್ನು ಅಬ್ದುರ್ರಹ್ಮಾನ್ ಬಿನ್ ಔಫ್(ರ) ನೋಡಿದ್ದರು. ಆ ವೇಳೆ ಆತನ ಕೈಯಿಂದ ಕಠಾರಿ ಜಾರಿ ಬಿದ್ದುದನ್ನೂ ಅವರು ಕಂಡಿದ್ದರು. ಖಲೀಫಾರನ್ನು ವಧಿಸಲು ಫೈರೋಝ್ ಅದೇ ಕಠಾರಿಯನ್ನು ಬಳಸಿದ್ದನೆಂದು ಅಬ್ದುರ್ರಹ್ಮಾನ್(ರ) ಅನಂತರ ಗುರುತಿಸಿದ್ದರು. ಹಾಗೆಯೇ ಪ್ರವಾದಿಯವರ(ಸ) ಕಾಲದಲ್ಲಿ ಯಹೂದಿಯಾಗಿ ಬಾಳಿದ ಮತ್ತು ಉಮರ್(ರ) ಅವರ ಕೊನೆಯ ಕಾಲದಲ್ಲಿ ಇಸ್ಲಾಮ್ ಸ್ವೀಕರಿಸಿದಂತೆ ನಟಿಸಿದ್ದ ಕಅಬುಲ್ ಅಹ್ಬಾರ್ ಎಂಬಾತನು ಉಮರ್‌ರ(ರ) ಹತ್ಯೆಯಾಗುವ ದಿನ ಮತ್ತು ವೇಳೆಯನ್ನು ಮುಂಚಿತವಾಗಿ ತಿಳಿಸಿದ್ದನು. ಆದ್ದರಿಂದ, ಹತ್ಯೆಯಲ್ಲಿ ಆತನ

ಉಸ್ಮಾನ್ ಬಿನ್ ಅಫ್ಫಾನ್(ರ)

(ಆಡಳಿತ ಕಾಲ-ಹಿ.ಶ.: 23-35, ಕ್ರಿ.ಶ.: 644-656)

ಉಸ್ಮಾನ್(ರ) ಕ್ರಿ.ಶ. 576ರಲ್ಲಿ ಹಿಜಾಝ್‌ನ ಅತಿ ಸಮೃದ್ಧವಾದ ತಾಯಿಫ್‌ನಲ್ಲಿ ಜನಿಸಿದರು. ಆಗ ಪ್ರವಾದಿಯವರಿಗೆ(ಸ) 5ವರ್ಷ ವಯಸ್ಸಾಗಿತ್ತು. ತಂದೆ ಅಫ್ಫಾನ್ ಮತ್ತು ಪಿತಾಮಹ 'ಉಮಯ್ಯ'ರಿಗೆ ಜೋಡಿಸಿ ಅವರ ಕುಟುಂಬವು 'ಬನೂ ಉಮಯ್ಯ' ಎಂಬ ಹೆಸರು ಪಡೆದಿತ್ತು. ಅದು ಕುರೈಶಿ ವಂಶದ ಪ್ರಸಿದ್ಧ ಕುಟುಂಬವಾಗಿತ್ತು. ಪ್ರವಾದಿಯವರ(ಸ) ಹಾಶಿಮ್ ಕುಟುಂಬದೊಂದಿಗೆ ಅವರು ಎಲ್ಲ ಕಾರ್ಯಗಳಲ್ಲಿಯೂ ಸದಾ ಸ್ಪರ್ಧಿಸುತ್ತಿದ್ದರು. ಹಿಂದಿನ ಕಾಲದಿಂದಲೇ ನಡೆದು ಬಂದ ಈ ಸ್ಪರ್ಧೆಯಿಂದಾಗಿ ಮುಹಮ್ಮದರಿಗೆ(ಸ) ಪ್ರವಾದಿತ್ವ ದೊರೆತಾಗ ಅವರ ಪೈಕಿ ಯಾರೂ ಅವರಲ್ಲಿ ವಿಶ್ವಾಸವಿರಿಸಲಿಲ್ಲ. ಮಾತ್ರವಲ್ಲ ಅವರಲ್ಲಿ ಅನೇಕ ಮಂದಿ ಪ್ರವಾದಿವರ್ಯರನ್ನು(ಸ) ತೀವ್ರವಾಗಿ ವಿರೋಧಿಸಿದರು. ಪ್ರವಾದಿಯವರನ್ನು(ಸ) ವಿನಾಕಾರಣ ಬೈದು ಗೇಲಿ ಮಾಡುತ್ತಿದ್ದ ಹಕಮ್, ಉಸ್ಮಾನ್‌ರ(ರ) ಪಿತೃ ಸಹೋದರರಾಗಿದ್ದರು. ಅಂತೆಯೇ ಉಸ್ಮಾನ್‌ರ(ರ) ತಂದೆಯ ಮರಣದ ಬಳಿಕ ಅವರ ತಾಯಿಯನ್ನು ವಿವಾಹವಾಗಿದ್ದ ಉಖ್‌ಬಾ, ಪ್ರವಾದಿ(ಸ) ನಮಾಝ್ ಮಾಡುತ್ತಿದ್ದಾಗ ಅವರ ಬೆನ್ನಿಗೆ ಒದ್ದು ಕೊರಳಿಗೆ ಒಂಟೆಯ ಕರುಳನ್ನು ಹೇರಿದ್ದರು.

ಹೀಗೆ ಉಸ್ಮಾನ್‌ರ(ರ) ಸಂಬಂಧಿಕರು ಸಂಪೂರ್ಣವಾಗಿ ಪ್ರವಾದಿವರ್ಯರನ್ನು(ಸ) ದ್ವೇಷಿಸಿ, ಇಸ್ಲಾಮ್ ಸ್ವೀಕರಿಸಿದವರನ್ನು ಪೀಡಿಸುತ್ತಿದ್ದಂತಹ ಸಂದರ್ಭದಲ್ಲಿ ಉಸ್ಮಾನ್(ರ) ಧೈರ್ಯದಿಂದ ಇಸ್ಲಾಮ್ ಸೇರಿದರು. ಮುಸ್ಲಿಮರಾದ ಉಸ್ಮಾನ್‌ರನ್ನೂ(ರ) ಕುಟುಂಬದವರು ಬಿಡಲಿಲ್ಲ. ಪಿತೃ ಸಹೋದರ ಹಕಮ್ ಅವರನ್ನು ಹಗ್ಗದಿಂದ ಬಿಗಿದು ಕಠೋರವಾಗಿ ಹಿಂಸಿಸಿದರು. ಹೊಸ ಧರ್ಮವನ್ನು ತೊರೆಯುವಂತೆ ಬಲಾತ್ಕರಿಸಿದರು. ಆದರೆ, ಈ ಸತ್ಯಮಾರ್ಗವನ್ನು ನಾನು ಸರ್ವಥಾ ತೊರೆಯಲಾರೆನೆಂದು ಉಸ್ಮಾನ್(ರ) ಪ್ರತಿಜ್ಞೆ ಮಾಡಿದರು. ಕೊನೆಗೆ ನಿರಾಶನಾದ ಹಕಮ್ ತನ್ನ ಹಠವನ್ನು ತೊರೆದು ಉಸ್ಮಾನ್‌ರನ್ನು(ರ) ಬಿಡಬೇಕಾಯಿತು. ದೃಢವಿಶ್ವಾಸಿಯಾಗಿದ್ದ ಉಸ್ಮಾನ್(ರ) ಎಲ್ಲ ಸಂಕಷ್ಟಗಳನ್ನೂ ಸಹಿಸಿ ತನ್ನ ಪ್ರತಿಜ್ಞೆಯನ್ನು ಈಡೇರಿಸಿದರು.

ಚಿಕ್ಕಂದಿನಿಂದಲೇ ಸುಖದ ಸುಪ್ಪತಿಗೆಯಲ್ಲಿ ಬೆಳೆದ ಉಸ್ಮಾನ್‌ರು(ರ) ಬಹಳ ಜನಪ್ರಿಯರಾಗಿದ್ದರು. ತಂದೆಯಂತೆಯೇ ವ್ಯಾಪಾರ ಮಾಡಿ ಕುರೈಶರಲ್ಲಿ ಓರ್ವ ಗಣ್ಯ ಶ್ರೀಮಂತರೆಂದು ಪ್ರಸಿದ್ಧರಾದರು. ಆದ್ದರಿಂದ, ಬಹಳ ಕಷ್ಟದಾಯಕವಾಗಿದ್ದ ಆರಂಭ ಕಾಲದಲ್ಲಿಯೇ ಉಸ್ಮಾನ್(ರ) ಇಸ್ಲಾಮ್ ಧರ್ಮ ಸ್ವೀಕರಿಸಿದಾಗ ಪ್ರವಾದಿಯವರಿಗೆ(ಸ) ತುಂಬಾ ಸಂತೋಷವಾಯಿತು. ತಮ್ಮ ಪುತ್ರಿ ರುಕಿಯ್ಯಾರನ್ನು(ರ) ಅವರಿಗೆ ವಿವಾಹ ಮಾಡಿಸಿ

ಕೊಟ್ಟರು. ಅವರನ್ನು ಅಬೂಲಹಬ್‌ನ ಪುತ್ರ ಉತ್ಬಾ ಮೊದಲು ವಿವಾಹವಾಗಿದ್ದರು. ಮುಹಮ್ಮದ್(ಸ) ಪ್ರವಾದಿಯಾಗಿ ನಿಯುಕ್ತರಾದಾಗ ಇಸ್ಲಾಮ್ ಮತ್ತು ಮುಸ್ಲಿಮರನ್ನು ಕಟುವಾಗಿ ದ್ವೇಷಿಸುತ್ತಿದ್ದ ಅಬೂಲಹಬ್ ಅವರಿಗೆ ವಿವಾಹ ವಿಚ್ಛೇದನ ನೀಡಿಸಿದ್ದನು. ಇದು ಉಸ್ಮಾನ್‌ರ(ರ) ಮಟ್ಟಿಗೆ ಬಹುದೊಡ್ಡ ಅನುಗ್ರಹವಾಯಿತು.

ಆರಂಭ ಕಾಲದಲ್ಲಿ ಮುಸ್ಲಿಮರಿಗೆ ಮಕ್ಕಾದಲ್ಲಿ ಬದುಕು ದುಸ್ತರವಾದಾಗ ಪ್ರವಾದಿಯವರು(ಸ) ಅವರಿಗೆ ಇಥಿಯೋಪಿಯಾಕ್ಕೆ ವಲಸೆ ಹೋಗುವ ಅನುಮತಿ ನೀಡಿದರು. ಆ 'ಮುಹಾಜಿರ್'ರ ಕೂಟದಲ್ಲಿ ಉಸ್ಮಾನ್(ರ) ಮತ್ತು ಅವರ ಪತ್ನಿ ರುಕಿಯ್ಯಾ(ರ) ಮೊದಲಿಗರಾಗಿದ್ದರು. ಅನಂತರ ಊರಿನಲ್ಲಿ ಪರಿಸ್ಥಿತಿ ಸುಧಾರಿಸಿದೆಯೆಂಬ ಸುದ್ದಿ ತಿಳಿದು ಮಕ್ಕಾಕ್ಕೆ ಮರಳಿದರು. ಆದರೆ ಆ ಸುದ್ದಿ ನಿಜವಾಗಿರಲಿಲ್ಲ. ಸಂಕಷ್ಟಗಳು ಮತ್ತಷ್ಟು ಹೆಚ್ಚಿದುವು. ತರುವಾಯ ಪ್ರವಾದಿ(ಸ) ಮತ್ತು ಸಹಾಬಿಗಳು ಮದೀನಾಕ್ಕೆ ವಲಸೆ ಹೋಗುವಾಗ ಈ ದಂಪತಿಗಳೂ ಅವರ ಜತೆಗೂಡಿದರು.

ದುನ್ನೂರೈನ್(ಎರಡು ಪ್ರಕಾಶದವರು)

ಹಿಜರಿ ಎರಡನೆಯ ವರ್ಷದಲ್ಲಿ ಬದ್ರ್ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಸತ್ಯವಿಶ್ವಾಸಿಗಳು ಮತ್ತು ಸತ್ಯನಿಷೇಧಿಗಳ ನಡುವೆ ಜೀವನ್ಮರಣ ಹೋರಾಟ ನಡೆದಿತ್ತು. ಆ ಯುದ್ಧದಿಂದಾಗಿಯೇ ಸತ್ಯದ ಧ್ವಜ ಮೇಲೇರಲಾರಂಭಿಸಿತ್ತು. ಆದರೆ ಉಸ್ಮಾನ್‌ರಿಗೆ(ರ) ಆ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅಂದು ಪ್ರವಾದಿವರ್ಯರ(ಸ) ಪುತ್ರಿ ಮತ್ತು ಉಸ್ಮಾನ್(ರ) ಅವರ ಪತ್ನಿಯಾಗಿದ್ದ ರುಕಿಯ್ಯಾ(ರ) ತೀವ್ರ ರೋಗದಿಂದ ಬಳಲುತ್ತಿದ್ದರು. ಅವರ ಶುಶ್ರೂಷೆ ಮಾಡಲು ಮತ್ತು ಊರಿನ ಆಡಳಿತ ವ್ಯವಹಾರ ನೋಡಿಕೊಳ್ಳಲಿಕ್ಕಾಗಿ ಮದೀನಾದಲ್ಲಿಯೇ ನಿಲ್ಲುವಂತೆ ಪ್ರವಾದಿಯವರು(ಸ) ತಿಳಿಸಿದ್ದರು. ಆದ್ದರಿಂದ, ಪ್ರವಾದಿಯವರು(ಸ) ಉಸ್ಮಾನ್‌ರಿಗೆ(ರ) ಬದ್ರ್‌ನಲ್ಲಿ ಭಾಗವಹಿಸಿದ ಓರ್ವ ಯೋಧನ ಪಾಲನ್ನು ನೀಡಿ ಅವರನ್ನು ಬದರೀಗಳ ಯಾದಿಯಲ್ಲಿ ಸೇರಿಸಿದರು.

ರುಕಿಯ್ಯಾ(ರ) ಆ ರೋಗದಿಂದ ಮರಣ ಹೊಂದಿದರು. ಸದ್ಗುಣ ಸಂಪನ್ನೆ ಮತ್ತು ರೂಪವತಿಯಾಗಿದ್ದ ಪತ್ನಿಯ ನಿಧನದಿಂದ ಉಸ್ಮಾನ್(ರ) ಅತ್ಯಂತ ದುಃಖಿತರಾದರು. ಆದರೆ ಶೀಘ್ರವಾಗಿ ಆ ದುಃಖ ಶಮನವಾಗುವಂತಹ ಘಟನೆ ನಡೆಯಿತು. ಪ್ರವಾದಿವರ್ಯರು(ಸ) ತಮ್ಮ ದ್ವಿತೀಯ ಪುತ್ರಿ ಉಮ್ಮು ಕುಲ್ಸುಮ್‌ರನ್ನು(ರ) ಅವರಿಗೆ ವಿವಾಹ ಮಾಡಿಸಿಕೊಟ್ಟರು. ಅದು ಸಹಾಬಿಗಳಲ್ಲಿ ಇತರ ಯಾರಿಗೂ ದೊರೆಯದ- ಪ್ರಾಯಶಃ ಇತಿಹಾಸದಲ್ಲಿಯೇ ಸಾಟಿಯಿಲ್ಲದ-ಅಪೂರ್ವ ಸೌಭಾಗ್ಯವಾಗಿತ್ತು. ಆ ಮೂಲಕ ಅವರಿಗೆ 'ದುನ್ನೂರೈನ್'(ಎರಡು ಪ್ರಕಾಶದವರು) ಎಂಬ ಬಿರುದು ದೊರೆಯಿತು. ಅನಂತರ ಹಿಜರಿ 9ನೆಯ ವರ್ಷದಲ್ಲಿ ಉಮ್ಮು ಕುಲ್ಸುಮ್(ರ) ನಿಧನರಾದರು. ಅಂದು ಶೋಕತಪ್ತರಾದ ಉಸ್ಮಾನ್‌ರೊಡನೆ(ರ) ಪ್ರವಾದಿ(ಸ) ಹೀಗೆ ಹೇಳಿದ್ದರು: "ನನಗೆ ಮೂರನೆಯ ಮಗಳಿರುತ್ತಿದ್ದರೆ ಆಕೆಯನ್ನೂ ನಿಮಗೆ ವಿವಾಹ ಮಾಡಿಕೊಡುತ್ತಿದ್ದೆ." ಉಸ್ಮಾನ್(ರ) ತಮ್ಮ ಪತ್ನಿಯರೊಡನೆ ಉತ್ತಮ ರೀತಿಯಲ್ಲಿ ವರ್ತಿಸುತ್ತಿದ್ದರೆಂಬುದಕ್ಕೆ ಪ್ರವಾದಿಯವರ(ಸ) ಈ ಮಾತುಗಳೇ ಸಾಕ್ಷಿ.

ಪ್ರವಾದಿವರ್ಯರು(ಸ) ಸ್ವರ್ಗವಾಸಿಗಳೆಂದು ಮುಂಚಿತವಾಗಿ ಶುಭವಾರ್ತೆ ನೀಡಿದ ಹತ್ತು ಮಂದಿಯಲ್ಲಿ ಉಸ್ಮಾನ್‌ರವರೂ(ರ) ಸೇರಿದ್ದಾರೆ. ಅದಲ್ಲದೇ ಸ್ವರ್ಗದಲ್ಲಿ 'ಪ್ರವಾದಿಯ ಸಂಗಾತಿ' ಎಂಬ ಯಾರಿಗೂ ದೊರೆಯದ ಪದವಿಯನ್ನೂ ಪ್ರವಾದಿಯವರು(ಸ) ಅವರಿಗೆ ನೀಡಿದ್ದರು.

ಅತಿ ನಾಚಿಕೆಯು ಉಸ್ಮಾನ್‌ರ(ರ) ವಿಶೇಷ ಗುಣವಾಗಿತ್ತು. ಈ ಶ್ರೇಷ್ಠ ಗುಣವನ್ನು ಪ್ರವಾದಿಯವರು(ಸ) ಅನೇಕ ಬಾರಿ ಹೊಗಳಿದ್ದಾರೆ. ಔದಾರ್ಯವು ಉಸ್ಮಾನ್‌ರ(ರ) ಇನ್ನೊಂದು ವಿಶಿಷ್ಟ ಗುಣವಾಗಿತ್ತು. ಮುಸ್ಲಿಮರು ಮದೀನಾಕ್ಕೆ ವಲಸೆ ಹೋದಾಗ ಅಲ್ಲಿ ನೀರು ಬಹಳ ತುಟ್ಟಿಯಾಗಿತ್ತು. ಯಹೂದಿಯೋರ್ವನು 'ಬಿಅ್‌ರುರ‍್ರೂಮ್' ಎಂಬ ತನ್ನ ಬಾವಿಯ ನೀರನ್ನು ಅಧಿಕ ಬೆಲೆಗೆ ಮಾರುತ್ತಿದ್ದನು. ಆ ಬಾವಿಯ ನೀರನ್ನು ಸಾರ್ವಜನಿಕವಾಗಿ ನೀಡಬೇಕೆಂದು ಪ್ರವಾದಿ(ಸ) ವಿನಂತಿಸಿದರು. ಆದರೆ ಆತ ಅದಕ್ಕೆ ಒಪ್ಪಲಿಲ್ಲ. ಅದನ್ನು ಖರೀದಿಸಿ ಸಾರ್ವಜನಿಕ ಉಪಯೋಗಕ್ಕೆ ನೀಡುವವರಿಗೆ ಸ್ವರ್ಗ ದೊರೆಯುವುದೆಂದು ಪ್ರವಾದಿ(ಸ) ಸಾರಿದರು. ಆ ಕೂಡಲೇ ಉಸ್ಮಾನ್‌ರು(ರ) 3,500 ದಿರ್ಹಮ್‌ಗಳಿಗೆ ಆ ಬಾವಿಯನ್ನು ಖರೀದಿಸಿ ಜನರಿಗೆ ದಾನ ಮಾಡಿದರು.

ತಬೂಕ್ ಯುದ್ಧದ ಕಾಲದಲ್ಲಿ ಉಸ್ಮಾನ್‌ರ(ರ) ಮಹಾ ಔದಾರ್ಯ ಪ್ರಕಟವಾಗಿತ್ತು. ತೀವ್ರ ಕ್ಷಾಮ ಪೀಡಿತ ಕಾಲದಲ್ಲಿ ಮುಸ್ಲಿಮರು ಯುದ್ಧಕ್ಕೆ ಹೊರಟಿದ್ದರು. ಸ್ಥಿತಿವಂತರು ತಮ್ಮ ಸಂಪೂರ್ಣ ಸಾಧನಾನುಕೂಲತೆಗಳನ್ನು ವಿನಿಯೋಗಿಸಿದರೆ ಮಾತ್ರ ಮುಸ್ಲಿಮರು ಯುದ್ಧಕ್ಕೆ ಹೋಗಬಹುದಾಗಿತ್ತು. ಆ ವೇಳೆ ಪ್ರವಾದಿವರ್ಯರು(ಸ), "ಈ ಬರಗಾಲದಲ್ಲಿ ಸೇನೆಯನ್ನು ಸಜ್ಜುಗೊಳಿಸುವವರಿಗೆ ಸ್ವರ್ಗವಿದೆ" ಎಂದು ಸಾರಿದರು. ಈ ಘೋಷಣೆ ಕೇಳಿದ ಕೂಡಲೇ ಉಸ್ಮಾನ್(ರ) ಆ ಬಹುಮಾನವನ್ನು ಪಡೆಯಲು ತವಕಿಸಿದರು. ಅದಕ್ಕಾಗಿ ಸೇನೆಯ 1/3 ಭಾಗವನ್ನು ಸ್ವತಃ ಸಜ್ಜುಗೊಳಿಸಿದರು. 950ಒಂಟೆ ಮತ್ತು 50 ಕುದುರೆಗಳನ್ನು ಒದಗಿಸಿದರು. 1000 ಸ್ವರ್ಣ ನಾಣ್ಯಗಳನ್ನೂ ನೀಡಿದರು. ಇದರಿಂದ ಪ್ರವಾದಿಯವರಿಗೆ(ಸ) ಅತ್ಯಧಿಕ ಸಂತೋಷವಾಯಿತು. ಅವರು ಉಸ್ಮಾನ್‌ರಿಗಾಗಿ(ರ) ಅಲ್ಲಾಹನೊಡನೆ ಪ್ರಾರ್ಥಿಸಿ ಬಳಿಕ ಹೀಗೆಂದರು: "ಇನ್ನು ಮುಂದೆ ಉಸ್ಮಾನ್ ಬಿನ್ ಅಫ್ಫಾನ್‌ರಿಗೆ ಯಾವೊಂದು ಕಾರ್ಯವೂ ಹಾನಿಕರವಾಗಲಾರದು."

ಅಬೂಬಕರ್‌ರ(ರ) ಆಡಳಿತ ಕಾಲದಲ್ಲಿ ಮದೀನಾದಲ್ಲಿ ಭೀಕರ ಬರಗಾಲ ಬಂತು. ಆ ಸಂದರ್ಭದಲ್ಲಿ ಉಸ್ಮಾನ್(ರ) ಹೇರಳ ದವಸ ಧಾನ್ಯಗಳನ್ನು ಮಾರಾಟಕ್ಕಾಗಿ ಮದೀನಾಕ್ಕೆ ತಂದರು. ಉತ್ತಮ ಲಾಭ ದೊರೆಯುವ ಕಾಲವಾದುದರಿಂದ ಚಿಲ್ಲರೆ ವ್ಯಾಪಾರಿಗಳು ಅವರ ಬಳಿ ಬಂದು ಖರೀದಿ ಬೆಲೆಯಲ್ಲಿ ಪೈಪೋಟಿ ನಡೆಸಿದರು. ಆದರೆ ಜನರ ಬವಣೆಯನ್ನು ಅರಿತಿದ್ದ ಉಸ್ಮಾನ್(ರ) ಸರಕುಗಳನ್ನು ವ್ಯಾಪಾರಿಗಳಿಗೆ ಮಾರಲೊಪ್ಪಲಿಲ್ಲ, "ನಿಮಗಿಂತ ಹೆಚ್ಚಿನ ಲಾಭ ನೀಡುವೆನೆಂದು ಬೇರೊಬ್ಬರು ಮಾತು ಕೊಟ್ಟಿದ್ದಾರೆ" ಎಂದು ಹೇಳಿದರು. ಸತ್ಕರ್ಮಗಳಿಗೆ ಹತ್ತು ಪಟ್ಟು ಪುಣ್ಯ ನೀಡುವ ಅಲ್ಲಾಹನ ವಾಗ್ದಾನವೇ ಅವರ ಇಂಗಿತವಾಗಿತ್ತು. ತರುವಾಯ ವ್ಯಾಪಾರಿಗಳ ಸಮ್ಮುಖದಲ್ಲಿಯೇ ಆ ಎಲ್ಲ ಧಾನ್ಯಗಳನ್ನು ಅವರು ಜನರಿಗೆ ದಾನ ಮಾಡಿದರು.

ಉಸ್ಮಾನ್(ರ) ಸಂಪತ್ತಿನಂತೆಯೇ ದೈಹಿಕವಾಗಿಯೂ ಇಸ್ಲಾಮ್‌ಗಾಗಿ ತ್ಯಾಗ ಮಾಡಿದ್ದಾರೆ. ಅವರು ಬದ್ರ್‌ನ ಹೊರತು ಇತರೆಲ್ಲ ಯುದ್ಧಗಳಲ್ಲಿಯೂ ಪ್ರವಾದಿಯವರ(ಸ) ಜತೆಗಿದ್ದರು. ಹುನೈನ್‌ನಲ್ಲಿ ಪ್ರವಾದಿಯವರ(ಸ) ರಕ್ಷಣೆಗಾಗಿ ಕೊನೆ ತನಕ ಯುದ್ಧರಂಗದಲ್ಲಿ ಅಚಲರಾಗಿ ನಿಂತಿದ್ದ ಕೆಲವೇ ಮಂದಿ ಯೋಧರಲ್ಲಿ ಉಸ್ಮಾನ್‌ರೂ(ರ) ಒಬ್ಬರು. ಅವರು ಪ್ರವಾದಿಯವರಿಗೆ(ಸ) ಬರುತ್ತಿದ್ದ ದಿವ್ಯವಾಣಿಯ ಲಿಪಿಕಾರರೂ ಆಗಿದ್ದರು. ಅವರನ್ನು ಇಸ್ಲಾಮಿನ ಪ್ರಥಮ ರಾಯಭಾರಿಯೆಂದೂ ಹೇಳಬಹುದು. ಹಿಜರಿ ಆರನೆಯ ವರ್ಷದಲ್ಲಿ ಪ್ರವಾದಿಯವರು(ಸ) 'ಉಮ್ರಾ'ದ ಉದ್ದೇಶದಿಂದ ಮಕ್ಕಾಕ್ಕೆ ಹೊರಟರು. ಅನಂತರ ನಡೆದ ಹುದೈಬಿಯಾ ಒಪ್ಪಂದದ ದಿನ, ಪ್ರವಾದಿಯವರ(ಸ) ಪಯಣದ ನೈಜ ಉದ್ದೇಶವನ್ನು ಕುರೈಶರಿಗೆ ತಿಳಿಸಿ ಅವರ ಪ್ರತಿಕ್ರಿಯೆಯನ್ನು ಅರಿಯಲಿಕ್ಕಾಗಿ ಅವರನ್ನು ರಾಯಭಾರಿಯಾಗಿ ಕಳುಹಿಸಲಾಗಿತ್ತು.

ಪ್ರವಾದಿಯವರ(ಸ) ಬಳಿಕ ಸಿದ್ದೀಕ್‌ರ ಆಡಳಿತ ಕಾಲದಲ್ಲಿ ಉಸ್ಮಾನ್(ರ) ಓರ್ವ ಸಚಿವ ಮತ್ತು ವಿಶೇಷ ಕಾರ್ಯದರ್ಶಿಯ ಸ್ಥಾನವನ್ನು ಹೊಂದಿದ್ದರು. ಉಮರ್‌ರನ್ನು(ರ) ಖಲೀಫರನ್ನಾಗಿ ನೇಮಿಸಿದ ಸಿದ್ದೀಕ್‌ರ ಉಯಿಲು ಪತ್ರವನ್ನು ಉಸ್ಮಾನ್‌ರೇ(ರ) ಬರೆದು ಜನರಿಗೆ ತಿಳಿಸಿದ್ದರು. ಅನಂತರ ಉಸ್ಮಾನ್(ರ) ಆಡಳಿತ ವ್ಯವಹಾರಗಳಲ್ಲಿ ಖಲೀಫ ಉಮರ್‌ರ(ರ) ಬಲಗೈ ಮತ್ತು ಪ್ರಧಾನ ಸಲಹೆಗಾರರಾಗಿ ಕೆಲಸ ಮಾಡಿದರು.

ತೃತೀಯ ಖಲೀಫ

ಖಲೀಫ ಉಮರ್‌ರವರು(ರ) ಇರಿತದಿಂದ ಘಾಸಿಗೊಂಡು ವಿವಶರಾಗಿ ಮಲಗಿದ್ದಾಗ ಕೆಲವು ಸಹಾಬಿಗಳು, ಮುಂದಿನ ಖಲೀಫರನ್ನು ಅವರೇ ನಿರ್ಣಯಿಸಿದ್ದರೆ ಉತ್ತಮವಿತ್ತೆಂದು ವಿನಂತಿಸಿದರು. ಆಗ ಉಮರ್(ರ) ಹೀಗೆಂದರು: "ನಾನು ಯಾರನ್ನಾದರೂ ಖಲೀಫರನ್ನಾಗಿ ನೇಮಿಸಿದರೆ, ನನಗಿಂತ ಉತ್ತಮರಾದವರು ಆ ರೀತಿ ನೇಮಿಸಿದ ಮಾದರಿಯಿದೆ. ಒಂದು ವೇಳೆ ನೇಮಿಸದಿದ್ದರೆ ನನಗಿಂತ ಉತ್ತಮರಾದವರು ಆ ರೀತಿ ನೇಮಿಸದಿರುವ ಮಾದರಿಯೂ ಇದೆ."

ಮರಣದ ಬಳಿಕವೂ ಜನರ ಹೊಣೆಯನ್ನು ವಹಿಸಿಕೊಳ್ಳಲು ಆ ನೀತಿವಂತ ಮಹಾಪುರುಷ ಸಿದ್ಧವಿರಲಿಲ್ಲವೆಂದು ಈ ಉತ್ತರದಿಂದ ವ್ಯಕ್ತವಾಗುತ್ತದೆ. ಹಾಗಿದ್ದರೂ ಪ್ರವಾದಿವರ್ಯರ(ಸ) ನಿಧನದ ಬಳಿಕ ಖಿಲಾಫತ್‌ನ ವಿಷಯದಲ್ಲಿ ಸಹಾಬಿಗಳ ಮಧ್ಯೆ ಮೂಡಿದ್ದ ಭಿನ್ನಾಭಿಪ್ರಾಯಗಳನ್ನು, ಅವುಗಳ ಪರಿಹಾರಕ್ಕಾಗಿ ಶ್ರಮಿಸಿದ್ದ ಉಮರ್(ರ) ಮರೆತಿರಲಿಲ್ಲವೇನೋ. ಆದ್ದರಿಂದ ಖಿಲಾಫತ್‌ನ ಬಗ್ಗೆ ಯಾವುದೇ ಸಲಹೆಯನ್ನೂ ನೀಡುವ ಮೂಲಕ ಮುಸ್ಲಿಮರಲ್ಲಿ ಗುಂಪುಗಾರಿಕೆ ಬೆಳೆಯುವುದನ್ನು ಅವರು ಇಷ್ಟಪಡಲಿಲ್ಲ. ಪ್ರವಾದಿಯವರು(ಸ) ಸ್ವರ್ಗದ ಶುಭವಾರ್ತೆ ನೀಡಿದ್ದ 6 ಪ್ರಮುಖ ಸಹಾಬಿಗಳನ್ನು ಉಮರ್(ರ) ಆಯ್ಕೆ ಮಾಡಿದರು. ಉಸ್ಮಾನ್, ಅಲೀ, ತಲ್ಹಾ, ಝುಬೈರ್, ಸಅದ್ ಬಿನ್ ಅಬೀವಕ್ಕಾಸ್ ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್. ಇತರ ಮುಸ್ಲಿಮರೊಡನೆ ಸಮಾಲೋಚನೆ ನಡೆಸಿ, ಆ ಪೈಕಿ ಯಾರಾದರೊಬ್ಬರನ್ನು ಮೂರು ದಿನಗಳೊಳಗೆ ಖಲೀಫರಾಗಿ ಆರಿಸಬೇಕು ಮತ್ತು ಆ ತನಕ ಶುಐಬ್(ರ) ಜನರಿಗೆ ನಮಾಝ್‌ನ ನೇತೃತ್ವ ವಹಿಸಬೇಕೆಂದು ಸೂಚಿಸಿದ್ದರು. ಉಮರ್(ರ)

ಆರು ಮಂದಿಯ ಯಾದಿಯಲ್ಲಿ ಪುತ್ರ ಅಬ್ದುಲ್ಲಾರನ್ನು ಸೇರಿಸಿದ್ದರೂ ಖಿಲಾಫತ್‌ನ ಅಭ್ಯರ್ಥಿಯಾಗಿರುವುದಿಲ್ಲವೆಂದೂ ಪ್ರತ್ಯೇಕವಾಗಿ ತಿಳಿಸಿದ್ದರು.

ಉಮರ್‌ರ(ರ) ನಿಧನದ ಬಳಿಕ ಈ ಸಮಾಲೋಚನಾ ಸಮಿತಿಯ(ಶೂರಾ) ಸದಸ್ಯರು ಸಭೆ ಸೇರಿದರು. ಆ ಪೈಕಿ ಯಾರಾದರೊಬ್ಬರು ಸ್ವಯಂ ಸಮಿತಿಯಿಂದ ಹೊರ ಬಂದು, ಜನರು ಮತ್ತು ಆ ಐವರೊಡನೆ ಸಮಾಲೋಚನೆ ನಡೆಸಿ ನಿರ್ಧರಿಸುವ ಉಸ್ತುವಾರಿ ವಹಿಸಬೇಕೆಂದು ಅಬ್ದುರ್ರಹ್ಮಾನ್ ಬಿನ್ ಔಫ್ ನೀಡಿದ ಸಲಹೆಯನ್ನು ಎಲ್ಲರೂ ಅಂಗೀಕರಿಸಿದರು. ತರುವಾಯ ಅಬ್ದುರ್ರಹ್ಮಾನ್ ಬಿನ್ ಔಫ್‌ರೇ ಸ್ವತಃ ಸಮಿತಿಯಿಂದ ಹೊರಬಂದು ಸಮಾಲೋಚನೆಯ ನೇತೃತ್ವ ವಹಿಸಿದರು. ತರುವಾಯ ಅವರು ಜನರೊಡನೆ ಮತ್ತು 'ಶೂರಾ'ದ ಸದಸ್ಯರೊಡನೆ ಹಲವು ಬಾರಿ ಸಮಾಲೋಚನೆ ನಡೆಸಿದರು. ಉಸ್ಮಾನ್(ರ) ಮತ್ತು ಅಲೀಯವರ(ರ) ಪೈಕಿ ಯಾರಾದರೊಬ್ಬರು ಖಲೀಫರಾಗಬೇಕೆಂಬ ಬಗ್ಗೆ ಸಹಮತ ಕಂಡು ಬಂತು. ಆದ್ದರಿಂದ ಅಬ್ದುರ್ರಹ್ಮಾನ್(ರ) ಅವರಲ್ಲೋರ್ವರನ್ನು ಚುನಾಯಿಸಬೇಕಾಗಿತ್ತು. ಅದಕ್ಕಾಗಿ ಅವರು ಮೊದಲು ಅಲೀಯವರ(ರ) ಬಳಿ ಹೋಗಿ ಹೀಗೆ ಪ್ರಶ್ನಿಸಿದರು: "ಅಲ್ಲಾಹನ ಸಾಕ್ಷ್ಯವಿರಿಸಿ ನೀವು ಒಪ್ಪಂದ ಮಾಡುತ್ತೀರಾ? ಅಲ್ಲಾಹನ ಗ್ರಂಥ, ಪ್ರವಾದಿಚರ್ಯೆ ಹಾಗೂ ಈರ್ವರು ಪೂರ್ವ ಖಲೀಫರ ಚರ್ಯೆಯನ್ವಯ ವರ್ತಿಸುತ್ತೇನೆಂದು ಒಪ್ಪಂದ ಮಾಡುತ್ತೀರಾ?"

ಅಲೀ(ರ) ಹೇಳಿದರು: "ನಾನು ನನ್ನ ತಿಳುವಳಿಕೆ ಮತ್ತು ಸಾಮರ್ಥ್ಯಕ್ಕನುಸಾರ ವರ್ತಿಸುತ್ತೇನೆ."

ಅನಂತರ ಅಬ್ದುರ್ರಹ್ಮಾನ್(ರ) ಈ ಪ್ರಶ್ನೆಯನ್ನು ಉಸ್ಮಾನ್‌ರೊಡನೆಯೂ(ರ) ಕೇಳಿದರು: ಅದಕ್ಕೆ ಉಸ್ಮಾನ್(ರ), "ಹೌದು, ಹಾಗೆಯೇ ವರ್ತಿಸುವುದಾಗಿ ಭರವಸೆ ನೀಡುತ್ತೇನೆ."

ಆ ಕೂಡಲೇ ಉಸ್ಮಾನ್ ಬಿನ್ ಅಫ್ಫಾನ್‌ರನ್ನು(ರ) ಖಲೀಫರೆಂದು ನಿಶ್ಚಯಿಸಿ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರ ಕೈ ಹಿಡಿದು ಬೈಅತ್(ಪ್ರಮಾಣ ವಚನ) ಮಾಡಿದರು. ತರುವಾಯ ಜನರೂ ಬೈಅತ್ ಮಾಡಿ ಅವರನ್ನು ಖಲೀಫರಾಗಿ ಅಂಗೀಕರಿಸಿದರು.

ವಿಫಲ ಕ್ರಾಂತಿ

ಉಮರ್‌ರ(ರ) ಮರಣ ಆಕಸ್ಮಿಕವಾಗಿರಲಿಲ್ಲ. ಇಸ್ಲಾಮಿನ ಅನೇಕ ವೈರಿಗಳು ಅವರ ನಿಗೂಢ ಸಂಚು ನಡೆಸಿದ್ದರು. ಆ ಸಂಚಿನಲ್ಲಿ ಮುಸ್ಲಿಮರಿಂದ ಸೋಲನುಭವಿಸಿದ ಅನೇಕ ಶಕ್ತಿಗಳ ಕೈವಾಡವಿತ್ತೆಂದು ಅನಂತರ ಸಂಭವಿಸಿದ ಘಟನೆಗಳಿಂದ ವ್ಯಕ್ತವಾಯಿತು. ಉಮರ್‌ರ(ರ) ಹತ್ಯೆಯ ಸುದ್ದಿಯು ಹಬ್ಬಿದ ಕೂಡಲೇ ರಾಷ್ಟ್ರದ ಹಲವೆಡೆ ಗಲಭೆ ಹುಟ್ಟಿಕೊಂಡಿತು. ಮುಸ್ಲಿಮ್ ರಾಷ್ಟ್ರದ ಅಧೀನವಾಗಿದ್ದ ಪರ್ಶಿಯಾ ಮತ್ತು ರೋಮ್‌ನ ಹಲವು ಗೋತ್ರಗಳು ದಂಗೆ ಎದ್ದುವು. ರೋಮನ್ ಸಾಮ್ರಾಜ್ಯವು ಮುಸ್ಲಿಮರ ಜತೆ ಮಾಡಿದ್ದ ಒಪ್ಪಂದವನ್ನು ಉಲ್ಲಂಘಿಸಿ ಅಲೆಕ್ಸಾಂಡ್ರಿಯಾದಲ್ಲಿ ನೆಲ-ಜಲಗಳ ಮೂಲಕ ಆಕ್ರಮಣ ನಡೆಸಿತು. ಇನ್ನೊಂದು ನೌಕಾ ಸೇನೆಯನ್ನು ಅದು ಫೆಲೆಸ್ತೀನ್‌ಗೆ ಕಳುಹಿಸಿತು. ಅದಲ್ಲದೇ ಸಹಸ್ರಾರು ರೋಮನ್ ನೌಕಾ ಸೈನಿಕರು ಮುಸ್ಲಿಮ್ ಬಾಹುಳ್ಯವಿರುವ ಪ್ರದೇಶಗಳಿಗೆ ನುಗ್ಗಿ ಪ್ರಚೋದನೆ ಮತ್ತು ಪ್ರಲೋಭನೆಗಳಿಂದ ಜನರನ್ನು ಗಲಭೆಗೆ ಪ್ರೇರೇಪಿಸಿದರು. ಕೇವಲ ಈ ಗಲಭೆಕೋರರಿಗಾಗಿ ಅವರು ಸುಮಾರು 500 ನೌಕೆಗಳನ್ನು ಬಳಸಿದ್ದರೆಂದು ಅವರ ಇತಿಹಾಸಗಾರರೇ ಹೇಳಿದ್ದಾರೆ.

ಈ ಸುದ್ದಿಯು ಕ್ಷಿಪ್ರವಾಗಿ ನೆರೆಕರೆಯ ಪ್ರದೇಶಗಳಿಗೂ ತಲಪಿತು. ದೌರ್ಬಲ್ಯದಿಂದ ಮುಸ್ಲಿಮರಿಗೆ ಶರಣಾಗಿದ್ದ ಏಶ್ಯದ ಕೆಲವು ರಾಷ್ಟ್ರಗಳಿಗೆ ಇದೊಂದು ಸದವಕಾಶವೆನಿಸಿತು. ಈಗ ಸುಮ್ಮನಿದ್ದರೆ ಮುಂದೆ ತಲೆಯೆತ್ತಲು ಅಸಾಧ್ಯವೆಂದು ಅಂದಾಜಿಸಿ, ಅವರು ಒಪ್ಪಂದಗಳನ್ನು ಮುರಿದು ಮುಸ್ಲಿಮ್ ವಿರೋಧಿ ಗಲಭೆಗಳಲ್ಲಿ ಸೇರಿದರು.

ಇದು ಅಬೂಬಕರ್‌ರವರ(ರ) ಕಾಲದಲ್ಲಿ ನಡೆದಂತಹ ಅಥವಾ ಅದಕ್ಕಿಂತ ಭೀಕರವಾದ ಆಂತರಿಕ ಗಲಭೆಯಾಗಿತ್ತು. ಆದರೆ ಅಬೂಬಕರ್ ಸಿದ್ದೀಕ್‌ರಂತೆಯೇ(ರ) ಧೈರ್ಯಶಾಲಿ, ದೃಢಚಿತ್ತ ಮತ್ತು ಬುದ್ಧಿವಂತರಾಗಿದ್ದ ಉಸ್ಮಾನ್(ರ) ಸ್ವಲ್ಪವೂ ಅಧೀರರಾಗಲಿಲ್ಲ. ಖಿಲಾಫತ್ ವಹಿಸಿದ ಕೂಡಲೇ ಎದುರಾದ ಈ ಮಹಾ ವಿಪತ್ತನ್ನು ಅಲ್ಲಾಹನ ಅನುಗ್ರಹದಿಂದ ಸಮರ್ಥವಾಗಿ ದಮನಿಸಿದರು. ವಿಶ್ವಾಸ, ಪ್ರಾಮಾಣಿಕತೆ ಮತ್ತು ಶೌರ್ಯ ತುಂಬಿದ ಯೋಧರೂ ಅವರ ಜತೆಯಿದ್ದರು.

ಸಿರಿಯಾ-ಫೆಲೆಸ್ತೀನ್ ವಲಯಗಳಲ್ಲಿ ರೋಮನ್ ಗಲಭೆಕೋರರನ್ನು ಮಣಿಸಲಿಕ್ಕಾಗಿ ಹಬೀಬ್ ಇಬ್ನ್ ಮಸ್ಲಮಾರನ್ನು ನೇಮಿಸಲಾಗಿತ್ತು. ಯುದ್ಧ ನಡೆಯುತ್ತಿದ್ದಾಗ ಒಂದು ಸಹಾಯಕ ಸೇನೆಯನ್ನು ಕಳುಹಿಸುವಂತೆ ಅವರು ಮದೀನಾಕ್ಕೆ ಪತ್ರ ಬರೆದರು. ಆ ಸೇನೆ ಬಂದು ತಲಪಲು ತಡವಾದೀತೆಂದು ಭಾವಿಸಿ ಸಮೀಪದಲ್ಲಿರುವ ಕೂಫಾದ ರಾಜ್ಯಪಾಲರಿಗೂ ಅವರು ಪತ್ರ ಕಳುಹಿಸಿದ್ದರು. ಆದರೆ ಕೂಫಾದ ಸೇನೆಗಿಂತ ಮುಂಚೆ ಮದೀನಾದಿಂದ ಖಲೀಫಾ ಉಸ್ಮಾನ್(ರ) ಕಳುಹಿಸಿದ ಸೇನೆಯು ಅವರ ಸಹಾಯಕ್ಕೆ ತಲಪಿತ್ತು. ಖಲೀಫ ಉಸ್ಮಾನ್(ರ) ಆಡಳಿತ ವ್ಯವಹಾರಗಳಲ್ಲಿ ಎಷ್ಟೊಂದು ಜಾಗ್ರತೆ ವಹಿಸುತ್ತಿದ್ದರೆಂದು ಈ ಘಟನೆಯಿಂದ ವ್ಯಕ್ತವಾಗುತ್ತದೆ.

ಅಬೂಬಕರ್(ರ) ಮತ್ತು ಉಮರ್‌ರ(ರ) ಆಡಳಿತ ಕಾಲದಲ್ಲಿ ಅನೇಕ ಗಂಭೀರ ಸಮಸ್ಯೆಗಳು ಉದ್ಭವಿಸಿದ್ದುವು. ಉಸ್ಮಾನ್‌ರ(ರ) ಆಡಳಿತದಲ್ಲಿ ಅದಕ್ಕಿಂತ ಭೀಕರವಾದ ಬೆದರಿಕೆಗಳನ್ನು ಎದುರಿಸಬೇಕಾಯಿತು. ಒಂದೆಡೆ ರಾಷ್ಟ್ರದ ಗಡಿಗಳು ವಿಶಾಲಗೊಂಡರೆ, ಇನ್ನೊಂದೆಡೆ ವೈರಿಗಳ ಹೋರಾಟ ರಂಗಗಳೂ ಹೆಚ್ಚಿದುವು. ರಾಜಧಾನಿ ಮತ್ತು ಗಡಿ ಪ್ರದೇಶಗಳ ದೂರ ಹೆಚ್ಚಿತು. ಆಂತರಿಕ ರಂಗದಲ್ಲಿ ವಿವಿಧ ವಿಶ್ವಾಸಾಚಾರಗಳನ್ನು ಅವಲಂಬಿಸಿದ ಮಿಶ್ರ ಸಮಾಜ ಬೆಳೆಯಿತು. ಒಂದೊಮ್ಮೆ ಪ್ರವಾದಿವರ್ಯರು(ಸ) ಮುಸ್ಲಿಮ್ ಸಮುದಾಯದಿಂದ ನಿರ್ಮೂಲನಗೊಳಿಸಿದ್ದ ಗೋತ್ರ-ವರ್ಗ ಪಕ್ಷಪಾತಗಳು ಪುನಃ ತಲೆಯೆತ್ತಿದ್ದುವು. ಅದರೊಂದಿಗೆ ಹೊಸದಾಗಿ ಇಸ್ಲಾಮ್ ಧರ್ಮ ಸ್ವೀಕರಿಸಿದ ಗೋತ್ರ ವರ್ಗಗಳ ಹೆಚ್ಚಳದಿಂದ ಮುಸ್ಲಿಮ್ ಸೇನೆಯ ಸಾಮಾನ್ಯ ಸ್ವರೂಪವೂ ಬದಲಾಯಿತು. ಈ ಎಲ್ಲ ಅನುಕೂಲ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ವೈರಿಗಳು ವ್ಯಾಪಕ ದಂಗೆಗೆ ತೊಡಗಿದ್ದರು. ಆದರೆ ಉಸ್ಮಾನ್(ರ) ವೈರಿಗಳು ಭಾವಿಸಿದ್ದಂತೆ ಓರ್ವ ದುರ್ಬಲ ಆಡಳಿತಗಾರರಾಗಿರಲಿಲ್ಲ. ಅವರು ರಾಷ್ಟ್ರವನ್ನು ಧೀಮಂತಿಕೆ ಮತ್ತು ಸ್ಥೈರ್ಯದಿಂದ ಪುನಃ ಸುದೃಢ ಮತ್ತು ಸುಭದ್ರಗೊಳಿಸಿದರು. ಓರ್ವ ನಾಯಕನ ಬದಲಾವಣೆಯಿಂದ ಅಥವಾ ಓರ್ವ ಖಲೀಫನ ನಿಧನದಿಂದ ಮುಸ್ಲಿಮ್ ಸಮುದಾಯ ದುರ್ಬಲವಾಗುವುದಿಲ್ಲವೆಂದು ವೈರಿಗಳಿಗೆ ಮನಗಾಣಿಸಿದರು.

ದೇಶಾಂತರ ವಿಜಯ

ಆಂತರಿಕ ರಂಗದ ಗಲಭೆಗಳನ್ನು ಖಲೀಫರು ಕ್ಷಿಪ್ರವಾಗಿ ಅಣಗಿಸಿದರು. ಆದರೆ, ಹೆಚ್ಚಿನ ಗಲಭೆಕೋರರು ಗಡಿ ದಾಟಿ ಪಾರಾಗಿದ್ದರು. ವಸ್ತುತಃ ನೆರೆ ರಾಷ್ಟ್ರಗಳೇ ಗಲಭೆಗೆ ಒತ್ತಾಸೆ ನೀಡುತ್ತಿದ್ದವು. ಆದ್ದರಿಂದ ಅವರನ್ನು ಮಣಿಸದೆ ರಾಷ್ಟ್ರವನ್ನು ಸುಭದ್ರವಾಗಿರಿಸಲು ಅಸಾಧ್ಯವೆಂದು ಮನಗಂಡು ಸೇನೆಯನ್ನು ಗಡಿಯಾಚೆ ಕಳುಹಿಸಿದರು. ನಾಲ್ದೆಸೆಗಳಲ್ಲಿಯೂ ಮುಸ್ಲಿಮ್ ಸೇನೆ ಜಯಗಳಿಸಿತು.

ಮುಸ್ಲಿಮರ ಪ್ರಥಮ ನೌಕಾಪಡೆ

ಉಮರ್‌ರ(ರ) ಆಡಳಿತ ಕಾಲದಲ್ಲಿ ಒಂದು ನೌಕಾಪಡೆಯನ್ನು ರಚಿಸುವಂತೆ ಸಿರಿಯಾದ ರಾಜ್ಯಪಾಲ ಮುಆವಿಯಾ(ರ) ಸೂಚಿಸಿದ್ದರು. ಆದರೆ, ನೌಕಾಯಾನದ ವಿಶೇಷ ಮಾಹಿತಿಯಿಲ್ಲದ ಮುಸ್ಲಿಮ್ ಸೇನೆಗೆ ಅದೊಂದು ಹೊರೆಯಾದೀತೆಂಬ ಭೀತಿಯಿಂದ ಉಮರ್(ರ) ಅದಕ್ಕೆ ಒಪ್ಪಿರಲಿಲ್ಲ.

ಆದರೆ ಉಸ್ಮಾನ್(ರ) ಖಲೀಫರಾದ ಬಳಿಕ ಮುಆವಿಯಾರು ನೌಕಾಪಡೆಯ ಕುರಿತು ಪುನಃ ಹೊಸ ಖಲೀಫರಿಗೆ ಪತ್ರ ಬರೆದರು. ಬದಲಾದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇತರರೊಡನೆ ಪದೇ ಪದೇ ಸಮಾಲೋಚನೆ ನಡೆಸಿದ ಬಳಿಕ ಉಸ್ಮಾನ್(ರ) ಅದಕ್ಕೆ ಒಪ್ಪಿಗೆ ನೀಡಿದರು. ಆದರೆ, ಯಾರನ್ನೂ ಬಲಾತ್ಕಾರದಿಂದ ನೌಕಾಪಡೆಗೆ ಸೇರಿಸಬಾರದೆಂಬ ವಿಶೇಷ ಆದೇಶ ನೀಡಿದರು.

ಹೀಗೆ ಮೊದಲ ಬಾರಿ ರೂಪಿಸಿದ ಮುಸ್ಲಿಮ್ ನೌಕಾಪಡೆಯು ಅಬ್ದುಲ್ಲಾ ಬಿನ್ ಖೈಸ್(ರ) ಅವರ ನಾಯಕತ್ವದಲ್ಲಿ ಸೈಪ್ರಸ್(ಖುಬ್ರುಸ್) ದ್ವೀಪಕ್ಕೆ ಹೊರಟಿತು. ಆಗ ಹಿಜರಿ 28ನೆಯ ವರ್ಷ ನಡೆಯುತ್ತಿತ್ತು. ಆದರೆ, ಯುದ್ಧ ಮಾಡದೆಯೇ ವಾರ್ಷಿಕ 7,000 ದೀನಾರ್ ಕಪ್ಪಕಾಣಿಕೆ ನೀಡುವ ಶರ್ತದೊಂದಿಗೆ ಸೈಪ್ರಸ್ ಮುಸ್ಲಿಮರ ಅಧೀನವಾಯಿತು.

ತನ್ಮಧ್ಯೆ ರೋಮನರು ಅಲೆಕ್ಸಾಂಡ್ರಿಯಾದ ಮರುಸ್ವಾಧೀನಕ್ಕಾಗಿ ಭೂ ಆಕ್ರಮಣ ಪ್ರಯತ್ನ ನಡೆಸಿದರು. ಅವರನ್ನು ಎದುರಿಸಲಿಕ್ಕಾಗಿ ಉಸ್ಮಾನ್(ರ) ಅಮ್ರ್ ಬಿನ್ ಆಸ್‌ರನ್ನು(ರ) ನೇಮಿಸಿದರು. ಮನ್‌ವೀನ್ ಎಂಬ ದಂಡನಾಯಕನ ಆಶ್ರಯದಲ್ಲಿ ರೋಮನರು ಅಲೆಕ್ಸಾಂಡ್ರಿಯಾ ಪ್ರವೇಶಿಸಿದರು. ನಾನಾ ಕಡೆಗಳಿಂದ ಆಕ್ರಮಣಕ್ಕೆ ತೊಡಗಿದರು. ಆದರೆ, ಮುಸ್ಲಿಮ್ ಸೇನೆಗೆ ಅವರನ್ನು ಸೋಲಿಸಲು ಕಷ್ಟವಾಗಲಿಲ್ಲ. ಯುದ್ಧದಲ್ಲಿ ಮನ್‌ವೀನ್ ಕೊಲ್ಲಲ್ಪಟ್ಟನು. ಅಳಿದುಳಿದ ರೋಮನ್ ಸೈನಿಕರು ಮುಸ್ಲಿಮ್ ದಂಡನಾಯಕನ ಆಜ್ಞೆಯಂತೆ ಖಡ್ಗ ಮೇಲೆತ್ತಿ ಹಿಡಿದು ಶರಣಾದರು. ಹೀಗೆ ಒಪ್ಪಂದ ಉಲ್ಲಂಘಿಸಿದ ರೋಮನ್ ಸೈನಿಕರು ಖಡ್ಗವೆತ್ತಿ ಶರಣಾಗಿದ್ದ ಸ್ಥಳದಲ್ಲಿ ಆ ಘಟನೆಯ ಸ್ಮರಣೆಗಾಗಿ ಮುಸ್ಲಿಮರು ಮಸೀದಿಯೊಂದನ್ನು ನಿರ್ಮಿಸಿದರು. ಆ ಮಸೀದಿಗೆ 'ಮಸ್ಜಿದುರ್ರಹ್ಮಾನ್' ಎಂಬ ಹೆಸರಿಡಲಾಯಿತು.

ರೋಮನರ ವಶವಿದ್ದ ಸೈಪ್ರಸನ್ನು ಗೆದ್ದ ಬಳಿಕ ಮುಸ್ಲಿಮರ ಬಗ್ಗೆ ರೋಮನರ ಭೀತಿ ಇಮ್ಮಡಿಯಾಯಿತು. ಈ ತನಕ ಮುಸ್ಲಿಮರು ನೆಲದಲ್ಲಿ ಮಾತ್ರ ತಮ್ಮ ಹಿರಿಮೆಯನ್ನು

ತೋರಿಸಿದ್ದರು. ಈಗ ಅವರು ಸಮುದ್ರಕ್ಕೂ ಇಳಿದಿದ್ದಾರೆ. ಸಮುದ್ರದಲ್ಲಿಯೂ ಮುಸ್ಲಿಮರು ಪ್ರಬಲರಾದರೆ ಈಜಿಪ್ಟ್ ಮತ್ತು ಅಲೆಕ್ಸಾಂಡ್ರಿಯಾಗಳ ಮರುಸ್ವಾಧೀನದ ಬಗ್ಗೆ ಊಹಿಸಲೂ ಸಾಧ್ಯವಿಲ್ಲವೆಂದು ರೋಮನರಿಗೆ ಮನವರಿಕೆಯಾಯಿತು.

ಈ ಪರಿಸ್ಥಿತಿಯಲ್ಲಿ ಮುಸ್ಲಿಮರು ನೌಕಾ ಯುದ್ಧದಲ್ಲಿ ಬಲಪಡೆಯುವುದಕ್ಕಿಂತ ಮುಂಚಿತವಾಗಿ ಅವರನ್ನು ದಮನಿಸಬೇಕೆಂಬ ಉದ್ದೇಶದಿಂದ ರೋಮನರು ಒಂದು ಬೃಹತ್ ನೌಕಾಪಡೆಯನ್ನು ಅಲೆಕ್ಸಾಂಡ್ರಿಯಾಕ್ಕೆ ಕಳುಹಿಸಿದರು. ಹರ್ಕ್ಯುಲಿಸ್‌ನ ಪುತ್ರ ಕಾನ್ಸ್‌ಟೆಂಟೈನ್‌ನ ನಾಯಕತ್ವದ ಈ ರೋಮನ್ ಸೇನೆಯಲ್ಲಿ 500 ನೌಕೆಗಳಿದ್ದುವು.

ಉಸ್ಮಾನ್(ರ) ಆ ವೇಳೆ ಈಜಿಪ್ಟ್ ರಾಜ್ಯಪಾಲರಾಗಿದ್ದ ಅಮ್ರ್ ಬಿನ್ ಆಸ್‌ರನ್ನು(ರ) ವಜಾಗೊಳಿಸಿ ಅಬ್ದುಲ್ಲಾ ಬಿನ್ ಅಬೀ ಸರ್ಹ್‌ರನ್ನು ನೇಮಿಸಿದ್ದರು. ರೋಮನ್ ಸೇನೆಯ ಯುದ್ಧ ಸನ್ನಾಹವನ್ನರಿತು ಅಬ್ದುಲ್ಲಾ ಬಿನ್ ಅಬೀ ಸರ್ಹ್‌ರೂ ಯುದ್ಧಕ್ಕೆ ಸಜ್ಜಾದರು. ಮುಸ್ಲಿಮರ ಬಳಿ ಕೇವಲ 200 ಸಣ್ಣ ನೌಕೆಗಳಿದ್ದುವು. ಆದರೆ ಅವರ ಯೋಧರು ಅಲ್ಲಾಹನ ಮಾರ್ಗದಲ್ಲಿ ಪ್ರಾಣಾರ್ಪಣೆಗೆ ಅಂಜದ ಶೂರರಾಗಿದ್ದರು. ಅಲೆಕ್ಸಾಂಡ್ರಿಯಾದಿಂದ ಸ್ವಲ್ಪ ದೂರದ ಸಮುದ್ರದಲ್ಲಿ ಅವರು ಲಂಗರು ಹಾಕಿದರು. ಉಭಯ ನೌಕಾಪಡೆಗಳು ಅಭಿಮುಖವಾದಾಗ ಮುಸ್ಸಂಜೆಯಾಗಿತ್ತು. ಮುಸ್ಲಿಮರು ಗಟ್ಟಿಯಾಗಿ ಕುರ್‌ಆನ್ ಪಾರಾಯಣ ಮಾಡುತ್ತಾ, ನಮಾಝ್ ಮತ್ತು ಪ್ರಾರ್ಥನೆಗಳಲ್ಲಿ ರಾತ್ರೆ ಕಳೆದರು. ಆ ಕಡೆಯಿಂದ ರೋಮನರ ಸಾಮೂಹಿಕ ಘಂಟಾನಾದ ಮತ್ತು ಪ್ರಾರ್ಥನೆಯೂ ಕೇಳಿಸುತ್ತಿತ್ತು.

ಮರುದಿನ ಬೆಳಗಾತ ನಡೆದ ಯುದ್ಧದಲ್ಲಿ ಮುಸ್ಲಿಮರು ಮೇಲುಗೈ ಸಾಧಿಸಿದರು. ರೋಮನ್ ಸೇನೆಯ ಅರ್ಧಾಂಶ ಸೈನಿಕರು ಹತರಾದರು. ಅವರ ನಾಯಕನಾಗಿದ್ದ ಕಾನ್ಸ್‌ಟೆಂಟೈನ್‌ನಿಗೆ ಗಾಯವಾಯಿತು. ಕೊನೆಗೆ ಉಳಿದ ಸೇನೆಯ ಜತೆ ಪರಾರಿಯಾಗುವುದು ಅನಿವಾರ್ಯವಾಯಿತು. ಸೋತು ಓಡಿ ಹೋದ ಕಾನ್ಸ್‌ಟೆಂಟೈನ್ ಇಟಲಿಯ ಸಿಸಿಲಿ(Sicile)ಯಲ್ಲಿ ಆಶ್ರಯ ಪಡೆದನು. ಆದರೆ ಕ್ರೈಸ್ತರ ಸಾಮೂಹಿಕ ಹತ್ಯೆ ನಡೆಸಿದ್ದ ಕಾನ್ಸ್‌ಟೆಂಟೈನ್‌ನನ್ನು ಸಿಸಿಲಿಯ ಜನರು ಸೇರಿಸಲಿಲ್ಲ. ಅವರು ಆತನ ತಲೆಕಡಿದು ಸೇಡು ತೀರಿಸಿದರು. ಉಳಿದ ಸೈನಿಕರನ್ನು ಕಾನ್ಸ್‌ಟೆಂಟಿನೋಪಲ್‌ಗೆ ಕಳುಹಿಸಿದರು.

ಆಫ್ರಿಕಾದ ವಿಜಯ

ಅದೇ ರೀತಿ ಈಜಿಪ್ಟ್‌ನ ಪಶ್ಚಿಮ ಭಾಗದ ಆಫ್ರಿಕಾದಲ್ಲಿಯೂ ಮುಸ್ಲಿಮ್ ರಾಷ್ಟ್ರದ ಗಡಿ ವಿಸ್ತಾರವಾಗುತ್ತಿತ್ತು. ಉಸ್ಮಾನ್(ರ) ಆಫ್ರಿಕಾದ ಸ್ವಾಧೀನಕ್ಕೆ ಅಬ್ದುಲ್ಲಾ ಬಿನ್ ಅಬೀ ಸರ್ಹ್‌ರನ್ನೇ ನೇಮಿಸಿದ್ದರು.

ಉತ್ತರ ಆಫ್ರಿಕಾದಲ್ಲಿ ಜಂಜೀರ್ ರಾಜನ ಬೃಹತ್ ಸೇನೆಯನ್ನು ಎದುರಿಸುತ್ತಿದ್ದ ಕಾಲದಲ್ಲಿ ಅಬ್ದುಲ್ಲಾ ಬಿನ್ ಸಅದ್ ಬಿನ್ ಅಬೀ ಸರ್ಹ್‌ರ ಕುರಿತು ಹಲವು ದಿನಗಳವರೆಗೆ ಯಾವ ಸುದ್ದಿಯೂ ದೊರೆಯಲಿಲ್ಲ. ಆದ್ದರಿಂದ ಒಪ್ಪಂದದ ವಿವರಗಳನ್ನು ತಿಳಿಯಲಿಕ್ಕಾಗಿ ಮತ್ತು ಅಗತ್ಯವಿದ್ದರೆ ನೆರವಿಗಾಗಿ ಅಬ್ದುಲ್ಲಾ ಬಿನ್ ಝುಬೈರ್‌ರ(ರ) ನಾಯಕತ್ವದಲ್ಲಿ ಇನ್ನೊಂದು ಸೇನೆಯನ್ನು ಖಲೀಫರು ಆಫ್ರಿಕಾಕ್ಕೆ ಕಳುಹಿಸಿದರು. ಪಶ್ಚಿಮ ಟ್ರಿಪೋಲಿಯ

ಗಡಿಯಲ್ಲಿ ಕುಶಾಗ್ರಮತಿಯಾದ ಅಬ್ದುಲ್ಲಾ ಬಿನ್ ಝುಬೈರ್(ರ) ಮತ್ತು ಸಹಸೇನೆಯ ನೆರವಿನಿಂದ ಬಿನ್ ಸಅದ್‌ರು ಜಂಜೀರ್‌ನ ಸೇನೆಯನ್ನು ಬೇಗನೆ ಸೋಲಿಸಿದರು.

ಹೀಗೆ ಮುಸ್ಲಿಮ್ ಸೇನೆಯು ನಾಲ್ದೆಸೆಗಳಲ್ಲಿಯೂ ದಂಡಯಾತ್ರೆ ನಡೆಸಿತು. ಭೂಮಧ್ಯ ಸಮುದ್ರದ ಪೂರ್ವಭಾಗದ ಆಯಕಟ್ಟಿನ ಸೈಪ್ರಸ್ ದ್ವೀಪದಿಂದ ಕ್ಯಾಸ್ಪಿಯನ್ ಸಮುದ್ರ ತೀರದವರೆಗೆ, ಅಲ್ಲಿಂದ ಭಾರತ ಮತ್ತು ಚೀನಾ ಗಡಿಗಳ ವರೆಗಿನ ಪ್ರದೇಶಗಳೂ ಮುಸ್ಲಿಮರ ಸ್ವಾಧೀನವಾದುವು. ಪಶ್ಚಿಮದಲ್ಲಿ ಇಥಿಯೋಪಿಯಾದಿಂದ ಮೊರೊಕ್ಕೊವರೆಗಿನ ಸಂಪನ್ನ ಆಫ್ರಿಕನ್ ರಾಷ್ಟ್ರಗಳೂ ಭೂಮಧ್ಯ ಸಮುದ್ರದಾಚೆಗಿನ ಸ್ಪೈನ್‌ನಲ್ಲಿ ಆಂಟಿಲೂಸ್ ವರೆಗಿನ ಯೂರೋಪಿನ ಭಾಗಗಳೂ ಮುಸ್ಲಿಮರ ಅಧೀನವಾದುವು.

ಉಸ್ಮಾನ್‌ರ(ರ) ಆಡಳಿತ

ಮೂರನೆಯ ಖಲೀಫರು ಅಧಿಕಾರ ವಹಿಸಿಕೊಂಡ ಕೂಡಲೇ ಒಂದು ಯೋಜಿತ ಸಂಚಿನಿಂದ ನಡೆದ ಭೀಕರ ಗಲಭೆಯನ್ನು ಎದುರಿಸಬೇಕಾಯಿತು. ಧೈರ್ಯಶಾಲಿ ಮತ್ತು ಕುಶಾಗ್ರಮತಿಯಾಗಿದ್ದ ಖಲೀಫರು ಗಲಭೆಯನ್ನು ಕ್ಷಿಪ್ರವಾಗಿ ಅಣಗಿಸಿದರು. ಮಾತ್ರವಲ್ಲ ಗಡಿಯ ಹೊರಗಿನ ವೈರಿ ತಾಣಗಳನ್ನು ಅವರು ಪುನಃ ಆಕ್ರಮಣ ನಡೆಸದ ರೀತಿಯಲ್ಲಿ ಧ್ವಂಸಗೊಳಿಸಿದರು. ಇದರಿಂದಾಗಿ ಇಸ್ಲಾಮಿ ರಾಷ್ಟ್ರದಲ್ಲಿ ನಿರ್ಭೀತ ವಾತಾವರಣ ನೆಲೆಸಿತು. ಗೆದ್ದುಕೊಂಡ ದೇಶಗಳಿಂದ ಬಂದ ಸಮರಾರ್ಜಿತ ಸೊತ್ತುಗಳು, ಪ್ರಾಂತ್ಯಗಳಿಂದ ಕೇಂದ್ರ ಬೈತುಲ್ ಮಾಲ್(ಖಜಾನೆ)ಗೆ ಬರುತ್ತಿದ್ದ ಝಕಾತ್, ತೆರಿಗೆ ಇತ್ಯಾದಿ ಆದಾಯಗಳಿಂದ ರಾಷ್ಟ್ರದ ಸಂಪತ್ತು ಸಮೃದ್ಧವಾಯಿತು. ಸಂಪದ್ಭರಿತ ಖಜಾನೆಯಿಂದ ಜನರ ಕ್ಷೇಮಾಭಿವೃದ್ಧಿಗಾಗಿ ಧಾರಾಳವಾಗಿ ವ್ಯಯಿಸಲೂ ಖಲೀಫರು ಸಂಕೋಚ ಪಡಲಿಲ್ಲ. ಹೀಗೆ ಖಲೀಫರ ಬಗ್ಗೆ ಜನರಿಗೂ ಜನರ ಬಗ್ಗೆ ಖಲೀಫರಿಗೂ ಸಂತೃಪ್ತಿಯಾಯಿತು. ಸಂಪತ್ತು ಮತ್ತು ಶಾಂತಿಯಿಂದ ಬಾಳುವ ಇಸ್ಲಾಮಿ ರಾಷ್ಟ್ರವು ಇತರ ರಾಷ್ಟ್ರಗಳಿಗೂ ಮಾದರಿಯಾಗಿ ಜಾಗತಿಕ ದಿಗಂತದಲ್ಲಿ ಶೋಭಿಸಿತು.

ಆದರೆ, ಕಾಲ ಕಳೆದಂತೆ ಜನರೂ ಬದಲಾದರು. ಪ್ರವಾದಿಯವರಿಂದ(ಸ) ನೇರ ಶಿಕ್ಷಣ ಪಡೆದ ಸಹಾಬಿಗಳು ಕಡಿಮೆಯಾಗಿ, ಇಸ್ಲಾಮಿನ ಸರಿಯಾದ ತಿಳುವಳಿಕೆಯಿಲ್ಲದ, ವಿಶ್ವಾಸವು ನೈಜ ರೂಪದಲ್ಲಿ ಮನದಲ್ಲಿ ದೃಢವಾಗಿಲ್ಲದ ಹೊಸ ಮುಸ್ಲಿಮರು ಹೆಚ್ಚಿದಾಗ ಜನರ ಸಾಮಾನ್ಯ ವಿಚಾರಧಾರೆಯೂ ಬದಲಾಗಲಾರಂಭಿಸಿತು. ಧಾರ್ಮಿಕ ಅಧ್ಯಯನ ಮತ್ತು ವೈರಿ ಸಂಘರ್ಷದಲ್ಲಿ ನೆಟ್ಟಿದ್ದ ಅವರ ಗಮನವು ಕ್ರಮೇಣ ಲೌಕಿಕ ಸುಖ ಸೌಲಭ್ಯಗಳತ್ತ ತಿರುಗಿತು. ಪರಸ್ಪರ ಪ್ರೀತಿ-ವಿಶ್ವಾಸದ ಬದಲಿಗೆ ಪರಸ್ಪರ ಟೀಕೆ ವಿಮರ್ಶೆ ಆರಂಭವಾಯಿತು. ಖಲೀಫಾ ಉಸ್ಮಾನ್‌ರ(ರ) ಸಹಜ ಸ್ವಭಾವ ಮತ್ತು ಕೆಲವು ರಾಜಕೀಯ ಧೋರಣೆಗಳೂ ಅದಕ್ಕೆ ಸ್ವಲ್ಪಂಶ ಪ್ರೇರಕವಾಗಿರಬಹುದು.

ಮೂರನೆಯ ಖಲೀಫ ಉಸ್ಮಾನ್‌ರ ಬಗ್ಗೆ ವೈರಿಗಳಿಗೂ ಜನರಿಗೂ ಉಮರ್‌ರ(ರ) ಬಗ್ಗೆ ಇದ್ದಂತಹ ಭೀತಿಯಿರಲಿಲ್ಲ. ಏಕೆಂದರೆ, ಮೃದು ಸ್ವಭಾವಿಯಾಗಿದ್ದ ಉಸ್ಮಾನ್(ರ) ಎಲ್ಲ

ವಿಷಯದಲ್ಲಿಯೂ ಸ್ವಲ್ಪ ಸಡಿಲು ಧೋರಣೆಯನ್ನು ಅನುಸರಿಸಿದ್ದರು. ಉಮರ್‌ರ(ರ) ಕಾಲದಲ್ಲಿದ್ದ 'ಬಿಗಿತನ'ದಿಂದ ಜನರು ರೋಸಿ ಹೋಗಿದ್ದಾರೆ. ಆದ್ದರಿಂದ ಅವರಿಗೆ ಸ್ವಲ್ಪ ರಿಯಾಯಿತಿ ನೀಡುವ ಅಗತ್ಯವಿದೆಯೆಂದು ಮನಗಂಡು ಅವರು ಉದ್ದೇಶ ಪೂರ್ವಕವಾಗಿಯೇ ಈ ಧೋರಣೆ ಕೈಗೊಂಡಿದ್ದರು. ಅದೇನಿದ್ದರೂ ಅದರ ಸಹಜ ಪರಿಣಾಮ ಎಲ್ಲ ರಂಗದಲ್ಲಿಯೂ ಕಾಣಿಸಿಕೊಂಡಿತು.

ಉಮರ್(ರ) ಪ್ರಮುಖ ಸಹಾಬಿಗಳು ಮದೀನಾದಲ್ಲಿಯೇ ಇರಬೇಕೆಂದು ನಿಶ್ಚಯಿಸಿದ್ದರು. ಕೆಲವೊಮ್ಮೆ ಸೇನಾನಾಯಕರಾಗಿ ಅಥವಾ ರಾಜ್ಯಪಾಲರಾಗಿ ನೇಮಿಸಿ ಕಳುಹಿಸಿದರೂ ಬಹುಬೇಗನೆ ಅವರನ್ನು ಮರಳಿ ಕರೆಸುತ್ತಿದ್ದರು. ಇತರ ಶ್ರೀಮಂತ ಪ್ರಾಂತ್ಯಗಳಿಗೆ ಹೋಗಿ ನೆಲೆಸಲು ಅವರಿಗೆ ಒಪ್ಪಿಗೆ ನೀಡುತ್ತಿರಲಿಲ್ಲ. ಆದರೆ ಉಸ್ಮಾನ್(ರ) ಅವರಿಗೆ ತಮಗೆ ಬೇಕಾದ ಪ್ರದೇಶಕ್ಕೆ ಹೋಗಿ ನೆಲೆಸುವ ಅನುಮತಿ ನೀಡಿದರು. ಧರ್ಮದ ಸಾಕಷ್ಟು ತಿಳುವಳಿಕೆಯಿಲ್ಲದ ಜನರಿಗೆ ಅವರ ಉಪಸ್ಥಿತಿಯಿಂದ ಪ್ರಯೋಜನವಾಗಲೆಂದು ಭಾವಿಸಿ ಅವರು ಆ ಕ್ರಮ ಕೈಗೊಂಡಿದ್ದರು. ಆದರೆ, ಅದರಲ್ಲಿ ಕೆಲವು ದುಷ್ಪರಿಣಾಮಗಳಿದ್ದುವು. ಮೊದಲನೆಯದಾಗಿ, ಕಾನೂನು ಮತ್ತು ಧೋರಣಾತ್ಮಕ ವಿಷಯಗಳ ಬಗ್ಗೆ ಪ್ರವಾದಿವರ್ಯರ(ಸ) ಪ್ರಮುಖ ಸಂಗಾತಿಗಳಾಗಿದ್ದ ಈ ಸಹಾಬಿಗಳ ಅಭಿಪ್ರಾಯ ತಿಳಿಯಲು ಖಲೀಫರಿಗೆ ಸಾಧ್ಯವಾಗಲಿಲ್ಲ. ಎರಡನೆಯದಾಗಿ, ವಿವಿಧ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿರುವ ಸಹಾಬಿಗಳ ಜತೆ ಹೊಸತಾಗಿ ಇಸ್ಲಾಮ್ ಸ್ವೀಕರಿಸಿದವರು ಸೇರಿ ಪಕ್ಷಪಾತೀ ಮನೋಭಾವದ ಗುಂಪುಗಾರಿಕೆ ಸಮುದಾಯದಲ್ಲಿ ಬೆಳೆಯಿತು.

ರಾಜ್ಯಪಾಲ, ಸೇನಾನಾಯಕ ಮುಂತಾದ ಉನ್ನತ ಹುದ್ದೆಯಲ್ಲಿರುವವರು ಎಷ್ಟೇ ಸಮರ್ಥರಾಗಿದ್ದರೂ- ಉಮರ್(ರ) ಶಾಶ್ವತವಾಗಿ ಇರಗೊಡುತ್ತಿರಲಿಲ್ಲ. ಲೌಕಿಕ ಸುಖ ಸೌಲಭ್ಯಗಳಿಂದ ಆಕರ್ಷಿತರಾಗಿ ವಿನಯದ ಬದಲಿಗೆ ಅಹಂಕಾರ ಬೆಳೆಯಬಹುದೆಂಬ ಭಾವನೆಯಿಂದ ಅವರು ಹಾಗೆ ಮಾಡುತ್ತಿದ್ದರು. ಆದರೆ, ಕೆಲಸ ಮಾಡಿ ಅನುಭವವಿರುವ ಸ್ಥಾನದಿಂದ ಯಾರನ್ನೂ ವಿನಾಕಾರಣ ಬದಲಾಯಿಸದಿರುವುದು ಹಿತಕರವೆಂದು ಉಸ್ಮಾನ್(ರ) ಭಾವಿಸಿದ್ದರು.

ಆಡಳಿತ ವ್ಯವಹಾರ ಮತ್ತು ಆರ್ಥಿಕ ರಂಗಗಳಲ್ಲಿ ಉಸ್ಮಾನ್‌ರವರು(ರ) ತಳೆದ ಧೋರಣೆಯಿಂದ ಕೆಲವರಿಗೆ ತೃಪ್ತಿಯಾದರೆ ಇನ್ನು ಕೆಲವರಿಗೆ ಅತೃಪ್ತಿಯಾಗಿತ್ತು. ಇದು ಸಮುದಾಯದಲ್ಲಿದ್ದ ಕಪಟವಿಶ್ವಾಸಿಗಳಿಗೂ ಇತರ ಆಂತರಿಕ ವೈರಿಗಳಿಗೂ ಅನುಕೂಲವಾಯಿತು. ಅವರು ಅದನ್ನು ಚೆನ್ನಾಗಿ ಬಳಸಿಕೊಂಡರು. ಮುಸ್ಲಿಮ್ ಸಮುದಾಯದಲ್ಲಿ ಒಡಕು ಹುಟ್ಟಿಸಿ, ಖಲೀಫರ ವಿರುದ್ಧ ಜನರನ್ನು ಎತ್ತಿಕಟ್ಟುವ ಪ್ರಯತ್ನವನ್ನು ಅವರು ಆರಂಭಿಸಿದರು.

ಪವಿತ್ರ ಗ್ರಂಥದ ಕ್ರೋಡೀಕರಣ

ಹ. ಉಸ್ಮಾನ್‌ರ(ರ) ಕಾಲದಲ್ಲಿ ಬಹಳ ಸಂಖ್ಯೆಯಲ್ಲಿ ಅರಬೇತರರು ಇಸ್ಲಾಮ್ ಸ್ವೀಕರಿಸಿದ್ದರು. ಕೂಫಾ, ಬಸ್ರಾ ನಗರಗಳು ಮತ್ತು ಈಜಿಪ್ಟ್ ದೇಶ ಇಸ್ಲಾಮೀ ಸಂಸ್ಕೃತಿಯ ಕೇಂದ್ರಗಳಾಗಿ ಬೆಳೆದುವು. ಈ ಸಂದರ್ಭದಲ್ಲಿ ಒಂದು ಹೊಸ ಸಮಸ್ಯೆ ಹುಟ್ಟಿಕೊಂಡಿತು.

ಅರಬಿಯನ್ನು ವಿವಿಧ ಶೈಲಿಯಲ್ಲಿ ಮಾತಾಡುವವರಿದ್ದರು. ಕರ್ನಾಟಕದಲ್ಲಿ ಕನ್ನಡವನ್ನು ವಿವಿಧ ರೀತಿಯಲ್ಲಿ ಮಾತನಾಡುವಂತೆ. ಅದರಲ್ಲಿ ಯಾವುದು ಉತ್ತಮ ಶೈಲಿಯೆಂದು ನಿರ್ಧರಿಸುವುದು ಕಷ್ಟದ ಕೆಲಸ. ಅರಬಿ ಭಾಷೆಯ ಸ್ಥಿತಿಯೂ ಆ ಪ್ರಕಾರವಿತ್ತು. ಪ್ರವಾದಿಯವರು(ಸ) ಕುರೈಶಿ ಗೋತ್ರದವರಾಗಿದ್ದುದರಿಂದ ಆ ಶೈಲಿಯೇ ಹೆಚ್ಚು ಪ್ರಚಾರಗೊಂಡಿತ್ತು. ಆದರೆ ಎಲ್ಲರೂ ಆ ಶೈಲಿಯಲ್ಲಿಯೇ ಕುರ್‌ಆನ್ ಓದಬೇಕೆಂದು ಪ್ರವಾದಿ(ಸ) ಆದೇಶಿಸಿರಲಿಲ್ಲ. ಅದಲ್ಲದೇ ಕುರ್‌ಆನ್ 7 ಶೈಲಿಯಲ್ಲಿ ಅವತೀರ್ಣಗೊಂಡಿತ್ತು. ಆದರಲ್ಲಿ ಯಾವ ಶೈಲಿಯನ್ನೂ ಅಂಗೀಕರಿಸಬಹುದೆಂದು ಪ್ರವಾದಿ(ಸ) ಹೇಳಿದ್ದರು, ಆದರೆ, ಉಸ್ಮಾನ್‌ರ(ರ) ಆಡಳಿತ ಕಾಲದಲ್ಲಿ ಸಹಾಬಿಗಳು ಕಡಿಮೆಯಾಗಿ ತಾಬಈಗಳು(ಸಹಾಬಿಗಳ ಕಾಲದಲ್ಲಿ ಅವರಿಂದ ಕಲಿತವರು) ಹೆಚ್ಚಿದಾಗ ಪ್ರತಿಯೊಂದು ಶೈಲಿಯವರೂ ತಮ್ಮ ಕುರ್‌ಆನ್ ಪಾರಾಯಣ ಶೈಲಿಯೇ ಉತ್ತಮವೆಂದು ವಾದಿಸತೊಡಗಿದರು. ಈ ವಾದ ಮತ್ತು ಹಠವು ಮುಸ್ಲಿಮರ ಹಾಗೂ ಕುರ್‌ಆನಿನ ಭದ್ರತೆಗೆ ಹಾನಿಕರವಾಗಿತ್ತು. ಆದ್ದರಿಂದ ಎಲ್ಲ ಶೈಲಿಯನ್ನೂ ಏಕೀಕರಿಸಿ ಜಗತ್ತಿನ ಎಲ್ಲೆಡೆಯಲ್ಲಿರುವ ಮುಸ್ಲಿಮರ ವಶದಲ್ಲಿ ಕೇವಲ ಒಂದೇ ರೀತಿಯ ಕುರ್‌ಆನ್ ಗ್ರಂಥ(ಮುಸ್ಹಫ್) ಇರಬೇಕೆಂದು ಉಸ್ಮಾನ್(ರ) ನಿರ್ಧರಿಸಿದರು. ಅಲ್ಲಾಹನ ವಿಶೇಷ ಅನುಗ್ರಹದಿಂದ ಅವರು ಆ ಕಾರ್ಯವನ್ನು ಸಾಧಿಸಿದರು. ಹಿಂದೆ ಅಬೂಬಕರ್ ಸಿದ್ದೀಕ್‌ರು(ರ) ಕ್ರೋಡೀಕರಿಸಿದ್ದ ಕುರ್‌ಆನ್ ಗ್ರಂಥವು ಉಮ್ಮುಲ್ ಮುಅ್‌ಮಿನೀನ್ ಹಫ್ಸಾರ(ರ) ಬಳಿ ಇತ್ತು. ಅದನ್ನು ತರಿಸಿ ಅದರ ಪ್ರತಿ ಮಾಡಿ ಎಲ್ಲ ರಾಜ್ಯಗಳಿಗೂ ಅವರು ಕಳುಹಿಸಿಕೊಟ್ಟರು. ಈ ಪ್ರತಿಗಳನ್ನು ಮತ್ತು ಅದರ ನಿಜ ನಕಲುಗಳನ್ನು ಮಾತ್ರ ಉಳಿಸಬೇಕೆಂದು ಅವರು ಆಜ್ಞೆ ನೀಡಿದ್ದರು. ಇಂದು ಜಗತ್ತಿನಲ್ಲಿ ಮುಸ್ಲಿಮರು ಪಾರಾಯಣ ಮಾಡುವ ಕುರ್‌ಆನ್ ಗ್ರಂಥಗಳು ಆ ಮೂಲ ಪ್ರತಿಯ ನಕಲುಗಳಾಗಿವೆ. ಆದ್ದರಿಂದ, ಅವುಗಳನ್ನು 'ಮುಸ್ಹಫ್ ಉಸ್ಮಾನಿ' ಎಂದು ಕರೆಯಲಾಗುತ್ತದೆ. ಜಗತ್ತಿನ ಅಂತ್ಯದ ತನಕ ಅವು ಉಳಿಯುವುವು. ಉಸ್ಮಾನ್‌ರ(ರ) ಈ ಸಕಾಲಿಕ ಕ್ರಮದಿಂದ ಮುಸ್ಲಿಮ್ ಸಮುದಾಯವು ತೀವ್ರ ಒಡಕಿನಿಂದ ಮುಕ್ತವಾಯಿತು. ಕೇವಲ ಈ ಒಂದು ಕಾರಣದಿಂದಲೇ ಮುಸ್ಲಿಮ್ ಸಮುದಾಯವು ಸದಾ ಉಸ್ಮಾನ್‌ರನ್ನು(ರ) ಕೃತಜ್ಞತೆಯಿಂದ ಸ್ಮರಿಸುವುದು ಖಚಿತ. ಅಲ್ಲಾಹ್ ಅವರಿಗೆ ಚಿರಂತನ ಅನುಗ್ರಹ ದಯಪಾಲಿಸಲಿ.

ದಾರುಣ ಅಂತ್ಯ

ಉಸ್ಮಾನ್‌ರ(ರ) ಆಡಳಿತದಿಂದ ಒಂದು ವಿಭಾಗವು ಅಸಂತೃಪ್ತವಾಗಿತ್ತಷ್ಟೇ. ಈ ಅಸಂತೃಪ್ತಿ ದಿನೇ ದಿನೇ ಹೆಚ್ಚಿತು ಅಥವಾ ಅದನ್ನು ಹೆಚ್ಚಿಸಿ ವ್ಯಾಪಕಗೊಳಿಸುವ ಪ್ರಯತ್ನಗಳು ಇನ್ನೊಂದೆಡೆ ಭರದಿಂದ ಸಾಗಿತು. ಸಾಮಾನ್ಯವಾಗಿ ಒಬ್ಬರಿಗೆ ಎಲ್ಲರನ್ನೂ ಸಂತೃಪ್ತಗೊಳಿಸಲು ಸಾಧ್ಯವಿಲ್ಲ. ಒಬ್ಬರನ್ನು ತೃಪ್ತಿಪಡಿಸಿದರೆ ಇನ್ನೊಬ್ಬರಿಗೆ ಅತೃಪ್ತಿಯಾಗಬಹುದು. ಆದರೆ, ಉತ್ತಮ ಮನೋಭಾವದಿಂದ ವರ್ತಿಸಿದರೆ ಯಾವ ಸಮಸ್ಯೆಯನ್ನೂ ಬಗೆಹರಿಸಬಹುದು. ಅದೇ ವೇಳೆ ದುಷ್ಟ ಮನೋಭಾವದ ವ್ಯಕ್ತಿಯು ಒಬ್ಬನೇ ಇದ್ದರೂ ಆತ ಇತರರ ಮನಸ್ಸನ್ನೂ ಕೆಡಿಸುತ್ತಾನೆ. ಉಸ್ಮಾನ್‌ರ(ರ) ವಿರುದ್ಧವೂ ಹಾಗೆಯೇ ಆಯಿತು.

ಸನ್‌ಆದ ಯಹೂದಿ ಕೂಟದಲ್ಲಿ ಇಬ್ನ್ ಸಬಲ್ ಎಂಬೋರ್ವ ಪುರೋಹಿತನಿದ್ದ. ಆತ ಉಸ್ಮಾನ್‌ರ(ರ) ಕಾಲದಲ್ಲಿ ಇಸ್ಲಾಮನ್ನು ಸ್ವೀಕರಿಸಿರುವುದಾಗಿ ಸ್ವಯಂ ವಾದಿಸಿದ್ದ. ಆದರೆ ಆತ ಮಹಾ ಕಪಟಿಯಾಗಿದ್ದ. ಯಹೂದಿಯಾಗಿದ್ದು ಇಸ್ಲಾಮನ್ನು ನಾಶಪಡಿಸಲು ಸಾಧ್ಯವಿಲ್ಲವೆಂದು ಮನಗಂಡು ಆತ ಈ ಕಪಟವೇಷ ಧರಿಸಿದ್ದ. ಪುನರ್ಜನ್ಮವಾದ, ಅವತಾರವಾದ, ಬಹುದೇವವಾದ ಹೀಗೆ ಇಸ್ಲಾಮೀ ವಿಶ್ವಾಸ ಶ್ರದ್ಧೆಗಳಿಗೆ ವಿರುದ್ಧವಾದ ಹಲವು ವಾದಗಳನ್ನು ಆತ ಉಪಾಯದಿಂದ ಮುಸ್ಲಿಮರ ನಡುವೆ ಹಿಜಾಝ್‌ನಲ್ಲಿ ಪ್ರಚಾರ ಮಾಡಿದ್ದ. ಆದರೆ, ಅದಕ್ಕೆ ಅಲ್ಲಿ ಮನ್ನಣೆ ದೊರೆಯಲಿಲ್ಲ. ಆದ್ದರಿಂದ ಅಲ್ಲಿಂದ ಬಸ್ರಾ, ಅನಂತರ ಸಿರಿಯಾ, ಈಜಿಪ್ಟ್‌ಗಳಿಗೆ ಹೋಗಿ ನೆಲೆಸಿದ. ಪ್ರವಾದಿ ಮುಹಮ್ಮದ್(ಸ) ನಿಧನರಾಗಿಲ್ಲ. ಅವರು ಅಂತ್ಯ ದಿನದಲ್ಲಿ ಇಳಿದು ಬರುತ್ತಾರೆ. ಖಿಲಾಫತ್ತನ್ನು ಅಲೀಯವರಿಗೆ(ರ) ನೀಡಬೇಕೆಂದು ಪ್ರವಾದಿಯವರು(ಸ) ವಸಿಯ್ಯತ್ ಮಾಡಿದ್ದರೂ ಹಿಂದಿನ ಖಲೀಫರಂತೆಯೇ ಉಸ್ಮಾನ್‌ರೂ(ರ) ಅದನ್ನು ಅಡಗಿಸಿ ಅಲೀಯವರ(ರ) ಹಕ್ಕನ್ನು ಕಸಿದಿದ್ದಾರೆ. ಆದ್ದರಿಂದ ಜನರು ಉಸ್ಮಾನ್(ರ) ಅಥವಾ ಅವರ ರಾಜ್ಯಪಾಲರನ್ನು ಅನುಸರಿಸಬೇಕಾಗಿಲ್ಲವೆಂದು ಆತ ಪ್ರಚಾರ ಮಾಡಿದ. ಈಜಿಪ್ಟ್‌ನಲ್ಲಿ ತನ್ನಂತಹ ಇತರ ಕಪಟಿಗಳ ಜತೆ ಇಸ್ಲಾಮಿನ ವಿಶೇಷ ತಿಳುವಳಿಕೆಯಿಲ್ಲದ ಕೆಲ ಬಡಪಾಯಿಗಳೂ ಆತನಿಗೆ ಅಲ್ಲಿ ದೊರೆತರು. ಅವರ ಮೂಲಕ ದೇಶದಾದ್ಯಂತ ಖಲೀಫರ ವಿರುದ್ಧ ಕುಪ್ರಚಾರ ನಡೆಸಿದ. ಕೆಲ ಸಮಯದ ಬಳಿಕ ಈ ಹೀನ ವೃತ್ತಿಯ ದುಷ್ಪರಿಣಾಮ ಪ್ರಕಟವಾಯಿತು. ಹಲವು ಪ್ರಾಂತ್ಯಗಳ ಜನರು ನಮ್ಮ ಈಗಿನ ರಾಜ್ಯಪಾಲರನ್ನು ವಜಾಗೊಳಿಸಿ ಬೇರೆಯವರನ್ನು ನೇಮಿಸಬೇಕೆಂದು ವಿನಾಕಾರಣ ಖಲೀಫರನ್ನು ಒತ್ತಾಯಿಸಿದರು. ಅದರೊಂದಿಗೆ ಇಬ್ನು ಸಬಲ್, ಅಲೀಯವರ(ರ) ಪಕ್ಷ ವಹಿಸಿ ಖಲೀಫರ ವಿರುದ್ಧ ಕುಪ್ರಚಾರ ಯಥಾವತ್ತಾಗಿ ನಡೆಸುತ್ತಿದ್ದನು.

ತನ್ಮಧ್ಯೆ ಈಜಿಪ್ಟ್‌ನಲ್ಲಿ ಕೆಲವರು ಅಲ್ಲಿನ ರಾಜ್ಯಪಾಲರಾಗಿದ್ದ ಅಬ್ದುಲ್ಲಾ ಬಿನ್ ಸಅದ್‌ರೊಡನೆ ಕೆಲವು ಸಮಸ್ಯೆಗಳ ಕುರಿತು ಪ್ರಶ್ನಿಸಿದ್ದರು. ಅವರು ಅದಕ್ಕೆ ಸಮರ್ಪಕ ಉತ್ತರ ನೀಡಿರಲಿಲ್ಲ. ಮಾತ್ರವಲ್ಲ, ಪ್ರಶ್ನಿಸಿದವರನ್ನು ಹೊಡೆದು ದಂಡಿಸಿದರು. ಇದರಿಂದ ಸಬಲ್ ಬಣದವರ ಉತ್ಸಾಹ ಹೆಚ್ಚಿತು. ಆ ಕೂಡಲೇ ಇಬ್ನ್ ಸಬಲ್ ಒಂದು ವ್ಯಾಪಕ ಗಲಭೆಯ ಯೋಜನೆ ಸಿದ್ಧಪಡಿಸಿದನು. ರಾಜ್ಯಪಾಲರ ವಿರೋಧಿಗಳ ಜತೆ ಹಜ್ಜ್ ವೇಳೆಯಲ್ಲಿ ಮದೀನಾದಲ್ಲಿ ಸೇರಬೇಕೆಂದು ಬಸ್ರಾ ಮತ್ತು ಕೂಫಾಗಳಲ್ಲಿದ್ದ ತನ್ನ ಅನುಯಾಯಿಗಳಿಗೆ ತಿಳಿಸಿದ.

ಹಜ್ಜ್ ಕಾಲದಲ್ಲಿ ಮದೀನಾದಲ್ಲಿ ಒಂದು ಬಣವು ಖಲೀಫರ ಮೇಲೆ ನಾನಾ ರೀತಿಯ ಆರೋಪ ಹೊರಿಸಿ ಜನರಲ್ಲಿ ಗಲಭೆ ಹುಟ್ಟಿಸಲು ಪ್ರಯತ್ನಿಸುತ್ತಿದೆಯೆಂದು ಅರಿತಾಗ, ಶಾಂತ ಸ್ವಭಾವಿಯಾಗಿದ್ದ ಖಲೀಫರು ಮಸೀದಿಯಲ್ಲಿ ಜನರನ್ನು ಸೇರಿಸಿ ಭಾಷಣ ಮಾಡಿದರು. ಅದರಲ್ಲಿ ಸಬಈಗಳ ಕುಪ್ರಚಾರಗಳಿಗೆ ಸ್ಪಷ್ಟ ಉತ್ತರವನ್ನು ನೀಡಿದಾಗ ಜನರಿಗೆ ಸತ್ಯದ ಅರಿವಾಯಿತು. ಅವರು ಸಬಈಗಳನ್ನು ದಂಡಿಸಬೇಕೆಂದು ಒತ್ತಾಯಿಸಿದರು. ಆದರೆ ಸಹನಶೀಲರಾದ ಖಲೀಫರು ಅವರನ್ನು ಹಾಗೆಯೇ ಬಿಟ್ಟರು. ಖಲೀಫರ ವಿರುದ್ಧ ಈ ರೀತಿ ವರ್ತಿಸುವುದರಿಂದ ಇಸ್ಲಾಮ್ ದುರ್ಬಲಗೊಂಡು ಮುಸ್ಲಿಮರಲ್ಲಿ ಅನೈಕ್ಯವುಂಟಾಗುವುದೆಂದು ಉಸ್ಮಾನ್‌ರ(ರ) ಪರವಾಗಿ ಅಲೀಯವರೂ(ರ) ಬಲವಾಗಿ ವಾದಿಸಿದ್ದರು.

ರಾಜ್ಯಪಾಲರನ್ನು ಬದಲಾಯಿಸಬೇಕೆಂಬ ಈಜಿಪ್ಟ್‌ನವರ ಬೇಡಿಕೆಯನ್ನು ಖಲೀಫ ಒಪ್ಪಿದರು. ಅವರ ಅಭಿಪ್ರಾಯದಂತೆ ಮುಹಮ್ಮದ್ ಬಿನ್ ಅಬೀಬಕರ್‌ರನ್ನು ಹೊಸ ರಾಜ್ಯಪಾಲರಾಗಿ ನೇಮಿಸಿದ ಘೋಷಣೆಯನ್ನು ಖಲೀಫರು ಅವರಿಗೆ ಒಪ್ಪಿಸಿದ್ದರು. ಆತ ಈಜಿಪ್ಟ್‌ನಿಂದ ಬಂದ ಕ್ರಾಂತಿಕಾರಿ ನಾಯಕನಾಗಿದ್ದ. ಅಲ್ಲಿನ ಸಮಸ್ಯೆಗಳನ್ನು ಶಾಂತಿಯಿಂದ ಬಗೆಹರಿಸಲಿಕ್ಕಾಗಿ ಕೆಲವಾರು ಅನ್ಸಾರ್ ಮತ್ತು ಮುಹಾಜಿರರನ್ನು ಅಲ್ಲಿಗೆ ಕಳುಹಿಸಿದರು.

ಸಮಸ್ಯೆಯು ತಾತ್ಕಾಲಿಕವಾಗಿಯಾದರೂ ಉತ್ತಮ ರೀತಿಯಲ್ಲಿ ಬಗೆಹರಿಯಿತು. ಇಬ್ನ್ ಸಅದ್ ಹಲವು ವರ್ಷಗಳಿಂದ ಕಟ್ಟಿ ಬೆಳೆಸಿದ್ದ ಕನಸಿನ ಕೋಟೆಯು ಕುಸಿಯಿತು. ಆದರೆ ಆ ಪಿಶಾಚಿಯ ಸಂಗಡಿಗರು ನಿರಾಶರಾಗಲಿಲ್ಲ. ಆತ ಕ್ಷಿಪ್ರವಾಗಿ ಹೊಸ ತಂತ್ರಗಳನ್ನು ರೂಪಿಸಿದ.

ಇಬ್ನ್ ಸಬಇಯ ಪಿತೂರಿಯಿಂದ ಗಲಭೆಗೆ ಬಂದಿದ್ದ ಜನರು ಕೊನೆಗೆ ಸಮಾಧಾನದಿಂದ ಮರಳಿ ಹೊರಟಿದ್ದರು. ಆಗ ಅವರ ಮುಂದೆ ಸ್ವಲ್ಪ ದೂರದಲ್ಲಿ ಓರ್ವ ಕರಿಯ ವ್ಯಕ್ತಿಯು ಸಂದೇಹಾಸ್ಪದವಾಗಿ ಸಂಚರಿಸುತ್ತಿರುವುದು ಕಾಣಿಸಿತು. ಗಲಭೆಕೋರರು ಆತನನ್ನು ಹಿಡಿದು ಪರಿಶೀಲಿಸಿದಾಗ ಒಂದು ಪತ್ರ ದೊರೆಯಿತು. ಈಜಿಪ್ಟ್‌ನ ರಾಜ್ಯಪಾಲರಿಗೆ ಬರೆದ ಆ ಪತ್ರಕ್ಕೆ ಖಲೀಫಾ ಉಸ್ಮಾನ್‌ರ(ರ) ಮೊಹರು ಹಾಕಲಾಗಿತ್ತು. ಈ ಗಲಭೆಕೋರರು ಈಜಿಪ್ಟ್‌ಗೆ ಮರಳಿ ಬಂದರೆ ಮುಹಮ್ಮದ್ ಬಿನ್ ಅಬೀಬಕರ್ ಸಹಿತ ಎಲ್ಲರನ್ನೂ ವಧಿಸಬೇಕೆಂದು ಪತ್ರದಲ್ಲಿ ಸೂಚಿಸಲಾಗಿತ್ತು.

ಇದನ್ನು ನೋಡಿ ಗಲಭೆಕೋರರು ಕೋಪೋದ್ರಿಕ್ತರಾದರು. ಅವರು ಪುನಃ ಮದೀನಾಕ್ಕೆ ಹಿಂತಿರುಗಿದರು. ಅಲೀ(ರ) ಮತ್ತು ಇತರ ಕೆಲವು ಸಹಾಬಿಗಳ ಜತೆ ಅವರು ಉಸ್ಮಾನ್‌ರ(ರ) ಮನೆಗೆ ಹೋದರು. ಪತ್ರ ಕೊಂಡೊಯ್ಯುತ್ತಿದ್ದ ಕರಿಯ ಗುಲಾಮ ಮತ್ತು ಆತ ಸಂಚರಿಸುತ್ತಿದ್ದ ವಾಹನ ಹಾಗೂ ಪತ್ರದಲ್ಲಿದ್ದ ಮೊಹರು ಉಸ್ಮಾನ್‌ರದ್ದೆಂದು(ರ) ವ್ಯಕ್ತವಾಗಿತ್ತು.

ಆದರೆ ಅಂತಹ ಪತ್ರವನ್ನು ನಾನು ಬರೆದಿಲ್ಲ ಅಥವಾ ಬರೆಯುವಂತೆ ಬೇರೆಯವರಿಗೆ ಆದೇಶಿಸಿಲ್ಲ. ಈ ಪ್ರಕರಣದ ಬಗ್ಗೆ ಈ ಮುಂಚೆ ನನಗೇನೂ ತಿಳಿದಿರಲಿಲ್ಲವೆಂದು ಉಸ್ಮಾನ್(ರ) ಆಣೆ ಹಾಕಿ ಹೇಳಿದರು. ಉಸ್ಮಾನ್(ರ) ಸತ್ಯದ ವಿನಾ ಆಣೆ ಹಾಕಿ ಹೇಳುವುದಿಲ್ಲವೆಂದು ಅಲೀಯವರು(ರ) ಇತರರಿಗೆ ಮನವರಿಕೆ ಮಾಡಿದರು. ಹಾಗಾದರೆ ಉಸ್ಮಾನ್‌ರ(ರ) ಮನೆಯಲ್ಲಿಯೇ ಇರುವ ಅವರ ಸಂಬಂಧಿಕ ಮತ್ತು ಕಾರ್ಯದರ್ಶಿ ಮರ್ವಾನ್ ಪತ್ರ ಬರೆದಿರಬಹುದು. ಆದ್ದರಿಂದ ಆತನನ್ನು ನಮ್ಮ ವಶ ಒಪ್ಪಿಸಬೇಕು. ಈ ಗಂಭೀರ ವಿಷಯವನ್ನು ಅಲಕ್ಷಿಸಿದ ಉಸ್ಮಾನ್(ರ) ಖಲೀಫಾ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಗಲಭೆಕೋರರು ಒತ್ತಾಯಿಸಿದರು. ಆದರೆ ಉಸ್ಮಾನ್(ರ) ಅವರ ಈ ಬೇಡಿಕೆಗೆ ಮಣಿಯಲಿಲ್ಲ. ಏಕೆಂದರೆ ಅಂತಹ ಅನೇಕ ಸುಳ್ಳು ಪತ್ರಗಳು ಅಲೀ(ರ) ಮತ್ತು ಆಯಿಶಾ(ರ) ಅವರ ಹೆಸರಲ್ಲಿ ಕೂಡಾ ಪ್ರಚಾರಗೊಂಡಿತ್ತು. ಪತ್ರ ದೊರೆತವರು ಅವರ ಬಳಿ ಹೋದಾಗ ಮಾತ್ರ ಅವರಿಗೆ ವಾಸ್ತವಿಕತೆಯ ಅರಿವಾಗುತ್ತಿತ್ತು. ಹಾಗೆಯೇ ಇದು ಕೂಡಾ ಸುಳ್ಳು ಪತ್ರವೆಂದು ಉಸ್ಮಾನ್(ರ) ಒತ್ತಿ ಹೇಳಿದರು.

ಗಲಭೆಕೋರರು ಉಸ್ಮಾನ್‌ರ(ರ) ಮನೆಯನ್ನು ಸುತ್ತುವರಿದರು. ನಮಾಝಿಗಾಗಿ ಮಸೀದಿಗೆ ಹೋಗಲೂ ಬಿಡಲಿಲ್ಲ. 14ದಿನಗಳ ಈ ದಿಗ್ಬಂಧನದ ಬಳಿಕ ಗಲಭೆಕೋರರು ಇನ್ನೊಂದು ಹೆಜ್ಜೆಯಿರಿಸಿದರು. ಹೊರಗಿನಿಂದ ಒಂದು ಹನಿ ನೀರು ಕೂಡಾ ಸಿಗದಂತೆ ಮಾಡಿ ಜನರ ಮತ್ತು ಖಲೀಫರ ಸಂಬಂಧವನ್ನು ಕಡಿದು ಹಾಕಿದರು.

ಮತ್ತೆ ಕೆಲವಾರು ದಿನಗಳು ಕಳೆದುವು. ಹಿಜರಿ 35ನೆಯ ವರ್ಷದ ದುಲ್‌ಹಜ್ ತಿಂಗಳ 8ರಂದು ಶುಕ್ರವಾರ. ಅಂದು ಗಲಭೆಕೋರರು ಉಸ್ಮಾನ್‌ರನ್ನು(ರ) ವಧಿಸುವ ತೀರ್ಮಾನ ಮಾಡಿದ್ದರು. ಅದಕ್ಕಾಗಿ ಕೆಲವರು ಹೊಂಚು ಹಾಕುತ್ತಾ ಅವರ ಕೋಣೆಗೆ ನುಗ್ಗಿದರು. ಉಸ್ಮಾನ್(ರ) ಕುರ್‌ಆನ್ ಓದುತ್ತಿದ್ದರು. ತಂಡದಲ್ಲಿದ್ದ ಮುಹಮ್ಮದ್ ಬಿನ್ ಅಬೀಬಕರ್ ಅವರ ಗಡ್ಡವನ್ನು ಹಿಡಿದರು. ಆಗ ಉಸ್ಮಾನ್(ರ) ಶಾಂತವಾಗಿ ಹೀಗೆಂದರು: "ಸಹೋದರನ ಮಗನೇ! ಬೇಡ, ನೀನು ಈಗ ಮಾಡಿದ ಕೃತ್ಯವನ್ನು ನಿನ್ನ ತಂದೆಯೂ ಮಾಡುತ್ತಿರಲಿಲ್ಲ." ಈ ಮಾತುಗಳಿಂದ ಲಜ್ಜಿತರಾಗಿ ಮುಹಮ್ಮದ್ ಗಡ್ಡ ಬಿಟ್ಟ. ತಕ್ಷಣವೇ ಹಿಂದಿನಿಂದ ಕಿನಾನ ಬಿನ್ ಬಶರ್ ಎಂಬಾತ ಬಾಣದಿಂದ ಉಸ್ಮಾನ್‌ರ(ರ) ಕಿವಿಗೆ ತಿವಿದ. ಎಂತಹ ಘೋರ ಅಪರಾಧ!

ಆ ನಿರಪರಾಧಿಯಾಗಿದ್ದ ಸತ್ಪುರುಷರ ರಕ್ತವು ಗಡ್ಡದಿಂದ ಹರಿದು ಕುರ್‌ಆನ್ ಗ್ರಂಥದ ಮೇಲೆ ಬಿತ್ತು. بسم الله توكّلت على الله 'ಬಿಸ್ಮಿಲ್ಲಾಹಿ ತವಕ್ಕಲ್ತು ಅಲಲ್ಲಾಹಿ' ಎನ್ನುತ್ತಾ ಆ ಮಹಾನ್ ಖಲೀಫರು ಕುರ್‌ಆನ್ ಗ್ರಂಥವನ್ನು ಮುಚ್ಚಿದರು. ಒಂದೆಡೆಗೆ ಹೊರಳಿ ಮಲಗಿದರು. ಅಷ್ಟರಲ್ಲಿ ಉಳಿದವರೆಲ್ಲರೂ ಆ ಮಹಾ ಪಾತಕವನ್ನು ಪೂರ್ಣ ಗೊಳಿಸಿದರು. ಇಬ್ನ್ ಸಬಅ್ ಕೇಕೆ ಹಾಕಿದ. ಪಿಶಾಚಿಗಳೂ ಧ್ವನಿಗೂಡಿಸಿದವು.

ಉಸ್ಮಾನ್(ರ) ಹತರಾದರು! ಮುಸ್ಲಿಮ್ ಜಗತ್ತು ಸ್ತಬ್ಧವಾಯಿತು. ಝುಬೈರ್ ಬಿನ್ ಮುತ್‌ಇಮ್ ಹಾಗೂ ಇನ್ನಿಬ್ಬರು ಯಾರಿಗೂ ತಿಳಿಯದಂತೆ ಮೃತದೇಹವನ್ನು ಹೊರಗೊಯ್ದರು. ಅವರೇ ನಮಾಝ್ ನಿರ್ವಹಿಸಿದ ಬಳಿಕ ಸ್ನಾನ ಮಾಡಿಸದೆ ಮತ್ತು ಹುತಾತ್ಮರ ಬಟ್ಟೆ ಬದಲಾಯಿಸದೆ ಜನ್ನತುಲ್ ಬಕೀಅ್ ಎಂಬ ಸಾರ್ವಜನಿಕ ಕಬರಸ್ಥಾನದ ಸಮೀಪದ ತೋಟದಲ್ಲಿ ದಫನ ಮಾಡಿದರು.

ಹೀಗೆ ಮುಸ್ಲಿಮರ ತೃತೀಯ ಖಲೀಫರಾಗಿದ್ದ ಉಸ್ಮಾನ್(ರ) ಅಕ್ರಮ-ಅನ್ಯಾಯ ತುಂಬಿದ ಈ ಜಗತ್ತಿನಿಂದ ಪ್ರವಾದಿಯ ಬಳಿ ಸ್ವರ್ಗಕ್ಕೆ ಹೋದರು. ಉಸ್ಮಾನ್‌ರು(ರ) ಸ್ವರ್ಗದಲ್ಲಿ ನನ್ನ ಸಂಗಾತಿಯಾಗಿರುವರೆಂದು ಪ್ರವಾದಿ(ಸ) ಹೇಳಿದ್ದರು!

ಅಲೀ ಬಿನ್ ಅಬೀತಾಲಿಬ್(ರ)

(ಆಡಳಿತ ಕಾಲ - ಹಿ.ಶ.: 35-40, ಕ್ರಿ.ಶ.: 656-661)

ಅಲೀ(ರ) ಅವರು ಪ್ರವಾದಿಯವರ(ಸ) ಪಿತೃ ಸಹೋದರರಾದ ಅಬೂತಾಲಿಬ್‌ರ ಪುತ್ರ. ಮುಹಮ್ಮದ್‌ರಿಗೆ(ಸ) ಪ್ರವಾದಿತ್ವ ಪಟ್ಟ ದೊರೆಯುವುದಕ್ಕಿಂತ ಹತ್ತು ವರ್ಷಗಳ ಹಿಂದೆ ಅಲೀ ಮಕ್ಕಾದಲ್ಲಿ ಜನಿಸಿದ್ದರು. ಅಬೂತಾಲಿಬ್‌ರ ಚಿಕ್ಕಪ್ಪ ಅಸದ್‌ರ ಪುತ್ರಿ ಫಾತಿಮಾ ಅವರ ತಾಯಿ. ಅಲೀಯವರು ಆದಿಯಲ್ಲಿಯೇ ಇಸ್ಲಾಮ್ ಸ್ವೀಕರಿಸಿ ಮುಸ್ಲಿಮರಾಗಿ ಪ್ರವಾದಿಯವರ(ಸ) ಜತೆ ಹಿಜ್ರತ್ ಹೋಗಿದ್ದರು.

ಅಬೂತಾಲಿಬ್‌ರಿಗೆ ಅನೇಕ ಮಕ್ಕಳು ಮತ್ತು ಆಶ್ರಿತರಿದ್ದರು. ಒಮ್ಮೆ ಮಕ್ಕಾದಲ್ಲಿ ಬರಗಾಲ ಬಂದಾಗ ಅವರ ಜೀವನ ಸಂಕಷ್ಟಮಯವಾಯಿತು. ಆ ವೇಳೆ ಪ್ರವಾದಿಯವರು(ಸ) ಚಿಕ್ಕಪ್ಪ ಅಬ್ಬಾಸ್‌ರ ಬಳಿ ಹೋಗಿ ಅಬೂತಾಲಿಬ್‌ರ ತಾಪತ್ರಯವನ್ನು ಕಡಿಮೆಗೊಳಿಸಲು ನೆರವಾಗುವಂತೆ ವಿನಂತಿಸಿದರು. ಆ ಪ್ರಕಾರ ಅಬೂತಾಲಿಬ್‌ರ ಒಪ್ಪಿಗೆ ಪಡೆದು ಜಅ್‌ಫರ್‌ರನ್ನು ಅಬ್ಬಾಸ್‌ರೂ ಅಲೀಯವರನ್ನು ಪ್ರವಾದಿಯವರೂ(ಸ) ಪೋಷಣೆಗಾಗಿ ವಹಿಸಿಕೊಂಡರು. ಅನಂತರ ಅಲೀಯವರು(ರ) ಪ್ರವಾದಿಯವರ(ಸ) ಸಂರಕ್ಷಣೆಯಲ್ಲಿ ಬೆಳೆದರು. ಹಾಗೆಯೇ ಮುಹಮ್ಮದ್‌ರಿಗೆ(ಸ) ಪ್ರವಾದಿತ್ವ ದೊರೆತಾಗ ಮಕ್ಕಳ ಪೈಕಿ 13 ವಯಸ್ಸಿನ ಅಲೀ(ರ) ಪ್ರಥಮವಾಗಿ ವಿಶ್ವಾಸವಿರಿಸಿದ್ದರು.

ರಾತ್ರಿ ಅಬೂಬಕರ್‌ರ(ರ) ಜತೆ ಪ್ರವಾದಿಯವರು(ಸ) ಮದೀನಾಕ್ಕೆ ಹಿಜ್ರತ್ ಹೊರಟಾಗ ಅಲೀಯವರು(ರ) ಕೊಲೆಯಾಗುವ ಭೀತಿಯಿದ್ದರೂ ಧೈರ್ಯದಿಂದ ಪ್ರವಾದಿಯವರ(ಸ) ವಸ್ತ್ರ ಹೊದ್ದು ಅವರ ಹಾಸಿಗೆಯಲ್ಲಿ ಮಲಗಿದ್ದರು. ಅನಂತರ ಪ್ರವಾದಿಯವರ(ಸ) ಆದೇಶದಂತೆ ಎಲ್ಲ ಅಮಾನತು ಸೊತ್ತುಗಳನ್ನು ವಾರೀಸುದಾರರಿಗೆ ನೀಡಿದ ಬಳಿಕವೇ ಅವರು ಹಿಜ್ರತ್ ಹೊರಟಿದ್ದರು. ಹಿಜರಿ ಎರಡನೆಯ ವರ್ಷ ಪ್ರವಾದಿಯವರು(ಸ) ಪುತ್ರಿ ಫಾತಿಮಾರನ್ನು ಅವರಿಗೆ ವಿವಾಹ ಮಾಡಿಕೊಟ್ಟರು. ಪ್ರವಾದಿಯವರ(ಸ) ಅತಿಮುದ್ದಿನ ಹಸನ್-ಹುಸೈನ್ ಎಂಬೀರ್ವ ಮೊಮ್ಮಕ್ಕಳು ಅಲೀಯವರಿಗೆ ಜನಿಸಿದ್ದರು.

ಅಲೀಯವರು(ರ) ಧೀರರೆಂದು ಖ್ಯಾತರಾಗಿದ್ದಾರೆ. ಇಂದಿಗೂ ಅರಬಿ ಭಾಷೆಯಲ್ಲಿ ಅದು ಜನಜನಿತವಾಗಿದೆ. ಅವರು ತಬೂಕ್ ಬಿಟ್ಟು ಇತರ ಎಲ್ಲ ಯುದ್ಧಗಳಲ್ಲಿಯೂ ಪ್ರವಾದಿಯವರ(ಸ) ಜತೆ ಭಾಗಿಯಾಗಿದ್ದರು. ತಬೂಕ್ ಯುದ್ಧದ ವೇಳೆ ನಗರದ ಉಸ್ತುವಾರಿಯನ್ನು ಪ್ರವಾದಿ(ಸ), ಅಲೀ(ರ) ಅವರಿಗೆ ನೀಡಿದ್ದರು. ಪ್ರವಾದಿಯವರ(ಸ) ಕಾಲದಲ್ಲಿ ಮುಸ್ಲಿಮರ ವಿಜಯ ಮತ್ತು

ವೈರಿಗಳ ಸಂಹಾರದಲ್ಲಿ ಅಲೀಯವರ(ರ) ಖಡ್ಗ ಗಣನೀಯ ಪಾತ್ರ ವಹಿಸಿತ್ತು. ಆದ್ದರಿಂದ ಅವರಿಗೆ ಬಹಳಷ್ಟು ವೈರಿಗಳೂ ಇದ್ದರು.

ಚಿಕ್ಕಂದಿನಲ್ಲಿಯೇ ಪ್ರವಾದಿಯವರ(ಸ) ಜತೆ ಬಾಳಿದುದರಿಂದ ಅವರ ಗುಣನಡತೆಗಳನ್ನು ಚೆನ್ನಾಗಿ ಅರಿತಿದ್ದರು. ಕುರ್‌ಆನಿನಲ್ಲಿಯೂ ಉತ್ತಮ ಪಾಂಡಿತ್ಯ ಹೊಂದಿದ್ದರು. ಬುದ್ಧಿವಂತಿಕೆಯೂ ಕಡಿಮೆಯಿರಲಿಲ್ಲ. ಆದ್ದರಿಂದ ಅಬೂಬಕರ್(ರ) ಎಲ್ಲ ಪ್ರಮುಖ ವಿಷಯಗಳನ್ನೂ ಅವರ ಜತೆ ಚರ್ಚಿಸುತ್ತಿದ್ದರು. ಅಂತೆಯೇ ಉಮರ್‌ರೂ(ರ) ಅವರೊಂದಿಗೆ ಚರ್ಚಿಸದೆ ಯಾವ ನಿರ್ಧಾರವನ್ನೂ ಕೈಗೊಳ್ಳುತ್ತಿರಲಿಲ್ಲ. ಅನಂತರ ಉಮರ್(ರ) ನೇಮಿಸಿದ್ದ ಸಮಾಲೋಚನಾ ಸಮಿತಿಯಿಂದ ಅಬ್ದುರ್ರಹ್ಮಾನ್ ಬಿನ್ ಔಫ್, ಉಸ್ಮಾನ್‌ರನ್ನು ಖಲೀಫರಾಗಿ ಚುನಾಯಿಸಿದ ಬಳಿಕ ಅಲೀಯವರು(ರ) ಬೈಅತ್ ಮಾಡಿ ಸಂಪೂರ್ಣ ಸಹಕಾರ ನೀಡಿದರು.

ಅಲೀಯವರ(ರ) ಖಿಲಾಫತ್

ಉಮರ್‌ರ(ರ) ಬಿಗಿ ಆಡಳಿತದ ಬಳಿಕ ಉಸ್ಮಾನ್‌ರ(ರ) ಆಡಳಿತವು ಬಹಳ ಸಡಿಲವಾಗಿತ್ತೆಂದು ನಮಗೆ ತಿಳಿದಿದೆ. ಈಗ ಅಲೀ(ರ) ಖಲೀಫರಾದರೆ ಪುನಃ ಉಮರ್‌ರ(ರ) ಬಿಗಿ ಧೋರಣೆಯನ್ನು ಅಂಗೀಕರಿಸಬಹುದು. ಇದರಿಂದಾಗಿ ಅಲೀಯವರು(ರ) ಖಲೀಫರಾದರೆ ಉಸ್ಮಾನ್‌ರ(ರ) ಕಾಲದಲ್ಲಿ ಅಕ್ರಮವಾಗಿ ಹಣ ಸಂಪಾದಿಸಿದವರಿಗೆ ಅದನ್ನು ಹಿಂತಿರುಗಿಸಬೇಕಾದೀತೆಂಬ ಭೀತಿಯಿತ್ತು. ಇಂತಹ ಕಾರಣಗಳಿಂದಾಗಿ ಕೆಲವರಿಗೆ ಅಲೀಯವರು(ರ) ಖಲೀಫರಾಗುವುದು ಇಷ್ಟವಿರಲಿಲ್ಲ.

ಆದರೆ, ಉಸ್ಮಾನ್‌ರ(ರ) ಹತ್ಯೆಯ ಬಳಿಕ ಖಲೀಫರ ಸ್ಥಾನಕ್ಕೆ ಅಲೀಯವರಿಗಿಂತ(ರ) ಯೋಗ್ಯರಾದವರು ಜನಸಾಮಾನ್ಯರಿಗೆ ಬೇರೆ ಕಾಣಿಸಲಿಲ್ಲ. ಆದ್ದರಿಂದ ಉಸ್ಮಾನ್‌ರ(ರ) ಹತ್ಯೆಯಲ್ಲಿ ಭಾಗಿಯಾದ ಗಲಭೆಕೋರರೂ(ಬಿನ್ ಸಬಅ್ ಕೂಡ) ಅಲೀಯವರಿಗೆ(ರ) ಬೈಅತ್ ಮಾಡಲು ಸನ್ನದ್ಧರಾದರು. ಆದರೆ ಅಲೀ(ರ) ಅದನ್ನು ಸಮ್ಮತಿಸಲಿಲ್ಲ. ಅವರು ಹೀಗೆಂದರು: "ಇದು ನೀವು ತೀರ್ಮಾನಿಸಬೇಕಾದ ವಿಷಯವಲ್ಲ. ಬದ್ರ್‌ನಲ್ಲಿ ಭಾಗವಹಿಸಿದ ಸಹಾಬಿಗಳು ಎಲ್ಲಿದ್ದಾರೆ? ತಲ್ಹತ್, ಝುಬೈರ್, ಸಅದ್ ಎಲ್ಲಿದ್ದಾರೆ? ಅವರು ತೀರ್ಮಾನಿಸಲಿ."

ಆದರೆ, ಅಲ್ಲಿ ನೆರೆದಿದ್ದ ಭಾರೀ ಜನಸ್ತೋಮದ ಆಗ್ರಹಕ್ಕೆ ವಿರುದ್ಧವಾಗಿ ಈ ಸಹಾಬಿಗಳು ಬೇರೆಯವರಿಗೆ ಬೈಅತ್ ಮಾಡಬಯಸಿದ್ದರೂ ಸಾಧ್ಯವಿರಲಿಲ್ಲ. ಆದ್ದರಿಂದ, ಅವರೂ ಅಲೀಯವರಿಗೆ(ರ) ಬೈಅತ್ ಮಾಡಿದರು. ಮದೀನಾದಲ್ಲಿದ್ದ ಅನೇಕ ಮುಹಾಜಿರರೂ ಅನ್ಸಾರಿಗಳೂ ಅನಂತರ ಬೈಅತ್ ಮಾಡಿದರು. ತರುವಾಯ ಜನಸಾಮಾನ್ಯರೂ ಬೈಅತ್ ಮಾಡಿದರು. ಆದರೆ ಈ ಬೈಅತ್ ಸರ್ವಾನುಮತದ್ದಾಗಿರಲಿಲ್ಲ. ಸಅದ್ ಬಿನ್ ಅಬೀ ವಕ್ಕಾಸ್, ಇಬ್ನ್ ಉಮರ್‌ರಂತಹ(ರ) ಸಹಾಬಿಗಳ ಜತೆ ಅಬೂ ಸಈದ್ ಖುದ್ರಿ, ಹಸ್ಸಾನ್ ಬಿನ್ ಸಾಬಿತ್ ಮುಂತಾದ ಕೆಲವು ಸಹಾಬಿಗಳು ಬೈಅತ್ ಮಾಡಲು ಹಿಂಜರಿದರು. ಅಂತೆಯೇ ಬನೂ ಉಮಯ್ಯಾ(ಉಸ್ಮಾನ್‌ರ(ರ) ಕುಟುಂಬ) ಸಂಪೂರ್ಣವಾಗಿ ಈ ಬೈಅತ್‌ನಿಂದ ದೂರವುಳಿಯಿತು. ಹೀಗೆ ಕೆಲವರ ಅಸಮ್ಮತಿಯಿದ್ದರೂ ಬಹುಮತದಿಂದ ಹಿಜರಿ 35ರ ದುಲ್‌ಹಜ್ಜ್ 15 ಶುಕ್ರವಾರ ದಿನ ಅಲೀ(ರ) ನಾಲ್ಕನೆಯ ಖಲೀಫರಾಗಿ ಆಯ್ಕೆಯಾದರು.

ಜಮಲ್ ಯುದ್ಧ

ಇದು ಮುಸ್ಲಿಮರ ನಡುವೆ ಪ್ರಥಮವಾಗಿ ನಡೆದ ದುರಂತ ಯುದ್ಧ. ಕೆಲವು ತಪ್ಪು ತಿಳುವಳಿಕೆಗಳೇ ಈ ಯುದ್ಧಕ್ಕೆ ಕಾರಣವಾಯಿತು. ಅಲೀಯವರ(ರ) ವಿರುದ್ಧ ನಡೆದ ಈ ಯುದ್ಧದಲ್ಲಿ ಆಯಿಶಾ(ರ) ಮುಂಚೂಣಿಯಲ್ಲಿದ್ದರು. ಅವರು ಒಂದು ಒಂಟೆಯ ಪಲ್ಲಕ್ಕಿಯಲ್ಲಿ ಕುಳಿತು ಈ ಯುದ್ಧವನ್ನು ಮುನ್ನಡೆಸಿದ್ದರು. ಆದ್ದರಿಂದ ಅದಕ್ಕೆ ಜಮಲ್ ಯುದ್ಧವೆಂಬ ಹೆಸರು ಬಂತು. ಈ ಯುದ್ಧದಲ್ಲಿ ಅಲೀಯವರ(ರ) ಪಕ್ಷವು ಜಯಗಳಿಸಿತು. ಆದರೆ ಈ ವಿಜಯದ ಬಳಿಕ ಅಲೀಯವರು(ರ) ಆಯಿಶಾರೊಂದಿಗೆ(ರ) ಗೌರವದಿಂದಲೇ ವರ್ತಿಸಿದರು. ಅವರನ್ನು ಗೌರವದಿಂದ ಸಹೋದರ ಮುಹಮ್ಮದ್ ಬಿನ್ ಅಬೀಬಕರ್‌ರ(ರ) ಸಂಗಡ ಮಕ್ಕಾಕ್ಕೆ ಮರಳಿಸಿದರು. ಈ ವಿಷಾದನೀಯ ಘಟನೆಯು ಹಿಜರಿ 35ರಲ್ಲಿ ಸಂಭವಿಸಿತ್ತು.

ಸಿಫ್ಫೀನ್ ಯುದ್ಧ

ಜಮಲ್ ಯುದ್ಧ ನಡೆಯುತ್ತಿದ್ದಾಗ ಅಲೀಯವರ(ರ) ವಿರುದ್ಧವಾಗಿ ಮುಆವಿಯಾ ಸೇನೆಯನ್ನು ಸಜ್ಜೀಕರಿಸುತ್ತಿದ್ದರು. ಉಸ್ಮಾನ್‌ರ(ರ) ರಕ್ತ ಸಿಕ್ತ ಬಟ್ಟೆಗಳನ್ನು ಮಿಂಬರ್‌ನಲ್ಲಿ ಪ್ರದರ್ಶಿಸಿ ಜನರನ್ನು ಅಲೀಯವರ(ರ) ವಿರುದ್ಧ ಕೆರಳಿಸಿದರು. ಅಲೀ(ರ) ಗಲಭೆಕೋರರಿಗೆ ನೆರವಾಗಿರುವರೆಂದು ಅವರು ಪ್ರಚಾರ ಮಾಡಿದ್ದರು. ಉಮರ್‌ರ(ರ) ಕಾಲದಲ್ಲಿಯೇ ಸಿರಿಯಾದ ರಾಜ್ಯಪಾಲರಾಗಿದ್ದ ಮುಆವಿಯರಿಗೆ ಉಸ್ಮಾನ್‌ರ(ರ) ಆಡಳಿತ ಕಾಲದಲ್ಲಿ ಇತರ ಕೆಲವು ಪ್ರದೇಶಗಳ ಅಧಿಕಾರವನ್ನೂ ನೀಡಲಾಗಿತ್ತು. ಆ ಪ್ರದೇಶಗಳಲ್ಲಿ ಉಸ್ಮಾನ್‌ರ(ರ) ಕಾಲದಲ್ಲಿ ರಾಜ್ಯಪಾಲನ ಬದಲಾಗಿ ಓರ್ವ ಸರ್ವಾಧಿಕಾರಿ ಆಡಳಿತಗಾರನಂತೆ ಅವರು ವರ್ತಿಸುತ್ತಿದ್ದರು. ಸಿರಿಯನರ ಶಕ್ತಿ ದೌರ್ಬಲ್ಯಗಳನ್ನು ಅವರು ಚೆನ್ನಾಗಿ ಮನಗಂಡಿದ್ದರು. ಆದ್ದರಿಂದ ಅಲೀಯವರ(ರ) ವಿರುದ್ಧ ಒಂದು ಸಮರ್ಥ ಸೇನೆಯನ್ನು ಸಜ್ಜುಗೊಳಿಸಲು ಅವರಿಗೆ ಕಷ್ಟವಾಗಲಿಲ್ಲ.

ಆದರೆ ಅಲೀಯವರ(ರ) ಸ್ಥಿತಿ ಭಿನ್ನವಾಗಿತ್ತು. ಒಂದನೆಯದಾಗಿ ಸೇನೆಯಲ್ಲಿಯೇ ಸಾಕಷ್ಟು ಹೊಂದಾಣಿಕೆಯಿರಲಿಲ್ಲ. ಸಬಈಗಳು ಸೇರಿ ವಿವಿಧ ಮನೋಭಾವದ ಜನರು ಅದರಲ್ಲಿದ್ದರು. ಎರಡನೆಯದಾಗಿ, ಅವರು ಖಲೀಫರಿಗೆ ಸಂಪೂರ್ಣ ವಿಧೇಯರಾಗಿರಲಿಲ್ಲ. ಒಟ್ಟಿನಲ್ಲಿ, ಅಲೀಯವರಿಗೆ(ರ) ಅವರ ಮೇಲೆ ಪೂರ್ಣ ನಿಯಂತ್ರಣವಿರಲಿಲ್ಲ. ಅದಲ್ಲದೇ ಜಮಲ್ ಯುದ್ಧದಲ್ಲಿ ಅವರ ಅನೇಕ ಸಮರ್ಥ ಅನುಯಾಯಿಗಳು ಹತರಾಗಿದ್ದರು. ಹಾಗಿದ್ದರೂ ಖಲೀಫರಾಗಿರುವುದರಿಂದ ಈ ಘೋರ ರಾಷ್ಟ್ರದ್ರೋಹವನ್ನು ದಮನಿಸದೆ ನಿರ್ವಾಹವಿರಲಿಲ್ಲ. ಆದರೂ ಮುಸ್ಲಿಮ್ ರಕ್ತದ ಪಾವಿತ್ರ್ಯವನ್ನು ಗಮನದಲ್ಲಿರಿಸಿ ಸಿರಿಯನರು ಮತ್ತು ಮುಆವಿಯರನ್ನು ಸಂಧಾನಕ್ಕೆ ಆಹ್ವಾನಿಸಿ ಅವರು ಪತ್ರ ಬರೆದರು. ಆದರೇನು? ಆ ಪತ್ರಗಳಿಗೆ ಅದರ ಶಾಯಿಯ ಬೆಲೆಯೂ ದೊರೆಯಲಿಲ್ಲ. ಕೊನೆಗೆ ಅಲೀ(ರ) ಯುದ್ಧಕ್ಕೆ ಹೊರಟರು.

ಯೂಪ್ರೆಟೀಸ್‌ನ ಕೆಳಭಾಗದ 'ಸಿಫ್ಫೀನ್' ಎಂಬ ಸ್ಥಳದಲ್ಲಿ ಹಿಜರಿ 37ರಲ್ಲಿ ಉಭಯ ಸೇನೆಗಳೂ ಸಂಘರ್ಷಿಸಿದುವು. ಹತ್ತು ದಿನ ಯುದ್ಧ ನಡೆಯಿತು. ಕೊನೆಗೆ ಅಲೀಯವರು(ರ) ವಿಜಯದ ಅಂಚಿಗೆ ತಲಪಿದರು. ತನ್ನ ಸೇನೆಯು ನೆಲಕಚ್ಚುವುದೆಂದು ಮುಆವಿಯಾರಿಗೆ

ಖಚಿತವಾಯಿತು. ಆ ಕೂಡಲೇ ದಂಡನಾಯಕ ಅಮ್ರ್ ಬಿನ್ ಆಸ್‌ರನ್ನು ಕರೆಸಿ ಸಮಾಲೋಚನೆ ನಡೆಸಿದರು. ಸೋಲು ತಪ್ಪಿಸಲಿಕ್ಕಾಗಿ ಅಮ್ರ್ ಹೊಸ ಉಪಾಯ ಹೂಡಿದರು. ಅವರ ಆದೇಶದನ್ವಯ ಮುಆವಿಯಾರ ಸೇನೆಯು ಬಾಣದ ತುದಿಯಲ್ಲಿ ಕುರ್‌ಆನ್ ಗ್ರಂಥಗಳನ್ನಿರಿಸಿ ಎತ್ತಿ ಹಿಡಿದು ಹೀಗೆ ಸಾರಿದರು: "ಜನರೇ! ಇದೋ ಅಲ್ಲಾಹನ ಗ್ರಂಥ! ಇದು ನಮ್ಮ ಮಧ್ಯೆ ತೀರ್ಪು ನೀಡಲಿ."

ಅಲೀಯವರಿಗೆ(ರ) ಈ ಕುತಂತ್ರ ಕೂಡಲೇ ಮನವರಿಕೆಯಾಯಿತು. ಕುರ್‌ಆನ್ ಈಗ ತಾನೇ ಅವತೀರ್ಣಗೊಂಡುದಲ್ಲ. ಕುರ್‌ಆನಿನ ವಿಧಿಯ ಬಗ್ಗೆ ಅವರಿಗೆ ಗೌರವವಿರುತ್ತಿದ್ದರೆ, ಅಲೀಯವರು(ರ) ಪತ್ರ ಮೂಲಕ ಉಪದೇಶ ನೀಡಿದಾಗಲೇ ಅವರು ಅಂಗೀಕರಿಸಬೇಕಾಗಿತ್ತು. ಹಿಂದೆ ಅಬೂಬಕರ್(ರ) ಮತ್ತು ಉಮರ್‌ರನ್ನು(ರ) ಚುನಾಯಿಸಿದ್ದ ಮುಹಾಜಿರ್ ಮತ್ತು ಅನ್ಸಾರ್‌ಗಳೇ ಅಲೀಯವರನ್ನೂ(ರ) ಖಲೀಫರಾಗಿ ಚುನಾಯಿಸಿದ್ದರು. ಈ ವಿಷಯವನ್ನೂ ಸ್ಪಷ್ಟಪಡಿಸಿ ಅಲೀಯವರು(ರ) ಬರೆದ ಪತ್ರಕ್ಕೆ ಮುಆವಿಯಾ ಸಭ್ಯ ಉತ್ತರವನ್ನೂ ನೀಡಿರಲಿಲ್ಲ. ಸಮಸ್ಯೆಯ ಸೌಹಾರ್ದ ಪರಿಹಾರಕ್ಕಾಗಿ ಕುರ್‌ಆನಿನ ಆಧಾರದಲ್ಲಿ ಸಮಾಲೋಚನೆಯನ್ನಾದರೂ ನಡೆಸಬಹುದಾಗಿತ್ತು. ಅದನ್ನೂ ಮಾಡಲಿಲ್ಲ. ಬದಲಾಗಿ, ಬಹುಮತದಿಂದ ಚುನಾಯಿಸಿದ ಖಲೀಫರನ್ನು ಧಿಕ್ಕರಿಸಿ ಸಿರಿಯನರನ್ನು ಕೆರಳಿಸಿದರು. ಹೀಗಿರುತ್ತಾ, ಸೋಲು ಖಚಿತವಾದಾಗ ಕುರ್‌ಆನಿಗೆ ಮರಳುವ ಈ ಸೂಚನೆ ಕಪಟವೆಂಬುದು ವ್ಯಕ್ತ. ಇದನ್ನು ಮನಗಂಡ ಅಲೀಯವರು(ರ) ಯುದ್ಧ ಮುಂದುವರಿಸಿ ವಿಜಯ ಪೂರ್ಣಗೊಳಿಸುವಂತೆ ಅನುಯಾಯಿಗಳಿಗೆ ಆದೇಶಿಸಿದರು. ಆದರೆ, ಸೇನೆಯ ಒಂದು ವಿಭಾಗವು ಅದಕ್ಕೆ ಒಪ್ಪಲಿಲ್ಲ. "ಅವರು ಅಲ್ಲಾಹನ ಗ್ರಂಥದತ್ತ ಆಹ್ವಾನಿಸುತ್ತಿರುವಾಗ ನಾವು ಅದನ್ನು ತಿರಸ್ಕರಿಸುವುದೇಕೆ?" ಎಂದು ವಾದಿಸಿದರು. 'ಕಿಂದ್' ಗೋತ್ರದ ಓರ್ವ ಮುಖಂಡ ಅಶ್‌ಅಸ್ ಬಿನ್ ಖೈಸ್ ಮತ್ತು ಅನುಯಾಯಿಗಳು ಆ ವಿಭಾಗದ ಮುಂಚೂಣಿಯಲ್ಲಿದ್ದರು. ನಮ್ಮ ಅಭಿಪ್ರಾಯವನ್ನು ಪುರಸ್ಕರಿಸಿ ಸೇನಾನಾಯಕ ಅಶ್ತರುನ್ನಖಈಯವರನ್ನು ಯುದ್ಧರಂಗದಿಂದ ವಾಪಾಸು ಕರೆಸದಿದ್ದರೆ ಉಸ್ಮಾನ್‌ರಂತೆ(ರ) ಅಲೀಯವರನ್ನೂ(ರ) ವಧಿಸುವುದಾಗಿ ಅವರು ಬೆದರಿಸಿದರು. ಈ ಬೆದರಿಕೆಗೆ ಹೆದರದಿದ್ದರೂ ಮುಸ್ಲಿಮರ ರಕ್ತದ ಪಾವಿತ್ರ್ಯವನ್ನು ಗಮನಿಸಿ ಕೊನೆಗೆ ಅದಕ್ಕೆ ಒಪ್ಪಿದರು.

ಮಧ್ಯಸ್ಥಿಕೆ

ಯುದ್ಧ ನಿಲ್ಲಿಸಿದ ಬಳಿಕ ವಿವಾದದ ನ್ಯಾಯೋಚಿತ ಪರಿಹಾರಕ್ಕಾಗಿ ಈರ್ವರು ಮಧ್ಯಸ್ಥಿಕೆದಾರರನ್ನು ನಿಶ್ಚಯಿಸಲಾಯಿತು. ಮುಆವಿಯಾರ ಕಡೆಯಿಂದ ತಂತ್ರಗಾರ ಅಮ್ರ್ ಬಿನ್ ಆಸ್‌ರನ್ನು ಮಧ್ಯಸ್ಥಿಕೆಗಾರನಾಗಿ ನೇಮಿಸಲಾಯಿತು. ಆದರೆ ಅಲೀಯವರ(ರ) ಪಕ್ಷದಲ್ಲಿ ಈ ಬಗ್ಗೆಯೂ ಒಮ್ಮತವಿರಲಿಲ್ಲ. ಸೇನಾಧಿಪತಿ ಅಶ್ತರುನ್ನಖಈಯವರನ್ನು ಸಂಧಾನಕಾರರಾಗಿ ಕಳುಹಿಸಬೇಕೆಂದು ಅಲೀಯವರ(ರ) ಅಭಿಪ್ರಾಯವಾಗಿತ್ತು. ಆದರೆ ಈ ಹಿಂದೆ ಹೇಳಿದ ಅಶ್‌ಅಸ್ ಅದನ್ನು ಅಂಗೀಕರಿಸಲಿಲ್ಲ. ಅವರು ಅಬೂ ಮೂಸಾ ಅಲ್ ಅಶ್‌ಅರಿ ಸಂಧಾನಕಾರರಾಗಬೇಕೆಂದು ಒತ್ತಾಯಿಸಿದರು. ಅಬೂಮೂಸಾ(ರ) ಭಕ್ತ ಮತ್ತು ಶುದ್ಧ ಮನಸ್ಕ

ಹಾಗೂ ಪ್ರವಾದಿಯವರ(ಸ) ಸಹಾಬಿಗಳಾಗಿದ್ದರೆಂಬುದರಲ್ಲಿ ಸಂದೇಹವಿಲ್ಲ. ಆದರೆ ರಾಜಕೀಯ ತಂತ್ರವೇ ಭಿನ್ನವಲ್ಲವೇ. ತಂತ್ರವನ್ನು ತಂತ್ರದಿಂದಲೇ ಸೋಲಿಸಬೇಕಾಗುತ್ತದೆ. ಈ ಕಾರಣದಿಂದ ಅಲೀಯವರಿಗೆ(ರ) ಅಬೂ ಮೂಸಾ ಸಮರ್ಥರೆನಿಸಲಿಲ್ಲ. ಹಾಗಿದ್ದರೂ ಸೇನೆಯ ಬಹುಮತಕ್ಕೆ ಮಣಿದು ಅಬೂಮೂಸಾರನ್ನೇ(ರ) ಸಂಧಾನಕಾರರಾಗಿ ನಿಶ್ಚಯಿಸಿದರು.

ಹೀಗೆ 'ದೂಮತುಲ್ ಜಂದಲ್' ಎಂಬ ಸ್ಥಳದಲ್ಲಿ ಉಭಯ ಸಂಧಾನಕಾರರೂ ಸುದೀರ್ಘ ಮಾತುಕತೆ ನಡೆಸಿದರು. ಕೊನೆಗೆ ಅಬೂಮೂಸಾರ ಸಲಹೆಯನ್ವಯ ಮುಸ್ಲಿಮರ ನಾಯಕ ಸ್ಥಾನದಿಂದ ಅಲೀ(ರ) ಮತ್ತು ಮುಆವಿಯಾರನ್ನು ವಜಾಗೊಳಿಸಿ ಖಿಲಾಫತ್‌ನ ವಿಷಯವನ್ನು ಮುಸ್ಲಿಮ್ ಬಹುಜನರಿಗೆ ಬಿಡುವುದೆಂದು ಘೋಷಿಸುವ ತೀರ್ಮಾನವಾಯಿತು. ಮೊದಲು ಅಬೂಮೂಸಾರು ತೀರ್ಮಾನವನ್ನು ಸಭೆಗೆ ಬಹಿರಂಗ ಪಡಿಸಿದರು. ಅನಂತರ ಅಮ್ರ್‌ರ ಸರದಿ. ಅವರು ಹೀಗೆಂದರು: "ಅಲೀಯವರನ್ನು(ರ) ವಜಾಗೊಳಿಸಿ ಅಬೂಮೂಸಾ ಮಾಡಿದ ಘೋಷಣೆಯನ್ನು ನಾನು ಅಂಗೀಕರಿಸುತ್ತೇನೆ. ಅವರ ಸ್ಥಾನದಲ್ಲಿ ನನ್ನ ಸಂಗಡಿಗ ಮುಆವಿಯಾರನ್ನು ನಾನು ಸ್ಥಿರಗೊಳಿಸಿದ್ದೇನೆ."

ಇದು ಮಹಾ ಮೋಸವಾಗಿತ್ತು. ಆದ್ದರಿಂದ ಈ ಮೋಸದ ವಿರುದ್ಧ ಕೂಡಲೇ ಮುಆವಿಯಾರೊಡನೆ ಯುದ್ಧ ಮಾಡುವಂತೆ ಅಲೀಯವರು(ರ) ಅನುಯಾಯಿಗಳಿಗೆ ಸೂಚಿಸಿದರು. ಆದರೆ ಅವರಲ್ಲಿ ಬಹುಮಂದಿ ಅದಕ್ಕೆ ಒಪ್ಪಲಿಲ್ಲ. ಮಾತ್ರವಲ್ಲ ಅವರಲ್ಲೊಂದು ವಿಭಾಗವು ಹೊಸ ವಾದಗಳನ್ನು ಮುಂದೊಡ್ಡಿ ಬೇರ್ಪಟ್ಟಿತು.

ಖವಾರಿಜ್

ಸಂಧಾನ ಪ್ರಯತ್ನವು ಅಲೀಯವರು(ರ) ಭಾವಿಸಿದ್ದಂತೆ ಒಂದು ಕುತಂತ್ರವಾಗಿದ್ದಿತ್ತೆಂದು ಅವರ ಅನುಯಾಯಿಗಳಿಗೆ ಮನವರಿಕೆಯಾಯಿತು. ಇದರಿಂದಾಗಿ ಅವರಲ್ಲಿ ಐಕ್ಯವುಂಟಾಗುವ ಬದಲಿಗೆ ಗಂಭೀರ ಒಡಕುಂಟಾಯಿತು. ಒಂದು ವಿಭಾಗವು ಸಂಧಾನಕ್ಕೆ ಒಪ್ಪಿದ್ದಕ್ಕಾಗಿ ಅಲೀಯವರ(ರ) ಬಗ್ಗೆ ಆಕ್ಷೇಪವೆತ್ತಿ ಹೊಸ ಪಕ್ಷವಾಗಿ ಮಾರ್ಪಟ್ಟಿತು. ಅಲೀ(ರ) ತಪ್ಪುಗಾರರೆಂಬ ವಾದಕ್ಕೆ ಅವರು ಹೊಸ ಆಧಾರಗಳನ್ನು ಕಂಡು ಹಿಡಿಯಲಾರಂಭಿಸಿದರು. ಕೊನೆಗೆ ಸಂಧಾನಕ್ಕೆ ಒಪ್ಪಿದ ಅಲೀ(ರ) ಕಾಫಿರರಾಗಿರುವರೆಂದೂ ಹೇಳಲು ಅವರು ಹಿಂಜರಿಯಲಿಲ್ಲ. إِنِ الْحُكْمُ إِلَّا لِلَّهِ "ಆಜ್ಞಾಪಿಸುವ ಹಕ್ಕು ದೇವನಿಗೆ ಮಾತ್ರ" ಎಂಬ ಕುರ್‌ಆನ್ ವಾಕ್ಯವನ್ನು ಅವರು ಆಧಾರವಾಗಿ ಉದ್ಧರಿಸಿದರು. ತೀರ್ಪು ನೀಡುವ ಅಧಿಕಾರ ಕೇವಲ ಅಲ್ಲಾಹನಿಗೆ ಮೀಸಲಾಗಿರುವಾಗ ಮಾನವರು ನೀಡುವ ತೀರ್ಪು ನ್ಯಾಯಬದ್ಧವಾಗುವುದು ಹೇಗೆ? ಆದ್ದರಿಂದ ಅಲೀಯವರು(ರ) ಮಾನವರಿಗೆ ತೀರ್ಪು ನೀಡುವ ಹಕ್ಕು ನೀಡಿ ಘೋರ ಅಪರಾಧ ಮಾಡಿದ್ದಾರೆ. ಘೋರ ಅಪರಾಧ ಮಾಡುವವರು ಕಾಫಿರರೆಂದು ಅವರು ವಾದಿಸಿದರು. ಆದರೆ ಆ ಪೈಕಿ ಅನೇಕ ಮಂದಿ ಆರಂಭದಲ್ಲಿ ಅಲೀಯವರು(ರ) ಸಂಧಾನಕ್ಕೆ ಸಿದ್ಧರಾಗುವಂತೆ ಒತ್ತಾಯಿಸಿದ್ದರೆಂಬುದು ಇನ್ನಷ್ಟು ಅಚ್ಚರಿದಾಯಕವಾಗಿದೆ. ಈ ವಿಷಯವನ್ನು ಅಲೀಯವರು(ರ) ಅವರಿಗೆ ನೆನಪಿಸಿದಾಗ ಅವರು ಹೀಗೆ ಉತ್ತರಿಸಿದರು: "ಅದು ನಮ್ಮ ತಪ್ಪು. ಅದಕ್ಕಾಗಿ

ಪಶ್ಚಾತ್ತಾಪ ಪಟ್ಟಿರುವುದರಿಂದ ನಾವು ಪುನಃ ಸತ್ಯವಿಶ್ವಾಸಿಗಳಾಗಿದ್ದೇವೆ. ನೀವು ತಪ್ಪಿನಲ್ಲಿಯೇ ಸ್ಥಿರವಾಗಿರುವುದರಿಂದ ನೀವು ಕಾಫಿರರಾಗಿದ್ದೀರಿ."

ವಸ್ತುತಃ ಸಂಧಾನಕ್ಕೆ ಒಪ್ಪಿರುವುದು ಕುರ್‌ಆನಿನ ಆಜ್ಞೆಗೆ ವಿರುದ್ಧವಾಗಲೀ ಅಪರಾಧವಾಗಲೀ ಆಗಿರಲಿಲ್ಲ. ಬದಲಾಗಿ, ಮುಸ್ಲಿಮರ ಎರಡು ತಂಡವು ಪರಸ್ಪರ ಜಗಳಾಡಿದರೆ ಅವರ ನಡುವೆ ಸಂಧಾನ ಮಾಡಿಸಬೇಕೆಂದು ಕುರ್‌ಆನ್ ಆಜ್ಞಾಪಿಸಿದೆ. ಸಂಧಾನಕ್ಕೆ ಒಪ್ಪದೆ ಒಂದು ವಿಭಾಗ ಅಕ್ರಮವೆಸಗಿದರೆ ಅವರೊಡನೆ ಯುದ್ಧ ಮಾಡಬೇಕೆಂದು ಕುರ್‌ಆನ್ ಆದೇಶಿಸಿದೆ. ಈ ಆಜ್ಞೆಯನ್ವಯ ಸಂಧಾನ ವಿಫಲವಾದಾಗ ಅಲೀ(ರ) ಯುದ್ಧಕ್ಕೆ ಹೊರಟಿದ್ದರು. ಅನಂತರ ಪುನಃ ಸಂಧಾನದ ಪ್ರಸ್ತಾಪ ಬಂದಾಗ ಅದು ಕುತಂತ್ರವೆಂದು ಮನಗಂಡಿದ್ದರೂ ಅಲೀಯವರು(ರ) ಅದಕ್ಕೆ ಒಪ್ಪಿದರು. ಅದು ಕೂಡಾ ಕುರ್‌ಆನಿನ ಆಜ್ಞೆಗೆ ಬದ್ಧವಾಗಿತ್ತು. ಅವರು ಉದ್ಧರಿಸಿದ ಕುರ್‌ಆನ್ ಸೂಕ್ತದ ಅರ್ಥ ತೀರಾ ಭಿನ್ನವಾಗಿತ್ತು. ಒಂದು ವಿಷಯವು ಹಲಾಲ್ ಆಗಿದೆಯೇ ಅಥವಾ ಹರಾಮ್ ಆಗಿದೆಯೇ ಎಂದು ಸ್ವತಂತ್ರವಾಗಿ ತೀರ್ಮಾನಿಸುವ ಹಕ್ಕನ್ನು ಅಲ್ಲಾಹನು ಮಾನವರಿಗೆ ನೀಡಿಲ್ಲ. ಇತರ ಕೆಲವು ಧರ್ಮಗಳಲ್ಲಿ ರೂಢಿಯಲ್ಲಿರುವಂತೆ ಆ ಹಕ್ಕನ್ನು ಪುರೋಹಿತರಿಗೂ ನೀಡಿಲ್ಲ. ಹಾಗೆಯೇ ಅಲ್ಲಾಹನು ಒಂದು ನಿಯಮವನ್ನು ವಿಧಿಸಿದ ಬಳಿಕ ಅದನ್ನು ಧಿಕ್ಕರಿಸಿ ಬೇರೊಂದು ನಿಯಮವನ್ನು ರಚಿಸುವ ಹಕ್ಕು ಜನರಿಗಿಲ್ಲ. ಬದಲಾಗಿ, ಅಲ್ಲಾಹನ ನಿಯಮವನ್ನು ಜಾರಿಗೊಳಿಸುವ ಅಧಿಕಾರ ಮಾತ್ರವಿರುವುದು. ಇದು "ತೀರ್ಪು ನೀಡುವ ಹಕ್ಕು ಕೇವಲ ಅಲ್ಲಾಹನಿಗೆ ಮಾತ್ರ" ಎಂಬ ಕುರ್‌ಆನ್ ಸೂಕ್ತದ ತಾತ್ಪರ್ಯವಾಗಿದೆ. ಅನ್ಯಥಾ ವಿವಾದಗಳ ಪರಿಹಾರಕ್ಕೆ ಸಂಧಾನದ ಮಾರ್ಗವನ್ನು ಸ್ವೀಕರಿಸಬಾರದು ಅಥವಾ ಅಲ್ಲಾಹನು ನೇರವಾಗಿ ಇಳಿದು ಬಂದು ಅಂತಹ ವಿಷಯಗಳ ಬಗ್ಗೆ ತೀರ್ಪು ನೀಡಬೇಕೆಂಬುದು ಅದರ ಇಂಗಿತವಲ್ಲ. ಆದ್ದರಿಂದಲೇ ಅವರ ಈ ವಾದದ ಕುರಿತು ಅಲೀ(ರ) ಹೀಗೆ ಹೇಳಿದ್ದರು: كلمة حق اريد به الباطل "ವಚನವು ಸತ್ಯ, ಆದರೆ ಅವರು ಅದರಿಂದ ಬಯಸಿದ್ದು ಅಸತ್ಯ."

'ಖವಾರಿಜ'ರು ಅಲೀಯವರಿಂದ(ರ) ದೂರವಾಗಿ ಹೊಸಪಕ್ಷವೊಂದನ್ನು ರಚಿಸಿದ್ದು ಮಾತ್ರವಲ್ಲ, ದೇಶದ ನಾನಾ ಭಾಗಗಳಲ್ಲಿ ಗಲಭೆ ಹುಟ್ಟಿಸಿದರು. ಜನರನ್ನು ಆಕ್ರಮಿಸಿ ಅವರ ನೆಮ್ಮದಿಗೆಡಿಸಿದರು. ಇರಾಕ್‌ನಲ್ಲಿ ಅವರ ಚಟುವಟಿಕೆ ತೀವ್ರವಾಗಿತ್ತು,. ಅಲೀಯವರು(ರ) ನಾನಾ ರೀತಿಯಿಂದ ಅವರನ್ನು ಸತ್ಯದ ಹಾದಿಗೆ ತರಲು ಪ್ರಯತ್ನಿಸಿದರು. ಆದರೂ ಅವರು ಮಣಿಯಲಿಲ್ಲ. ಕೊನೆಗೆ ಅವರ ನಿಗ್ರಹಕ್ಕೆ ಯುದ್ಧವೇ ದಾರಿಯೆಂದು ಖಚಿತವಾಯಿತು. ಅಲೀ(ರ) ಯುದ್ಧಕ್ಕೆ ಸಿದ್ಧರಾದರು. ಅದಕ್ಕಿಂತ ಮುಂಚೆ ಕೊನೆಯ ಪ್ರಯತ್ನವಾಗಿ ಅಲೀ(ರ) ಅವರೊಡನೆ ಹೀಗೆ ಹೇಳಿದರು: "ಯುದ್ಧಕ್ಕಿಂತ ಮುಂಚಿತವಾಗಿ ವಿವಾದದ ಬಗ್ಗೆ ಚರ್ಚಿಸಲಿಕ್ಕಾಗಿ ನಿಮಗೆ ಇಷ್ಟವಿರುವ ಯಾರಾದರೊಬ್ಬರನ್ನು ಆರಿಸಿರಿ. ಸಾಕ್ಷ್ಯಾಧಾರಗಳು ಆತನ ವಿರುದ್ಧವಾಗಿದ್ದರೆ ನೀವು ಪಶ್ಚಾತ್ತಾಪ ಪಟ್ಟು ಮರಳಬೇಕು. ಒಂದು ವೇಳೆ ಸಾಕ್ಷ್ಯಾಧಾರವು ನನ್ನ ವಿರುದ್ಧವಾದರೆ ನಾನು ಪಶ್ಚಾತ್ತಾಪ ಪಟ್ಟು ಮರಳುತ್ತೇನೆ. ಈ ಅಭಿಪ್ರಾಯದನ್ವಯ ಅವರು ತಮ್ಮ ನಾಯಕ ಅಬ್ದುಲ್ಲಾ ಬಿನ್ ಕವ್ವಾಯಿಯವರನ್ನು ಸಂವಾದಕ್ಕೆ ಕಳುಹಿಸಿದರು,. ಆದರೆ ಅಲೀಯವರ(ರ) ಪ್ರಶ್ನೆಗಳಿಗೆ ಉತ್ತರಿಸಲಾಗದೆ ಅವರು ಪರದಾಡಿದರು. ಇದನ್ನು ನೋಡಿದ ಅವರ ಅನುಯಾಯಿಗಳು

ಅಲೀಯವರೊಡನೆ(ರ) ಸಂವಾದ ಮುಂದುವರಿಸಲು ಬಿಡಲಿಲ್ಲ. ಅಲೀಯವರ(ರ) ವಾದವು ಸತ್ಯವೆಂದು ಅವರಿಗೆ ನಿಚ್ಚಳವಾಗಿತ್ತು. ಆದರೆ ಅವರ ಹಠ ಮತ್ತು ದುರಹಂಕಾರವು ಅದನ್ನು ಒಪ್ಪದಂತೆ ಮಾಡಿತು. ಅಲೀ(ರ) ಮತ್ತು ಅನುಯಾಯಿಗಳು ಕಾಫಿರರೆಂಬ ಹಳೆಯ ವಾದಕ್ಕೆ ಅವರು ಅಂಟಿಕೊಂಡರು. ಆದರೆ ಅಲೀಯವರು(ರ) ಅವರಿಗೆ ಮತ್ತೊಂದು ಅವಕಾಶ ನೀಡಿದರು. ತಮ್ಮ ಧ್ವಜವನ್ನು ಎತ್ತಿ ಹಿಡಿದು ಹೀಗೆ ಹೇಳಿದರು: "ಈ ಧ್ವಜದಡಿಯಲ್ಲಿ ನಿಲ್ಲುವವರಿಗೆ ಅಭಯ ನೀಡುತ್ತೇನೆ."

ಹೀಗೆ ಅವರು ಪಶ್ಚಾತ್ತಾಪಪಡುವ ಯಾವ ಸಾಧ್ಯತೆಯೂ ಉಳಿದಿಲ್ಲವೆಂದು ದೃಢಗೊಂಡ ಬಳಿಕ ಅಲೀಯವರಿಗೆ(ರ) ಯುದ್ಧ ಮಾಡದೆ ಗತ್ಯಂತರವಿರಲಿಲ್ಲ. ಆದರೂ ಸಹನಶೀಲರಾದ ಖಲೀಫರು ತಮ್ಮ ಅನುಯಾಯಿಗಳೊಡನೆ ಹೀಗೆಂದರು "ಅವರು ಯುದ್ಧ ಆರಂಭಿಸದೆ ನೀವು ಯುದ್ಧ ಮಾಡಬೇಡಿರಿ!"

ಖವಾರಿಜರು ಇದೆಲ್ಲವನ್ನೂ ಕಡೆಗಣಿಸಿ ಯುದ್ಧ ಆರಂಭಿಸಿದರು. ಈ ಧಿಕ್ಕಾರದ ಪರಿಣಾಮವಾಗಿ ಬಹುಮಂದಿ ಖವಾರಿಜರು ಆ ಯುದ್ಧದಲ್ಲಿಯೇ ಮಡಿದರು. ಯುದ್ಧದ ಬಳಿಕ ಅಲೀಯವರು(ರ) ಖವಾರಿಜರ ಸಂಪತ್ತನ್ನು ವಶಪಡಿಸಲಿಲ್ಲ. ಮಾತ್ರವಲ್ಲ, ಗಾಯಾಳುಗಳನ್ನು ಅವರ ಮನೆಗೆ ತಲುಪಿಸಿ ತಮ್ಮ ವಿಶಾಲ ಮನೋಭಾವವನ್ನು ಪ್ರದರ್ಶಿಸಿದರು. ಆದರೆ ಈ ಔದಾರ್ಯಕ್ಕೂ ಕೃತಜ್ಞತೆ ಸೂಚಿಸದಿರುವಷ್ಟರ ಮಟ್ಟಿಗೆ ಅವರ ಮನಸ್ಸು ಕಠೋರವಾಗಿದ್ದಿತೆಂದು ಅನಂತರದ ಘಟನಾವಳಿಗಳಿಂದ ವ್ಯಕ್ತವಾಯಿತು.

ಒಂದು ಯುಗದ ಅಂತ್ಯ

ಖಲೀಫ ಅಲೀಯವರು(ರ) ಜೀವನದಂತೆಯೇ ಆಡಳಿತ ರಂಗದಲ್ಲಿಯೂ ಸತ್ಯ ಮತ್ತು ನ್ಯಾಯನಿಷ್ಠೆಯನ್ನು ಪಾಲಿಸಿದ ಮಹಾಪುರುಷರಾಗಿದ್ದರು. ಇಸ್ಲಾಮಿ ಕಾನೂನನ್ನು ಜಾರಿಗೊಳಿಸುವಲ್ಲಿ ಅವರು ಯಾವ ದಾಕ್ಷಿಣ್ಯವನ್ನೂ ತೋರಿಸಲಿಲ್ಲ. ಆಕ್ರಮಿಗಳು ಅವರಿಂದ ಸಂಪೂರ್ಣ ನಿರಾಶರಾಗಿದ್ದರು. ಆದರೆ ಅದೇ ವೇಳೆ ಅವರು ಮರ್ದಿತರಿಗೆ ಬಹುದೊಡ್ಡ ಆಶಾಕೇಂದ್ರವಾಗಿದ್ದರು. ಖಲೀಫಾ ಉಮರ್‌ರಂತೆಯೇ ಬಹಳ ಸರಳ ಜೀವನವನ್ನು ಸಾಗಿಸಿದರು. ಸತ್ಯ ಮತ್ತು ನ್ಯಾಯದ ವಿಷಯದಲ್ಲಿ ಉಮರ್‌ರಂತೆಯೇ ನಿರ್ದಾಕ್ಷಿಣ್ಯ ಧೋರಣೆಯನ್ನು ಅವಲಂಬಿಸಿದರು. ಅವರು ಇಸ್ಲಾಮಿನ ಕರ್ಮಶಾಸ್ತ್ರ ವಿಷಯಗಳಲ್ಲಿ ಉಮರ್‌ರಷ್ಟು ಅಥವಾ ಅದಕ್ಕಿಂತ ಹೆಚ್ಚು ಪಾಂಡಿತ್ಯ ಹೊಂದಿದ್ದರು. ಅಬೂಬಕರ್ ಸಿದ್ದೀಕ್(ರ) ಮತ್ತು ಉಮರ್‌ರ(ರ) ಕಾಲದಲ್ಲಿ ಅವರ ಪ್ರಧಾನ ಸಲಹೆಗಾರರಾಗಿದ್ದರು. ಈ ಕಾರಣಗಳಿಂದಾಗಿ ಅಲೀಯವರ(ರ) ಆಡಳಿತ ಕಾಲವು ಉಮರ್‌ರ(ರ) ಆಡಳಿತದ ಉತ್ತರಾರ್ಧವಾಗಿದ್ದಿತೆಂದು ಕೆಲವು ಇತಿಹಾಸಜ್ಞರು ಹೇಳಿದ್ದಾರೆ.

ಆದರೆ ಉಮರ್‌ರ(ರ) ಕಾಲದಲ್ಲಿದ್ದ ಆಂತರಿಕ ಶಾಂತಿ ಅಲೀಯವರ(ರ) ಕಾಲದಲ್ಲಿರಲಿಲ್ಲ. ಆದ್ದರಿಂದಲೇ ಅವರ ಜತೆಗಿದ್ದ ಅನೇಕ ಸಹಾಬಿಗಳು ಕ್ರಮೇಣ ಅವರಿಂದ ದೂರವಾಗಿ, ಮುಆವಿಯಾರ ಅಧೀನವಿದ್ದ ಸಿರಿಯಾದಲ್ಲಿ ಹೋಗಿ ನೆಲೆಸಿದರು. ಇದಕ್ಕೆ ಅನೇಕ ಕಾರಣಗಳಿದ್ದುವು.

ನಿಷ್ಪಕ್ಷ ನ್ಯಾಯಪಾಲನೆಗಾಗಿ ಅಲೀ(ರ) ಅಂಗೀಕರಿಸಿದ ಕೆಲವು ಬಿಗಿ ನಿಯಮಗಳೂ ಅದಕ್ಕೆ ಪ್ರೇರಕವಾಗಿತ್ತು. ಖಲೀಫಾ ಉಮರ್‌ರ(ರ) ಹತ್ಯೆಯಲ್ಲಿ ಭಾಗಿಯಾದ ಹರ್ಮುಸಾನನ್ನು ಉಬೈದುಲ್ಲಾ ಬಿನ್ ಉಮರ್ ಕೊಂದಿದ್ದರಲ್ಲವೇ. ಆದರೆ ವಿಚಾರಣೆ ಅಥವಾ ನ್ಯಾಯಾಧೀಶರ ಅನುಮತಿಯಿಲ್ಲದೆ ಪೌರರೇ ಆ ರೀತಿ ನ್ಯಾಯ ಜಾರಿ ಗೊಳಿಸುವುದನ್ನು ಇಸ್ಲಾಮ್ ಸಮ್ಮತಿಸುವುದಿಲ್ಲ. ಆದ್ದರಿಂದ ಉಬೈದುಲ್ಲಾರ ಆ ಕ್ರಮವು ಅಪರಾಧವಾಗಿತ್ತು. ಹಾಗಿದ್ದರೂ, 12 ವರ್ಷಗಳ ಹಿಂದೆ ಅಂದಿನ ಖಲೀಫರಾಗಿದ್ದ ಉಸ್ಮಾನ್(ರ) ಆ ಕುರಿತು ತೀರ್ಪು ನೀಡಿರಲಿಲ್ಲ. ಅದು ನ್ಯಾಯಸಮ್ಮತವಲ್ಲವೆಂದು ಅರಿತ ಅಲೀಯವರು(ರ) ಈ ಪ್ರಕರಣದ ಮರು ವಿಚಾರಣೆ ನಡೆಸಲು ತೀರ್ಮಾನಿಸಿದರು. ಈ ಸುದ್ದಿ ತಿಳಿದ ಉಬೈದುಲ್ಲಾ ಸಿರಿಯಾಕ್ಕೆ ಓಡಿ ಹೋಗಿ ಮುಆವಿಯಾರ ಸೇನಾ ನಾಯಕರಲ್ಲೋರ್ವರಾದರು.

ಆಡಳಿತ ವಹಿಸಿದ ಕೂಡಲೇ ಅಲೀಯವರು(ರ) ಎರಡು ಮಹಾ ಯುದ್ಧಗಳನ್ನು ಎದುರಿಸಬೇಕಾಯಿತು. ಅನಂತರ ಖವಾರಿಜರ ದಂಗೆ ಆರಂಭವಾಯಿತು. ಆದರೆ ಮುಆವಿಯಾರ ಅಧೀನವಿದ್ದ ಸಿರಿಯಾದ ಸ್ಥಿತಿ ಹಾಗಿರಲಿಲ್ಲ. ವಿರೋಧಿಗಳನ್ನು ಔದಾರ್ಯದಿಂದ ಒಲಿಸುವ ತಂತ್ರದಿಂದಾಗಿ ಅಲ್ಲಿ ಸಾಮಾನ್ಯ ಶಾಂತಿ ನೆಲೆಸಿತ್ತು. ಆದ್ದರಿಂದ, ಸಅದ್ ಬಿನ್ ಅಬೀ ವಕಾಸ್, ಅಬ್ದುಲ್ಲಾ ಬಿನ್ ಉಮರ್ ಮುಂತಾದ ಕೆಲವು ಪ್ರಮುಖ ಸಹಾಬಿಗಳು ಶಾಂತಿ ಬಯಸಿ ಸಿರಿಯಾಕ್ಕೆ ವಲಸೆ ಹೋದರು.

ಅಲೀಯವರಿಗೆ(ರ) ತಮ್ಮ ರಾಜ್ಯಪಾಲರುಗಳ ಬಗ್ಗೆ ಸದಾ ಸಂದೇಹವಿತ್ತು. ಅವರು ನಿಷ್ಪಕ್ಷ ನ್ಯಾಯ ಪಾಲಿಸುವ ಬದಲಾಗಿ ಬೇರೆ ಪ್ರಲೋಭನೆಗಳಿಗೆ ಒಳಗಾಗುವರೇ ಎಂಬ ಸಂದೇಹ. ಈ ಸಂದೇಹ ಪ್ರಾಮಾಣಿಕ ಮತ್ತು ವಾಸ್ತವಿಕವಾಗಿತ್ತು. ಆದರೆ, ಸಂದೇಹಗಳೇ ತಪ್ಪು ತಿಳುವಳಿಕೆಗಳಿಗೂ ಕಾರಣವಾಗುತ್ತದಲ್ಲವೇ. ತಪ್ಪು ತಿಳುವಳಿಕೆಯಿಂದ ಅನೈಕ್ಯ, ಅಪ ನಂಬಿಕೆಗಳು ಬೆಳೆಯುತ್ತವೆ. ಇದರಿಂದಾಗಿಯೇ ಇಬ್ನು ಅಬ್ಬಾಸ್‌ರಂತಹ ಕೆಲವು ಪ್ರಮುಖ ಸಹಾಬಿಗಳೂ ತಮ್ಮ ರಾಜ್ಯಪಾಲ ಪದವಿಯನ್ನು ತೊರೆದು ಮಕ್ಕಾಕ್ಕೆ ಹೋಗಿ ನಿಶ್ಚಿಂತೆಯಿಂದ ಬಾಳಿದರು. ಇನ್ನೊಂದೆಡೆಯಲ್ಲಿ ಅಲೀಯವರ(ರ) ಈ ಸ್ವಭಾವದಿಂದ ಮುಆವಿಯಾ ಲಾಭಗಳಿಸಿದರು.

ಕೈಸ್ ಬಿನ್ ಸಅದ್‌ರನ್ನು ಅಲೀಯವರು(ರ) ಈಜಿಪ್ಟ್‌ನ ರಾಯಭಾರಿಯಾಗಿ ನೇಮಿಸಿದ್ದರು. ಅಲ್ಲಿದ್ದ ಮುಆವಿಯಾರ ಜನರೊಡನೆ ಜಾಣ್ಮೆಯಿಂದ ವರ್ತಿಸಿದ್ದರಿಂದ ಅವರ ಗಲಭೆಯ ಭೀತಿಯಿರಲಿಲ್ಲ. ಈ ಶಾಂತ ವಾತಾವರಣದಲ್ಲಿ ದಿಢೀರ್ ಗಲಭೆ ಹುಟ್ಟಿಸಲು ಮುಆವಿಯಾರಿಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಮುಆವಿಯಾ ಒಂದು ಸಂಚು ನಡೆಸಿದರು. ಕೈಸ್‌ರಿಗೆ ಮುಆವಿಯಾರ ಜತೆ ರಹಸ್ಯ ಸಂಬಂಧವಿದೆ, ಅವರು ಅಲೀಯವರ(ರ) ಬಗ್ಗೆ ಭಿನ್ನಮತ ಹೊಂದಿದ್ದಾರೆಂದು ಇರಾಕ್‌ನಲ್ಲಿ ವದಂತಿ ಹಬ್ಬಿಸಿದರು. ಕೈಸ್‌ರಿಗೆ ಮುಆವಿಯಾರ ಬೆಂಬಲಿಗರೊಡನೆ ಉತ್ತಮ ಸಂಬಂಧವಿದೆಯೆಂದು ತಿಳಿದ ಬಳಿಕ ಅಲೀಯವರು(ರ) ಆ ವದಂತಿಯನ್ನು ನಂಬಿದರು. ಈ ತಪ್ಪು ತಿಳುವಳಿಕೆಯಿಂದಾಗಿ ಕೈಸ್‌ರನ್ನು ವಜಾಗೊಳಿಸಿ ಮುಹಮ್ಮದ್ ಬಿನ್ ಅಬೀಬಕರ್‌ರನ್ನು ಈಜಿಪ್ಟಿನ ರಾಜಪಾಲರಾಗಿ ನೇಮಿಸಿದರು.

ಮುಹಮ್ಮದ್‌ರಿಗೆ ಕೈಸ್‌ರ ಚಾತುರ್ಯವಿರಲಿಲ್ಲ. ಅದಲ್ಲದೇ, ಅವರು ಉಸ್ಮಾನ್‌ರ(ರ) ವಿರುದ್ಧ ದಂಗೆಯೆದ್ದ ತಂಡದ ನಾಯಕರೂ ಆಗಿದ್ದರು. ಆದ್ದರಿಂದ ಕೆಲ ಸಮಯದಲ್ಲಿಯೇ ಮುಆವಿಯಾರ ಬೆಂಬಲಿಗರು ಮತ್ತು ಅವರ ನಡುವೆ ಸಂಘರ್ಷ ಸ್ಫೋಟಿಸಿತು. ಇದೊಂದು ಸದವಕಾಶವೆಂದು ತಿಳಿದು ಮುಆವಿಯಾರು ಅಮ್ರ್ ಬಿನ್ ಆಸ್‌ರ ನಾಯಕತ್ವದಲ್ಲಿ ಒಂದು ಸೇನೆಯನ್ನು ಅಲ್ಲಿಗೆ ಕಳುಹಿಸಿದರು. ದೇಶದೊಳಗಿನ ವೈರಿಗಳೂ ಆ ಸೇನೆಯ ಜತೆಗೂಡಿದಾಗ ಅಮ್ರ್ ಬಿನ್ ಆಸ್‌ರಿಗೆ ಜಯ ಸುಲಭವಾಯಿತು. ಅನಂತರ ನಡೆದ ಯುದ್ಧದಲ್ಲಿ ಮುಹಮ್ಮದ್ ಬಿನ್ ಅಬೀಬಕರ್ ವಧಿಸಲ್ಪಟ್ಟರು. ಇದರಿಂದ ಈಜಿಪ್ಟ್ ಪುನಃ ಮುಆವಿಯಾರ ವಶವಾಯಿತು.

ಅಲೀಯವರ(ರ) ಅಂತ್ಯ

ಅಲೀಯವರ(ರ) ಖಿಲಾಫತ್ತನ್ನು ಅಂಗೀಕರಿಸದ ಮುಆವಿಯಾ ಸ್ವಯಂ ಖಲೀಫರೆಂದು ಘೋಷಿಸಿ ಅಲೀಯವರ(ರ) ಅಧೀನವಿದ್ದ ಕೆಲವು ಪ್ರದೇಶಗಳನ್ನು ಸ್ವಾಧೀನಪಡಿಸಿದುದರಿಂದ ಇಸ್ಲಾಮೀ ರಾಷ್ಟ್ರವು ವಸ್ತುತಃ ಇಬ್ಭಾಗವಾಗಿತ್ತು. ಇದು ಇಸ್ಲಾಮೀ ರಾಷ್ಟ್ರದ ಕಾನೂನು ಮತ್ತು ಮುಸ್ಲಿಮರ ಒಗ್ಗಟ್ಟಿಗೂ ವಿರುದ್ಧವಾಗಿತ್ತು. ಆದ್ದರಿಂದ, ಅಲೀಯವರಿಗೆ(ರ) ಪುನಃ ಮುಆವಿಯಾರೊಡನೆ ಯುದ್ಧ ಮಾಡದೆ ನಿರ್ವಾಹವಿರಲಿಲ್ಲ. ಆದರೆ ಅಲೀಯವರು(ರ) ಈ ಬಗ್ಗೆ ಆಲೋಚಿಸುತ್ತಿರುವಾಗ ಇನ್ನೊಂದೆಡೆಯಲ್ಲಿ ಹೊಸ ಗೂಢಾಲೋಚನೆ ನಡೆಯುತ್ತಿತ್ತು. ಖವಾರಿಜರು ಆ ಸಂಚು ಹೂಡಿದ್ದರು. ಒಂದೇ ರಾತ್ರಿಯಲ್ಲಿ ಅವರು ಅಲೀ(ರ), ಮುಆವಿಯಾ ಮತ್ತು ಅಮ್ರ್ ಬಿನ್ ಆಸ್‌ರನ್ನು ವಧಿಸುವ ಯೋಜನೆ ರೂಪಿಸಿದ್ದರು. ಅಬ್ದುರ್ರಹ್ಮಾನ್ ಬಿನ್ ಮುಲ್ಜಿಮನನ್ನು ಕೂಫಾದಲ್ಲಿ ಅಲೀಯವರ(ರ) ಹತ್ಯೆಗಾಗಿ ನೇಮಿಸಲಾಗಿತ್ತು. ಸಿರಿಯಾದಲ್ಲಿ ಮುಆವಿಯಾ ಮತ್ತು ಈಜಿಪ್ಟ್‌ನಲ್ಲಿ ಅಮ್ರ್‌ರನ್ನು ವಧಿಸಲಿಕ್ಕಾಗಿ ಇನ್ನಿಬ್ಬರನ್ನು ನೇಮಿಸಿದ್ದರು.

ನಿರ್ದಿಷ್ಟ ದಿನ ಸೌಖ್ಯವಿಲ್ಲದೆ ಅಮ್ರ್ ಮಸೀದಿಗೆ ಹೋಗಲಿಲ್ಲ. ಅವರ ಬದಲಿಗೆ ಜನರಿಗೆ ನಮಾಝ್‌ನ ನೇತೃತ್ವ ವಹಿಸಲಿಕ್ಕಾಗಿ ಖಾರಿಜ್ ಬಿನ್ ಹಬೀಬ್ ಎಂಬವರನ್ನು ಕಳುಹಿಸಿದ್ದರು. ಇಬ್ನು ಹಬೀಬ್‌ರನ್ನು ಅಮ್ರ್ ಎಂದು ತಪ್ಪು ತಿಳಿದು ನೇಮಿತ ಹಂತಕನು ಕೊಂದು ಹಾಕಿದನು. ಅದೇ ರಾತ್ರಿ ಮುಆವಿಯಾರಿಗೆ ಇರಿತದಿಂದ ಗಾಯವಾದರೂ ಪ್ರಾಣಾಪಾಯದಿಂದ ಪಾರಾದರು. ಆದರೆ, ಇಬ್ನು ಮುಲ್ಜಿಮ್ ತನ್ನ ದುಷ್ಟ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಿದ. ಅಲೀಯವರು(ರ) ಪ್ರಭಾತ ನಮಾಝ್‌ಗೆ ಸಿದ್ಧರಾಗುತ್ತಿದ್ದಾಗ ಇಸ್ಲಾಮಿನ ಆ ವೈರಿಯು ಖಡ್ಗದಿಂದ ಅವರನ್ನು ತಿವಿದ. ಈ ಕೂಡಲೇ ಆ ನ್ಯಾಯಶಾಲಿ ಖಲೀಫರು ಇಹಲೋಕದಿಂದ ಹೊರಟು ಹೋದರು. ಜನರು ಇಬ್ನು ಮುಲ್ಜಿಮ್‌ನನ್ನು ಹಿಡಿದು ಬಂಧಿಸಿದರು. ತರುವಾಯ ಇಸ್ಲಾಮೀ ಕಾನೂನಿನನ್ವಯ ಆ ಪಾತಕಿಯನ್ನು ಹಸನ್ ಬಿನ್ ಅಲೀ(ರ) ವಧಿಸಿದರು.

ಇಲ್ಲಿಗೆ ಇಸ್ಲಾಮೀ ಇತಿಹಾಸದ ಒಂದು ಸ್ವರ್ಣ ಯುಗ ಕೊನೆಗೊಂಡಿತು. ಖುಲಫಾವುರ್ರಾಶಿದೀನ್(ಸಚ್ಚರಿತ ಖಲೀಫರು) ಎಂಬ ಹೆಸರಿನಿಂದ ಪ್ರಸಿದ್ಧರಾದ ನಾಲ್ವರು ಖಲೀಫರ ಉಜ್ವಲ ಯುಗ ಅಂತ್ಯವಾಯಿತು.

ಆದರ್ಶ ಪ್ರಾಯರಾದ ಖಲೀಫರು

ಅಲೀಯವರ(ರ) ಅಂತ್ಯದಿಂದ ಇಸ್ಲಾಮಿ ಇತಿಹಾಸದ ಹೊಸ ಯುಗ ಆರಂಭವಾಯಿತು. ಕುಟುಂಬ ಪಾರಂಪರ್ಯದ ಮುಸ್ಲಿಮ್ ರಾಜಾಡಳಿತದ ಯುಗ. ಉಸ್ಮಾನ್‌ರ(ರ) ಕೊನೆಗಾಲ ಮತ್ತು ಅಲೀಯವರ(ರ) ಕಾಲದಲ್ಲಿ ನಡೆದ ರಾಜಕೀಯ ಕಲಹಗಳು ಅದರ ಆರಂಭವಾಗಿತ್ತು. ಕೆಲವು ದುಷ್ಟ ಶಕ್ತಿಗಳು ಅದರ ಸೂತ್ರಧಾರರಾಗಿದ್ದರು. ದೌರ್ಭಾಗ್ಯವಶಾತ್, ಇಸ್ಲಾಮಿ ಖಿಲಾಫತ್‌ನ ಅಂತ್ಯವು ಅವರ ವಿಜಯವಾಗಿತ್ತು. ಆದ್ದರಿಂದ ಮುಸ್ಲಿಮ್ ಲೋಕಕ್ಕೆ ಆ ವಿಜಯವು ತುಂಬಲಾಗದ ನಷ್ಟವಾಗಿತ್ತು. ಜಗತ್ತಿನ ವಿವಿಧೆಡೆಗಳಲ್ಲಿ ಇಸ್ಲಾಮಿನ ಸಹಜ ಪ್ರಚಾರವು ಸ್ತಬ್ಧವಾಯಿತು.

ಪ್ರವಾದಿಯವರು(ಸ) ಇಸ್ಲಾಮಿ ರಾಷ್ಟ್ರದ ಪ್ರಥಮ ಆಡಳಿತಗಾರರಾಗಿದ್ದರಷ್ಟೆ. ಓರ್ವ ಇಸ್ಲಾಮಿ ಆಡಳಿತಗಾರನ ಜೀವನ ಹೇಗಿರಬೇಕೆಂಬುದನ್ನು ಅವರು ಸ್ವಜೀವನದಲ್ಲಿ ಮಾಡಿ ತೋರಿಸಿದರು. ಅದರ ಜತೆಗೆ ರಾಷ್ಟ್ರಾಡಳಿತದ ಮೂಲ ತತ್ವಗಳನ್ನು ಕಲಿಸಿದರು. ಅನಂತರ ಬಂದ ಖುಲಫಾವುರ್ರಾಶಿದೀನ್‌ಗಳು ಖಾಸಗಿ ಜೀವನ ಮತ್ತು ಆಡಳಿತದಲ್ಲಿ ಆ ಮಾದರಿಯನ್ನು ಅನುಕರಿಸಿದರು. ನಿಷ್ಕಳಂಕ ನ್ಯಾಯ, ಸತ್ಯನಿಷ್ಠೆ, ನಿಸ್ವಾರ್ಥತೆ, ರಾಷ್ಟ್ರದ ಸಂಪತ್ತಿನಂತೆಯೇ ಆಡಳಿತವೂ ನಮಗೆ ನೀಡಲಾದ ನ್ಯಾಸವೆಂಬ ಪ್ರಾಮಾಣಿಕತೆ, ಸಮಾಲೋಚನೆ, ಓರ್ವ ಸಾಮಾನ್ಯ ಪೌರನಂತಹ ಖಾಸಗಿ ಜೀವನ, ನಯ ವಿನಯ, ದೇವಭಕ್ತಿ ಇತ್ಯಾದಿ ಗುಣಗಳು ಆ ಕಾಲದ ಆಡಳಿತಗಾರರ ಹಾಗೂ ಪ್ರಜೆಗಳ ವೈಶಿಷ್ಟ್ಯವಾಗಿತ್ತು. ಇದರಿಂದಾಗಿ ಪ್ರವಾದಿಯವರ(ಸ) ಕಾಲದಂತೆಯೇ ಖುಲಫಾವುರ್ರಾಶಿದೀನ್‌ರ ಕಾಲದಲ್ಲಿಯೂ ಇಸ್ಲಾಮ್ ಕ್ಷಿಪ್ರಗತಿಯಿಂದ ವ್ಯಾಪಿಸಿತು. ಇದಕ್ಕೆ ಖಡ್ಗ ಅಥವಾ ಬಲಾತ್ಕಾರ ಪ್ರೇರಕವಾಗಿರಲಿಲ್ಲ. ಬದಲಾಗಿ ಇಸ್ಲಾಮಿ ಆದರ್ಶದ ಹಿರಿಮೆ, ಮುಸ್ಲಿಮರ-ವಿಶೇಷತಃ ಆಡಳಿತಗಾರರ-ಜೀವನ ಮಾದರಿಯು ಅವರನ್ನು ಇಸ್ಲಾಮಿಗೆ ಆಕರ್ಷಿಸಿತ್ತು. ಘನ ತತ್ವ ಸಿದ್ಧಾಂತಗಳನ್ನು ಜನರಿಗೆ ಬೋಧಿಸಲು ಹೆಚ್ಚಿನವರಿಗೆ ಸಾಧ್ಯವಿದೆ. ಆದರೆ ಅವುಗಳನ್ನು ಸ್ವಜೀವನದಲ್ಲಿ ಅಳವಡಿಸುವುದು ಸುಲಭವಲ್ಲ. ಅದಕ್ಕೆ ಮನೋಸ್ಥೈರ್ಯ, ದೃಢ ನಿರ್ಧಾರ ಮತ್ತು ತ್ಯಾಗ ಬಲಿದಾನಗಳ ಅಗತ್ಯವಿದೆ. ಅನ್ಯಥಾ ಶ್ರೋತೃಗಳು ಆ ಬೋಧನೆಗೆ ಯಾವ ಬೆಲೆಯನ್ನೂ ನೀಡಲಾರರು. ಆದರೆ, ಜನರಿಗೆ ನೀಡುವ ಬೋಧನೆಗಳನ್ನು ಸ್ವಜೀವನದಲ್ಲಿ ಮೈಗೂಡಿಸಿ ತೋರಿಸಿರುವುದೇ ಖುಲಫಾವುರ್ರಾಶಿದೀನ್‌ರ

ವೈಶಿಷ್ಟ್ಯವಾಗಿದೆ. ಆದ್ದರಿಂದ ಅವರ ಮಾತು ಸತ್ಯವೆಂದು ಜನರಿಗೆ ಮನವರಿಕೆಯಾಯಿತು. ಯಾರದೇ ಒತ್ತಾಯವಿಲ್ಲದೆ ಅವರು ಅದನ್ನು ಅಂಗೀಕರಿಸಿದರು.

ಇಂದು ಜಗತ್ತು ಬಹಳ ಮುಂದುವರಿದಿದೆಯೆಂದು ನಾವು ಹೇಳುತ್ತಿದ್ದೇವೆ. ಜೀವನಾನುಕೂಲತೆ ಮತ್ತು ವಿವಿಧ ಸಂಶೋಧನೆಗಳ ಮಟ್ಟಿಗೆ ಅದು ನಿಜ. ಆದರೆ ನೈತಿಕ ಸ್ಥಿತಿ ಹಾಗಿಲ್ಲ. ಸತ್ಯ, ನ್ಯಾಯ, ಸಮಾನತೆ ಇತ್ಯಾದಿ ಉನ್ನತ ಮಾನವೀಯ ಮೌಲ್ಯಗಳ ವಿಚಾರದಲ್ಲಿ ಮಾನವ ಇಂದಿಗೂ ಹಿಂದುಳಿದಿದ್ದಾನೆ. ಪ್ರೌಢರಿಗೆ ಮತದಾನ, ಪ್ರಜಾಪ್ರಭುತ್ವ ಇತ್ಯಾದಿ ಮಾನವರೆಲ್ಲರೂ ಸಮಾನರೆಂದು ವ್ಯಕ್ತಪಡಿಸುವ ಕೆಲವು ಆಡಳಿತ ಸುಧಾರಣೆಗಳಾಗಿವೆ ನಿಜ. ಆದರೆ, ಅದೇನಿದ್ದರೂ ಪ್ರವಾದಿವರ್ಯರ(ಸ) ಅಥವಾ ಖಿಲಫಾವುರ್ರಾಶಿದೀನ್‌ರ ಮಾದರಿಗೆ ತಲುಪಲು ಇನ್ನೂ ಬಹುದೂರ ಸಾಗಬೇಕಾಗಿದೆ.

ಉಸಾಮ ಬಿನ್ ಝೈದ್‌ರ ಬಗ್ಗೆ ನಿಮಗೆ ತಿಳಿದಿರಬಹುದು. ಪ್ರವಾದಿಯವರ(ಸ) ಸಾಕು ಪುತ್ರ ಝೈದ್‌ರ(ರ) ಪುತ್ರ. ಝೈದ್ ಹಿಂದೆ ಗುಲಾಮರಾಗಿದ್ದರು. ಪ್ರವಾದಿ(ಸ) ಅವರನ್ನು ಸ್ವತಂತ್ರಗೊಳಿಸಿದರು. ಮಗನಂತೆ ಬೆಳೆಸಿದರು. ಈ ಝೈದ್‌ರ ಕಿರಿಯ ಪುತ್ರ ಉಸಾಮರನ್ನು ಅಬೂಬಕರ್‌ರು(ರ) ಪ್ರಥಮ ಸೇನಾಧಿಪತಿಯಾಗಿ ನೇಮಿಸಿದ್ದರು. ಅನೇಕ ಸುಪ್ರಸಿದ್ಧ ಯೋಧರೂ ಮನೆತನದವರೂ ಸೇನೆಯಲ್ಲಿದ್ದರು. ಆದರೂ ಉಸಾಮರೇ ಸೇನಾನಾಯಕ. ಖಲೀಫಾ ಅಬೂಬಕರ್(ರ) ಸೇನಾನಾಯಕನಿಗೆ ಕೆಲವು ಸೂಚನೆಗಳನ್ನು ನೀಡಬೇಕಾಗಿದೆ. ಅವರು ಕಾಲ್ನಡಿಗೆಯಲ್ಲಿ ಕಿರಿಯರಾದ ಉಸಾಮರ ಬಳಿಗೆ ಹೋಗುತ್ತಾರೆ. ಉಸಾಮಾ ಸವಾರಿಯ ಮೇಲಿದ್ದಾರೆ. ಅವರಿಗೆ ಸಂಕೋಚವಾಯಿತು. ಖಲೀಫ ಕೆಳಗೆ ನಿಂತಿರುವಾಗ ತಾನು ಮೇಲೆ ಕುಳಿತಿರುವುದು ಸರಿಯೆ? ಕೂಡಲೇ ಕೆಳಗಿಳಿಯಲು ಶ್ರಮಿಸುತ್ತಾರೆ. ಆದರೆ, ಖಲೀಫಾ ಆಣೆ ಹಾಕಿ ಹೇಳಿದರು: "ನೀನು ಇಳಿಯಬಾರದು. ನಾನು ವಾಹನದ ಮೇಲೇರುವುದಿಲ್ಲ. ಅಲ್ಲಾಹನ ಮಾರ್ಗದಲ್ಲಿ ಸ್ವಲ್ಪ ಧೂಳಾದರೂ ನನ್ನ ಕಾಲಿಗೆ ತಾಗಲಿ." ಹೀಗೆ ಸವಾರಿಯಲ್ಲಿ ಕುಳಿತಿದ್ದ ಉಸಾಮರಿಗೆ ಖಲೀಫರು ನಡೆಯುತ್ತಾ ಸೂಚನೆಗಳನ್ನು ನೀಡುತ್ತಾರೆ! ನೋಡಿದಿರಾ, ಖಲೀಫರ ವಿನಯವಂತಿಕೆ. ಈ ವಿನಯವೇ ಘನತೆಯಾಗಿದೆ. ಈ ಮಹಾನ್ ಆದರ್ಶ ಜನರಿಗೆ ಕಾಣಿಸುತ್ತದೆ! ಅದು ಜನರ ಮನ ಸೆಳೆಯದಿದ್ದೀತೆ?

ಖಲೀಫಾ ಉಮರ್‌ರ(ರ) ಕಾಲದಲ್ಲಿ ಇಸ್ಲಾಮೀ ರಾಷ್ಟ್ರದ ಗಡಿಗಳು ಬಹಳ ವಿಶಾಲವಾಗಿದ್ದುವು. ರೋಮ್, ಪರ್ಶಿಯನ್ ಸಾಮ್ರಾಜ್ಯಗಳೂ ಮುಸ್ಲಿಮರ ಅಧೀನವಾಗಿದ್ದುವು. ಆವರೇನು? ಖಲೀಫಾರಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಅವರು ದಾರಿಬದಿಯ ಮರದ ಬುಡದಲ್ಲಿ ನಿರ್ಭಯತೆಯಿಂದ ಮಲಗಿ ನಿದ್ರಿಸಿದರು. ತುಪ್ಪ ಮಾಂಸವಿಲ್ಲದ ಒಣ ಆಹಾರಗಳನ್ನು ಸೇವಿಸಿದರು. ಓರ್ವ ಸಾಮಾನ್ಯ ಪೌರನಂತೆ ಸರಳ ಜೀವನ ಸಾಗಿಸಿದರು. ಜನರ ಕ್ಷೇಮ ಸಮಾಚಾರ ತಿಳಿಯಲಿಕ್ಕಾಗಿ ನಡುರಾತ್ರಿಯಲ್ಲಿ ನಗರದಲ್ಲಿ ಸಂಚರಿಸಿದರು. ಜನರ ಹೊಣೆ ನಿರ್ವಹಣೆಯಲ್ಲಿ ಯಾವ ಲೋಪವನ್ನೂ ಮಾಡಲಿಲ್ಲ. ಒಮ್ಮೆ ಬೈತುಲ್ ಮಾಲ್‌ಗೆ ಸೇರಿದ ಒಂದು ಒಂಟೆಯು ಗುಂಪಿನಿಂದ ತಪ್ಪಿಸಿಕೊಂಡಿತು. ಉಮರ್(ರ) ಅದನ್ನು ಹುಡುಕುತ್ತಾ ಹೊರಟರು. ಆಗ ಅಲೀಯವರು(ರ) ಕೇಳಿದರು: "ಅಮೀರುಲ್ ಮುಅ್‌ಮಿನೀನ್, ಅದಕ್ಕಾಗಿ

ಯಾವನಾದರೂ ಸೇವಕನನ್ನು ಕಳುಹಿಸಿದರೆ ಸಾಲದೆ?" ಉಮರ್‌ರ(ರ) ಉತ್ತರ ಹೀಗಿತ್ತು: "ಇದು ಜನರ ಸಂಪತ್ತು. ಅದರಿಂದ ಒಂದು ಹಗ್ಗ ಕಳೆದು ಹೋದರೂ ನಾಳೆ ಅಲ್ಲಾಹನ ಮುಂದೆ ಉಮರ್ ಉತ್ತರಿಸುವುದು ಹೇಗೆ?"

ಆ ಸೂಕ್ಷ್ಮತೆ ಮತ್ತು ಭಕ್ತಿಯು ಅವರ ಜೀವನದಲ್ಲಿ ಪ್ರಕಟವಾಗಿತ್ತು. ಅವರು ಜನರ ಆಡಳಿತಗಾರರಾಗಿದ್ದರು. ಜನರ ಧಾರ್ಮಿಕ ನಾಯಕರಾಗಿದ್ದರು. ಅವರನ್ನು ಜನರು ಮೆಚ್ಚದಿರಲಾದೀತೇ?

ಇಸ್ಲಾಮಿನ ವೈರಿಗಳ ಪಿತೂರಿಯಿಂದ ಈಜಿಪ್ಟ್ ಮತ್ತು ಸಿರಿಯಾಗಳಿಂದ ಬಂದ ಗಲಭೆಕೋರರು ಖಲೀಫಾ ಉಸ್ಮಾನ್‌ರ(ರ) ಭವನವನ್ನು ಸುತ್ತುವರಿದರು. ಖಲೀಫರು ನಿರ್ಭೀತಿಯಿಂದ ಅವರೊಡನೆ ಹೀಗೆ ಹೇಳಿದರು: "ಅಲ್ಲಾಹನ ಗ್ರಂಥದ ಪ್ರಕಾರ ನೀವು ನನ್ನ ವಿಚಾರಣೆ ನಡೆಸಬಹುದು. ಅಲ್ಲಾಹನ ಗ್ರಂಥದಲ್ಲಿ ನನ್ನ ಕೈಕಾಲುಗಳನ್ನು ಬಂಧಿಸಬೇಕೆಂದು ನಿಮಗೆ ಮನವರಿಕೆಯಾಗಿದ್ದರೆ ಹಾಗೆ ಮಾಡಿರಿ" ಸಂಪೂರ್ಣ ಸತ್ಯನಿಷ್ಠೆಯಿಂದ ವ್ಯವಹರಿಸುವೆನೆಂಬ ದೃಢವಿಶ್ವಾಸವಿಲ್ಲದವರಿಗೆ ಆ ರೀತಿ ಸಾರಲು ಸಾಧ್ಯವಿದೆಯೇ? ಮದೀನಾದ ಮುಹಾಜಿರರೂ ಅನ್ಸಾರರೂ ಇದನ್ನು ಚೆನ್ನಾಗಿ ಅರಿತಿದ್ದರು. ಆದ್ದರಿಂದ ಝೈದ್ ಬಿನ್ ಸಾಬಿತ್‌ರು ಆ ಗಲಭೆಕೋರರ ವಿರುದ್ಧ ಯುದ್ಧದ ಅನುಮತಿ ಕೇಳಿದರು. ಆದರೆ, ಖಲೀಫಾ ಉಸ್ಮಾನ್(ರ) ಹೀಗೆ ಉತ್ತರಿಸಿದರು: "ಯುದ್ಧವೇ?!.. ಅದು ಕೂಡದು. ನನಗಾಗಿ ನೀವು ಪರಸ್ಪರ ರಕ್ತ ಹರಿಸಬಾರದೆಂದು ಅಲ್ಲಾಹನ ಹೆಸರಲ್ಲಿ ನಾನು ವಿನಂತಿಸುತ್ತೇನೆ." ಅದು ದೇವಭಕ್ತ ಮತ್ತು ನಿಸ್ವಾರ್ಥಿಯಾಗಿದ್ದ ಖಲೀಫಾ ಉಸ್ಮಾನ್‌ರ(ರ) ಮಾದರಿಯಾಗಿತ್ತು. ಹಗಲು ಉಪವಾಸ ಆಚರಿಸಿ ರಾತ್ರಿ ತುಂಬಾ ಹೊತ್ತು ನಮಾಝ್ ಮಾಡುತ್ತಿದ್ದ ಆ ಮಹಾನ್ ಖಲೀಫರು ಜನರಿಗೆ ಮಾದರಿಯಾಗದಿರುತ್ತಾರೆಯೇ?

ನಾಲ್ಕನೆಯ ಖಲೀಫ ಅಲೀಯವರು(ರ) ಸತ್ಯ-ನ್ಯಾಯದ ವಿಷಯದಲ್ಲಿ ದಾಕ್ಷಿಣ್ಯ ವಂತಿರಲಿ, ಸಾವಧಾನವನ್ನೂ ನೀಡುತ್ತಿರಲಿಲ್ಲ. ನ್ಯಾಯಪಾಲಕರಲ್ಲವೆಂದು ಮನಗಂಡ ರಾಜ್ಯಪಾಲರನ್ನು ಅಧಿಕಾರ ವಹಿಸಿದ ಕೂಡಲೇ ಅವರು ವಜಾಗೊಳಿಸಿದರು. ಆ ಪೈಕಿ ಒಬ್ಬರನ್ನು ಈಗಲೇ ವಜಾಗೊಳಿಸಿದರೆ ತೊಂದರೆಯಾದೀತೆಂದು ಭಾವಿಸಿದ ರಾಜ್ಯಪಾಲರ ಕುರಿತು ಇಬ್ನು ಅಬ್ಬಾಸ್‌ರು ಖಲೀಫಾರಿಗೆ ಹೀಗೆ ತಿಳಿಸಿದರು. "ಅಮೀರುಲ್ ಮೂಮಿನೀನ್, ಆ ಕುರಿತು ಸ್ವಲ್ಪ ಸಾವಧಾನ ಮಾಡುವುದು ಉತ್ತಮ." ಅದಕ್ಕೆ ಖಲೀಫರು ಹೀಗೆ ಉತ್ತರಿಸಿದರು: "ದಾರಿಗೆಟ್ಟವರನ್ನು ಸಹಾಯಕರಾಗಿ ಮಾಡಿರುವುದನ್ನು ಅಲ್ಲಾಹನು ಎಂದೂ ನೋಡಲಾರನು." ಈ ನ್ಯಾಯಪ್ರಜ್ಞೆ ಮತ್ತು ನಿಸ್ವಾರ್ಥತೆಯು ಆದರಣೀಯವಲ್ಲವೇ? ಮೂರು ದಿರ್ಹಮ್‌ಗೆ ಅಂಗಡಿಯಿಂದ ಖರೀದಿಸಿದ ಬಟ್ಟೆ ಧರಿಸಿ, ಕತ್ತೆಯ ಮೇಲೆ ಸಂಚರಿಸಿ, ಅಂಗಡಿಯಿಂದ ವಸ್ತುಸಾಧನಗಳನ್ನು ಖರೀದಿಸಿ ಮನೆಗೆ ತಂದು, ಸರಳ ಜೀವನ ಸಾಗಿಸುತ್ತಿದ್ದ ಆ ಖಲೀಫರ ಮಾದರಿ ಅನುಕರಣಾರ್ಹವಾಗದಿದ್ದೀತೇ? ವೈರಿಗಳಿಗೆ ಹಣ ನೀಡಿ ಒಲಿಸಿಕೊಳ್ಳಬೇಕೆಂದು ಕೆಲವು ಹಿತೈಷಿಗಳು ಉಪದೇಶಿಸಿದಾಗ, "ಜಯ ಗಳಿಸಲಿಕ್ಕಾಗಿ

ಅಕ್ರಮವೆಸಗಬೇಕೆಂದು ನನ್ನನ್ನು ಒತ್ತಾಯಿಸುತ್ತಿದ್ದೀರಾ?" ಎಂದು ಮರು ಪ್ರಶ್ನೆ ಹಾಕಿದ ಆ ಖಲೀಫರ ಜೀವನವು ಇತರರಿಗೆ ಮಾದರಿಯಾಗದಿದ್ದೀತೇ?

ಇಂತಹ ಅನೇಕ ಜೀವನ ಮಾದರಿಗಳು ಪ್ರಧಾನವಾಗಿ ಇತರರನ್ನು ಇಸ್ಲಾಮಿಗೆ ಆಕರ್ಷಿಸಿದುವು. ಇಂದಿಗೂ ಮುಸ್ಲಿಮರಂತೆಯೇ ಮುಸ್ಲಿಮೇತರರನ್ನೂ ಆ ಮಾದರಿ ಆಕರ್ಷಿಸುತ್ತಲಿದೆ.

ಜೀವನದಲ್ಲಿ ಇಷ್ಟೊಂದು ಉನ್ನತ ಮೌಲ್ಯಗಳನ್ನು ಅಳವಡಿಸಿದ್ದರೂ ಕೆಲವರು ದೇಶದಲ್ಲಿ ಗಲಭೆಯೆಬ್ಬಿಸಿ ಮುಸ್ಲಿಮರು ಪರಸ್ಪರ ರಕ್ತ ಹರಿಸಲು ಕಾರಣವೇನೆಂದು ನೀವು ಪ್ರಶ್ನಿಸಬಹುದು. ಉತ್ತರ ಬಹಳ ಸ್ಪಷ್ಟವಾಗಿದೆ. ಶುದ್ಧ ಜಲದ ಒಂದು ಪಾತ್ರೆಗೆ ನೀವು ಎರಡು ತೊಟ್ಟು ವಿಷದ್ರಾವಕ ಹಾಕಿದರೆ ಆ ಜಲ ವಿಷಮಯವಾಗುವುದಿಲ್ಲವೇ! ಹೊಗೆಯಾಡುವ ಒಂದು ಕೊಳ್ಳಿಯಿಂದ ಇಡೀ ಮನೆಯಲ್ಲಿ ಹೊಗೆ ತುಂಬಿ ಉಸಿರುಗಟ್ಟಿಸುವುದಿಲ್ಲವೇ! ಇಂತಹ ಕೆಲವು ವಿಷ ದ್ರಾವಕಗಳು, ಕೆಲವು ಹೊಗೆಯಾಡುವ ಕೊಳ್ಳಿಗಳು ಆ ಶುದ್ಧ ಸಮೂಹದಲ್ಲಿದ್ದುವು. ಇಸ್ಲಾಮಿನ ನಾಶಕ್ಕಾಗಿ ಅವರು ಆರಂಭದಿಂದಲೇ ನಾನಾ ಉಪಾಯಗಳನ್ನು ಹೂಡಿದ್ದರು. ವಿವಿಧ ಕುತಂತ್ರಗಳನ್ನು ಪ್ರಯೋಗಿಸಿದರು. ಹೀಗೆ ನಿರಂತರ ನಡೆಸುತ್ತಿದ್ದ ದುಶ್ಶಕ್ತಿಗಳ ಪ್ರಯತ್ನ ಒಮ್ಮೆ ಸಫಲವಾಯಿತು ಅಷ್ಟೆ! ಅವರು ಇಂದಿಗೂ ನಮ್ಮ ಸುತ್ತಮುತ್ತ ಸಕ್ರಿಯರಾಗಿದ್ದಾರೆ. ಆದರೆ ಮುಸ್ಲಿಮರಾದ ನಾವು ಅದರ ಪರಿವೆಯಿಲ್ಲದೆ ನಿದ್ರಿಸುತ್ತಿದ್ದೇವೆಂದು ಭಾಸವಾಗುತ್ತಿದೆ. ನಾವು ಎಚ್ಚರಗೊಳ್ಳಬೇಕು, ಎದ್ದೇಳಬೇಕು; ಪ್ರವಾದಿ(ಸ) ಮತ್ತು ಖುಲಫಾವುರ್ರಾಶಿದೀನ್‌ರ ಹಾದಿಯಲ್ಲಿ ಮುಂದೆ ಸಾಗಬೇಕು. ಅದೇ ನಮ್ಮ ಹಾದಿ. ಅದೇ ನಮ್ಮ ಮಾದರಿ.

ಇಸ್ಲಾಮೀ ನಾಗರಿಕತೆ
ನಾಲ್ವರು ಖಲೀಫರ ಕಾಲದಲ್ಲಿ

1. ಖಿಲಾಫತ್

ಖಿಲಾಫತ್‌ನ ಸಂಸ್ಥಾಪನೆಯು ಇಸ್ಲಾಮೀ ನಾಗರಿಕತೆಯ ಶಂಕುಶಿಲೆಯಾಗಿದೆ. ಪ್ರವಾದಿವರ್ಯರ(ಸ) ನಿಧನದ ಬಳಿಕ ಇಸ್ಲಾಮೀ ರಾಷ್ಟ್ರದ ಮುಖಂಡರನ್ನು 'ಪ್ರವಾದಿಯವರ ಖಲೀಫ' ಎಂದು ಕರೆಯುತ್ತಿದ್ದರು. ದ್ವಿತೀಯ ಖಲೀಫ ಉಮರ್(ರ) ಅದನ್ನು ಬದಲಾಯಿಸಿ 'ಅಮೀರುಲ್ ಮುಅ್‌ಮಿನೀನ್' ಎಂಬ ಪದವಿ ನಾಮವನ್ನು ಸ್ವೀಕರಿಸಿದರು. ಅನಂತರ ಬಂದ ಎಲ್ಲ ಖಲೀಫರೂ ಆ ಹೆಸರಿಂದಲೇ ಅಧಿಕೃತ ವ್ಯವಹಾರ ನಡೆಸುತ್ತಿದ್ದರು. ಕೆಲವರು ಭಾವಿಸಿರುವಂತೆ 'ಖಿಲಾಫತ್' ಎಂದರೆ ಧಾರ್ಮಿಕ ನಾಯಕತ್ವದ ಹೆಸರಲ್ಲ. ಬದಲಾಗಿ, ಧಾರ್ಮಿಕ ಬುನಾದಿಯ ರಾಜಕೀಯ ನಾಯಕತ್ವವೇ ಅದರ ಇಂಗಿತವಾಗಿದೆ. ಕುರ್‌ಆನ್ ಮತ್ತು ಸುನ್ನತ್‌ನ ಆಧಾರದಲ್ಲಿ ಜನರಿಗೆ ಹಿತಕರವಾದ ವಿಷಯದಲ್ಲಿ ಮಾರ್ಗದರ್ಶನ ನೀಡುವುದೇ ಅದರ ಗುರಿ. ಆದ್ದರಿಂದ, ಕುರ್‌ಆನ್ ಮತ್ತು ಸುನ್ನತ್‌ಗೆ ವಿರುದ್ಧವಲ್ಲದ ಖಲೀಫರ ಆದೇಶಗಳನ್ನು ಪಾಲಿಸಬೇಕಾದುದು ಮುಸ್ಲಿಮರ ಕರ್ತವ್ಯವಾಗಿದೆ. ಅಂದು ಕಾನೂನು ನಿರ್ಮಾಣಕ್ಕೆ ಕುರ್‌ಆನ್ ಮತ್ತು ಸುನ್ನತ್‌ಗಳೇ ಆಧಾರವಾಗಿದ್ದುವು. ಹೊಸ ಸಮಸ್ಯೆಗಳ ಕುರಿತು ಕುರ್‌ಆನ್ ಮತ್ತು ಹದೀಸ್‌ಗಳಲ್ಲಿರುವ ತತ್ಸಮಾನ ಕಾನೂನುಗಳಿಗೆ ಹೋಲಿಸಿ ಹೊಸ ಕಾನೂನುಗಳನ್ನು ರಚಿಸುತ್ತಿದ್ದರು. ಇದನ್ನು 'ಇಜ್‌ತಿಹಾದ್' ಎನ್ನುತ್ತಾರೆ. ಖಲೀಫರು ಇಜ್‌ತಿಹಾದ್‌ನ ಪ್ರತಿಭೆಯಿರುವ ಕುರ್‌ಆನ್-ಸುನ್ನತ್‌ನ ಪಾಂಡಿತ್ಯವಿರುವ ಮುಜ್‌ತಹಿದ್‌ಗಳಾಗಿದ್ದರು. ಆದರೂ ಹೊಸ ಸಮಸ್ಯೆಗಳಲ್ಲಿ ಅವರು ಕೇವಲ ತಂತಮ್ಮ ಇಜ್‌ತಿಹಾದನ್ನು ಅವಲಂಬಿಸದೆ ವಿದ್ವಾಂಸರಾದ ಇತರ ಪ್ರಮುಖ ಸಹಾಬಿಗಳ ಅಭಿಪ್ರಾಯವನ್ನೂ ಕೇಳುತ್ತಿದ್ದರು. ಹಲವೊಮ್ಮೆ ಅವರಲ್ಲಿ ಒಮ್ಮತಾಭಿಪ್ರಾಯವಿರುತ್ತಿತ್ತು. ಇಂತಹ ಒಮ್ಮತಾಭಿಪ್ರಾಯಗಳನ್ನು ಅನಂತರ 'ಇಜ್‌ಮಾಅ್' ಎಂದು ಕರೆಯಲಾಯಿತು. ಒಮ್ಮತಾಭಿಪ್ರಾಯ ಮೂಡದಿದ್ದರೆ ಖಲೀಫರಿಗೆ ಹೆಚ್ಚು ಸರಿಕಂಡ ಅಭಿಪ್ರಾಯವನ್ನು ಅಂಗೀಕರಿಸುತ್ತಿದ್ದರು. ಖಲೀಫರು, ಧರ್ಮದ ಆಜ್ಞೆಗಳನ್ನು ಜಾರಿಗೊಳಿಸುವ ಓರ್ವ ಅಧಿಕಾರಿಯೆಂಬ ನಿಲುಮೆಯನ್ನು ಹೊಂದಿದ್ದರು. ಖಲೀಫರು ಧರ್ಮದ ಕಾನೂನುಗಳಲ್ಲಿ ತಿಳಿದೋ ತಿಳಿಯದೆಯೋ ಏನಾದರೂ ತಪ್ಪು ಮಾಡಿದರೆ ಜನಸಾಮಾನ್ಯರೂ ಅದನ್ನು ನೇರವಾಗಿ ಪ್ರಶ್ನಿಸಲು ಹಿಂಜರಿಯುತ್ತಿರಲಿಲ್ಲ.

ಖಲೀಫರು ಒಂದು ನಿರ್ದಿಷ್ಟ ಕುಟುಂಬದವರಾಗಿರಬೇಕು? ಹಾಗೇನಿಲ್ಲ. ಪ್ರಥಮ ಖಲೀಫ ಅಬೂಬಕರ್(ರ) ಬನೂ ತಮೀಮ್, ಉಮರ್(ರ) ಬನೂ ಅದಿಯ್ಯ್, ಉಸ್ಮಾನ್(ರ) ಮತ್ತು ಅಲೀಯವರು(ರ) ಬನೂ ಅಬ್ದಿ ಮನಾಫ್ ಕುಟುಂಬಗಳಿಗೆ ಸೇರಿದ್ದರು. ಆದರೆ, ಕೆಲವರು ಕುರೈಶಿ ಕುಟುಂಬಕ್ಕೆ ಸೇರಿದವರಾಗಿರಬೇಕೆಂಬ ನಿಬಂಧನೆ ಸೂಚಿಸಿದ್ದಾರೆ. ಪ್ರವಾದಿಯವರ(ಸ) ಒಂದು ಹೇಳಿಕೆಯೇ ಅದಕ್ಕೆ ಆಧಾರವಾಗಿದೆ. ಆದರೆ ಇತರ ಕೆಲವು ಹದೀಸ್ ವ್ಯಾಖ್ಯಾನಗಾರರು, ಅದು ಅಂದಿನ ವಿಶಿಷ್ಟ ರಾಜಕೀಯ ಹಿನ್ನೆಲೆಯಲ್ಲಿ ಹೇಳಿರುವ ಮಾತು, ಆದ್ದರಿಂದ ಅದನ್ನು ಎಲ್ಲ ಕಾಲಗಳಿಗೂ ಅನ್ವಯಗೊಳಿಸಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಇಸ್ಲಾಮ್, ಜಾಗತಿಕ ಮಟ್ಟದಲ್ಲಿ ವ್ಯಾವಹಾರಿಕವಾಗಿರುವುದರಿಂದ ಆ ಅಭಿಪ್ರಾಯವೇ ಹೆಚ್ಚು ಸಮಂಜಸವಾಗಿದೆ.

ಜನರೇ ಖಲೀಫರನ್ನು ಚುನಾಯಿಸುತ್ತಿದ್ದರು. ಅಬೂಬಕರ್‌ರನ್ನು(ರ) ಅನ್ಸಾರ್ ಮತ್ತು ಮುಹಾಜಿರ್ ಗಣ್ಯರು ಮೊದಲು ಆಯ್ಕೆ ಮಾಡಿದರು. ಅನಂತರ ಜನರು ಅದನ್ನು ಅಂಗೀಕರಿಸಿದರು. ಆದರೆ, ಉಮರ್‌ರನ್ನು(ರ) ಅಬೂಬಕರ್‌ರೇ(ರ) ನಿರ್ಣಯಿಸಿದ್ದರು. ಜನರು ಅದನ್ನು ಸರ್ವಾನುಮತದಿಂದ ಅಂಗೀಕರಿಸಿದರು. ಬೈಅತ್ ಮಾಡಿದಾಗ ಅವರೇ ಖಲೀಫರನ್ನು ಚುನಾಯಿಸಿದಂತಾಯಿತು. ಉಮರ್(ರ) ರಚಿಸಿದ್ದ ಊರಿನ ಗಣ್ಯರ ಸಮಿತಿಯು ಉಸ್ಮಾನ್‌ರನ್ನು(ರ) ಚುನಾಯಿಸಿತ್ತು. ಆದರೂ ಅದು ಜನರ ಅಂಗೀಕಾರಕ್ಕೆ ವಿಧೇಯವಾಗಿತ್ತು. ಆದ್ದರಿಂದಲೇ, ಅನಂತರ ಬೈಅತ್ ಮಾಡುವಂತೆ ಅವರಿಗೆ ತಿಳಿಸಲಾಯಿತು. ಅಲೀಯವರನ್ನು(ರ) ಜನರೇ ಚುನಾಯಿಸಿದ್ದರು. ಆದರೆ, ಈ ಚುನಾವಣೆಯ ಅಧಿಕಾರವಿರುವ ಜನರು ಯಾರೆಂಬುದನ್ನು ಪ್ರವಾದಿಯಾಗಲಿ(ಸ) ಖಲೀಫರಾಗಲಿ ನಿರ್ಣಯಿಸಿಲ್ಲ. ಆದ್ದರಿಂದ ಅಲೀಯವರ(ರ) ಕಾಲದಲ್ಲಿಯೇ ಅದು ಕಲಹಕ್ಕೆ ಹೇತುವಾಯಿತು. ಖಲೀಫರನ್ನು ಮುಹಾಜಿರ್ ಮತ್ತು ಅನ್ಸಾರರು ಆಯ್ಕೆ ಮಾಡಬೇಕೆಂದು ಅಲೀಯವರ(ರ) ಅಭಿಪ್ರಾಯವಾಗಿತ್ತು. ಆದರೆ ಇತರ ಕೆಲವರು, ಎಲ್ಲ ರಾಜ್ಯಗಳ ಎಲ್ಲ ಮುಸ್ಲಿಮರಿಗೂ ಹಕ್ಕಿದೆಯೆಂದು ವಾದಿಸಿದ್ದರು. ಅಂದು ಅಲೀಯವರ(ರ) ಅಭಿಪ್ರಾಯ ವ್ಯಾವಹಾರಿಕವಾಗಿದ್ದರೂ ಇಂದು ಎರಡನೆಯ ಅಭಿಪ್ರಾಯ ಹೆಚ್ಚು ನ್ಯಾಯೋಚಿತವಾಗಿದೆ.

ಖಲೀಫರ ಆಡಳಿತ ನಿರ್ವಹಣೆಯ ಸಹಾಯಕ್ಕಾಗಿ ವಿಶೇಷ ಸಮಾಲೋಚನಾ ಮಂಡಳಿಯಿತ್ತು. ಅದಲ್ಲದೇ ಜನರನ್ನು ಮಸೀದಿಗೆ ಕರೆಸಿ ಪ್ರಮುಖ ಸಮಸ್ಯೆಗಳ ಕುರಿತು ಅವರೊಡನೆ ಚರ್ಚಿಸಿದ ಸಂಪ್ರದಾಯವೂ ಇದೆ. ಒಂದು ವಿಷಯದಲ್ಲಿ ತೀರ್ಮಾನ ಕೈಗೊಂಡ ಬಳಿಕ ಅದು ತಪ್ಪೆಂದು ವ್ಯಕ್ತವಾದರೆ ಆ ತೀರ್ಮಾನವನ್ನು ಬದಲಿಸಲು ಖಲೀಫರು ಸಂಕೋಚ ಪಡುತ್ತಿರಲಿಲ್ಲ. ಕಿರಿಯ-ಹಿರಿಯ ಭೇದವಿಲ್ಲದೆ ಎಲ್ಲರಿಗೂ ಅಭಿಪ್ರಾಯ ಸ್ವಾತಂತ್ರ್ಯವಿದ್ದಿತು. ಓರ್ವ ರಾಜನ ಆಡಂಬರ ಆಚಾರ ಅವರಲ್ಲಿರಲಿಲ್ಲ. ಮನೆ ಅಥವಾ ಹೊರಗೆ ಅಂಗರಕ್ಷಕರಿರಲಿಲ್ಲ. ಇತರ ಪೌರರಂತೆಯೇ ಅವರು ಬೀದಿಯಲ್ಲಿ ಒಬ್ಬರೇ ನಡೆದು ಹೋಗುತ್ತಿದ್ದರು. ಜನರು ತಮ್ಮ ದೂರುಗಳನ್ನು ಯಾವ ಸಂದರ್ಭದಲ್ಲಿಯೂ ಅಧಿಕಾರಿಗಳಿಗೆ ನೀಡಬಹುದಾಗಿತ್ತು. ಅದಕ್ಕೆ ಅಡ್ಡಿಯಾಗುವಂತಹ ಒಂದು ಕಾವಲು ಗುಡಾರ ರಾಜ್ಯಪಾಲ ಸಅದ್ ಬಿನ್ ಅಬೀ ವಕ್ಕಾಸ್‌ರ(ರ) ಮನೆಯ ಬಳಿಯಿದೆಯೆಂದರಿತ ಖಲೀಫರು ಅದನ್ನು ಸುಟ್ಟು ಹಾಕುವಂತೆ

ಅವರಿಗೆ(ರ). ಪತ್ರ ಬರೆದಿದ್ದರು. ಈ ಎಲ್ಲ ಘಟನಾವಳಿಗಳನ್ನು ನೋಡುವಾಗ ಖಿಲಫಾವುರ್ರಾಶಿದೀನ್‌ರ ಕಾಲದಲ್ಲಿದ್ದ ವ್ಯವಸ್ಥೆಯು ಇಂದು ಜಗತ್ತಿನಲ್ಲಿರುವ ಪ್ರಜಾಸತ್ತೆಗಿಂತ ಉತ್ತಮವಾಗಿತ್ತು.

2. ನ್ಯಾಯಪಾಲನೆ

ನ್ಯಾಯಪಾಲನೆಯು ಖಲೀಫರ ಹೊಣೆಗಾರಿಕೆಯಾಗಿತ್ತು. ಆರಂಭ ಕಾಲದಲ್ಲಿ ಅಬೂಬಕರ್(ರ) ವಿವಾದಗಳನ್ನು ಸ್ವಯಂ ಇತ್ಯರ್ಥಗೊಳಿಸುತ್ತಿದ್ದರು. ಅನಂತರ ಆ ಹೊಣೆಯನ್ನು ಉಮರ್‌ರಿಗೆ(ರ) ನೀಡಿದರು. ಆದರೆ ಅಂದು ಕಾಝಿ ಎಂಬ ಸ್ಥಾನವಿರಲಿಲ್ಲ. ಉಮರ್‌ರ(ರ) ಕಾಲದಲ್ಲಿ ಅಧಿಕೃತವಾಗಿ ಕಾಝಿ ಎಂಬ ಹೆಸರಿನಲ್ಲಿ ವಿವಿಧ ರಾಜ್ಯಗಳಲ್ಲಿ ನ್ಯಾಯಪೀಠಗಳನ್ನು ರಚಿಸಲಾಯಿತು. ಅವರಿಗೆ ವಿಶೇಷ ಮಾರ್ಗ ನಿರ್ದೇಶನಗಳನ್ನೂ ಸರಕಾರದಿಂದ ವೇತನವನ್ನೂ ಉಮರ್(ರ) ನಿರ್ಣಯಿಸಿದರು. ಖಿಲಫಾವುರ್ರಾಶಿದೀನ್‌ರ ಅಂತ್ಯದ ತನಕ ಈ ರೂಢಿಯಿತ್ತು. ರಾಜ್ಯಪಾಲರಿಗೆ ಅಥವಾ ಇತರ ಆಡಳಿತಾಧಿಕಾರಿಗಳಿಗೆ ಅವರ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸುವ ಅಧಿಕಾರವಿರಲಿಲ್ಲ. ಖಲೀಫರೇ ಹೆಚ್ಚಾಗಿ ಕಾಝಿಗಳನ್ನು ನೇಮಿಸುತ್ತಿದ್ದರು. ಕೆಲವೊಮ್ಮೆ ರಾಜ್ಯಗಳಲ್ಲಿ ಯೋಗ್ಯ ವ್ಯಕ್ತಿಗಳಿದ್ದಾರೆಂದು ಮನವರಿಕೆಯಾದರೆ ಆ ಪೈಕಿ ಯಾರಾದರೊಬ್ಬರನ್ನು ನೇಮಿಸುವಂತೆ ರಾಜ್ಯಪಾಲರಿಗೆ ಆದೇಶಿಸುತ್ತಿದ್ದರು. ಆದರೆ ಅವರನ್ನು ವಜಾಗೊಳಿಸುವ ಅಧಿಕಾರ ರಾಜ್ಯಪಾಲರಿಗೆ ಇರಲಿಲ್ಲ. ಹೀಗೆ ನೇಮಕಗೊಂಡ ಎಲ್ಲ ಕಾಝಿಗಳೂ ನೀತಿ, ನ್ಯಾಯ, ಸತ್ಯ, ಸಮಾನತೆಯ ಉನ್ನತ ಮಾದರಿಯನ್ನು ಪಾಲಿಸಿದರು. ಖಲೀಫಾ ಮತ್ತು ಸಾಮಾನ್ಯ ಪೌರರ ನಡುವಣ ವ್ಯಾಜ್ಯಗಳಲ್ಲಿಯೂ ಈ ಕಾಝಿಗಳು ಪಕ್ಷಪಾತ ತೋರಿಸುತ್ತಿರಲಿಲ್ಲ.

ಸಂದಿಗ್ಧ ಸಮಸ್ಯೆಗಳು ಉದ್ಭವಿಸಿದಾಗ ಕಾಝಿಗಳು ಆಯಾ ಪ್ರದೇಶದ ವಿದ್ವಾಂಸರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಅಂದು ಪ್ರವಾದಿಚರ್ಯೆಯನ್ನು ಗ್ರಂಥರೂಪದಲ್ಲಿ ಕ್ರೋಢೀಕರಿಸಿರಲಿಲ್ಲ. ಅವು ಸಹಾಬಿಗಳ ಮನದಲ್ಲಿ ಸುರಕ್ಷಿತವಾಗಿತ್ತು. ಈ ವಿಷಯದಲ್ಲಿ ಎಲ್ಲ ಸಹಾಬಿಗಳು ಸಮಾನರಾಗಿರಲಿಲ್ಲ. ಕೆಲವರು ಧಾರಾಳ ಹದೀಸ್‌ಗಳನ್ನು ಕಂಠಪಾಠ ಮಾಡಿದ್ದರು. ಕೆಲವರು ಬಹಳ ಕಡಿಮೆ ಹದೀಸ್‌ಗಳನ್ನು ತಿಳಿದಿದ್ದರು. ಆದ್ದರಿಂದ ಯಾವುದಾದರೊಂದು ವಿಷಯದ ಕುರಿತು ಪ್ರವಾದಿವರ್ಯರ(ಸ) ವಚನವನ್ನು ತಿಳಿಯಲು ಎಲ್ಲರೂ ಸೇರಿ ಸಮಾಲೋಚನೆ ನಡೆಸುವುದು ಅನಿವಾರ್ಯವಾಗಿತ್ತು. ಹೀಗೆ ಸಮಾಲೋಚನೆಯ ಆಧಾರದಲ್ಲಿ ನ್ಯಾಯಪೀಠಗಳು ನೀಡುವ ತೀರ್ಪು ಮತ್ತು ಫತ್ವಾಗಳನ್ನು ಅಂದು ಈಗಿನಂತೆ ಬರೆದಿಡುತ್ತಿರಲಿಲ್ಲ.

ವಿವಾದ ಪರಿಹಾರಕ್ಕೆ ನ್ಯಾಯಾಲಯ ಮತ್ತು ಕಾಝಿಗಳಿದ್ದರೂ ಕೆಲವೊಮ್ಮೆ ಖಲೀಫರೇ ನೇರವಾಗಿ ತೀರ್ಮಾನಿಸುತ್ತಿದ್ದರು. ಆದ್ದರಿಂದ ಕಾಝಿಗಳು ಖಲೀಫರ ಪ್ರತಿನಿಧಿಗಳಾಗಿದ್ದರೆಂದು ಭಾವಿಸಬಹುದಾಗಿದೆ.

ಆರಂಭ ಕಾಲದಲ್ಲಿ ಕಾನೂನು ಜಾರಿಗೆ ಪೊಲೀಸರಾಗಲಿ, ಕೈದಿಗಳಿಗೆ ಜೈಲುಗಳಾಗಲಿ ಇರಲಿಲ್ಲ. ಆದರೆ ಉಮರ್‌ರ(ರ) ಕಾಲದಲ್ಲಿ ಅಪರಾಧಿಗಳನ್ನು ಮಸೀದಿಯಲ್ಲಿ ಬಂಧಿಸಿಡಲಾಗುತ್ತಿತ್ತು. ಅವರು ಓಡಿ ಹೋಗದಂತೆ ಅವರ ಇದಿರು ಕಕ್ಷಿಯವರೇ ನೋಡಬೇಕಾಗಿತ್ತು. ಅಲೀಯವರ(ರ) ಕಾಲದಲ್ಲಿ ಅದಕ್ಕಾಗಿ ವಿಶೇಷ ಜೈಲು ಮತ್ತು ಪೊಲೀಸ್ ಖಾತೆಯನ್ನು ರಚಿಸಲಾಯಿತು.

ಜನರನ್ನು ಸಾಮೂಹಿಕ ನಮಾಝ್‌ಗೆ ಪ್ರೇರೇಪಿಸುವುದು, ಮಸೀದಿಗಳಲ್ಲಿ ಅದಾನ್, ಇಮಾಮತ್ ಮುಂತಾದ ಕಾರ್ಯಗಳು ಸಾಂಗವಾಗಿ ನಡೆಯುವಂತೆ ನೋಡಿಕೊಳ್ಳುವುದು, ಆರೋಗ್ಯಕ್ಕೆ ಹಾನಿಕಾರಕ ಆಹಾರ ಪದಾರ್ಥಗಳನ್ನು ಮಾರದಂತೆ ಶೋಧ ನಡೆಸುವುದು, ಅಳತೆ ತೂಕಗಳಲ್ಲಿ ವಂಚನೆಯನ್ನು ಪತ್ತೆ ಮಾಡುವುದು, ಕಳ್ಳ ದಾಸ್ತಾನುಗಳನ್ನು ತಡೆಯುವುದು, ಬೆಲೆ ನಿರ್ಣಯಿಸುವುದು, ಅಪಾಯಕಾರಿ ಕಟ್ಟಡಗಳನ್ನು ಕೆಡಹುವುದು, ದಾರಿಯನ್ನು ಶುಚಿಯಾಗಿರಿಸುವುದು, ಸಂಚಾರವನ್ನು ಸುಗಮಗೊಳಿಸುವ ವ್ಯವಸ್ಥೆ ಮಾಡುವುದು ಇತ್ಯಾದಿ ಇಂದು ವಿವಿಧ ಸಚಿವಾಲಯಗಳು ನಿರ್ವಹಿಸುವಂತಹ ಸೇವೆಗಾಗಿ ಉಮರ್‌ರ(ರ) ಕಾಲದಲ್ಲಿ ಒಂದು ಪ್ರತ್ಯೇಕ ಖಾತೆಯನ್ನೇ ಆರಂಭಿಸಲಾಗಿತ್ತು. ಅದನ್ನು 'ಹಿಸ್ಬಾ' ಎಂದು ಕರೆಯುತ್ತಿದ್ದರು. ಸಾಯಿಬ್ ಬಿನ್ ಯಝೀದ್, ಅಬ್ದುಲ್ಲಾ ಬಿನ್ ಉತ್ಬಾ ಆ ಹುದ್ದೆಯಲ್ಲಿ ಕೆಲಸ ಮಾಡಿದ್ದರು.

3. ದೇಶ ರಕ್ಷಣೆ

ಪ್ರವಾದಿಯವರ(ಸ) ಕಾಲದಲ್ಲಿ ದೇಶರಕ್ಷಣೆಗಾಗಿ ಸ್ಥಿರ ಸೇನೆಯಿರಲಿಲ್ಲ. ಯುದ್ಧ ಬಂದಾಗ ಹೋರಾಟದ ಸಾಮರ್ಥ್ಯವಿರುವವರೆಲ್ಲರೂ ಯೋಧರಾಗುತ್ತಿದ್ದರು. ಉಮರ್‌ರ(ರ) ಕಾಲದಲ್ಲಿ ಸೇನೆಯ ಪ್ರತ್ಯೇಕ ಏರ್ಪಾಡು ಮಾಡಲಾಯಿತು. ಅವರು ಸೈನಿಕರ ಹೆಸರುಗಳನ್ನು ನೊಂದಾಯಿಸಿ ಅವರಿಗೆ ಉದ್ಯೋಗ ಪದವಿಗಳನ್ನು ನೀಡಿ ಅವರ ಕುಟುಂಬದ ಖರ್ಚಿಗೆ ಬೇಕಾದ ವೇತನವನ್ನು ನೀಡುತ್ತಿದ್ದರು. ಅವರು ಸೈನಿಕರಿಗೆ ನಾಲ್ಕು ತಿಂಗಳಿಗೊಮ್ಮೆ ಮನೆಗೆ ಹೋಗಲು ರಜೆಯನ್ನೂ ನೀಡುತ್ತಿದ್ದರು.

ಕಾಲಾಳು ಪಡೆ, ಅಶ್ವಪಡೆ ಮತ್ತು ಬಿಲ್ಲುಗಾರರ ಹೊರತಾಗಿ ಸೈನಿಕರಿಗೆ ಆಹಾರ, ಪಾನೀಯ, ಔಷಧ, ರೋಗಿಯ ಶುಶ್ರೂಷೆ ಇತ್ಯಾದಿಗಳಿಗಾಗಿ ಮಹಿಳೆಯರ ಸೇವೆಯನ್ನೂ ಪ್ರವಾದಿಯವರ(ಸ) ಕಾಲದಲ್ಲಿ ಬಳಸಲಾಗಿತ್ತು. ಉಮ್ಮುಲ್ ಮುಅ್‌ಮಿನೀನ್ ಆಯಿಶಾ(ರ), ಉಮ್ಮು ಸುಲೈಮ್, ನಸೀಬ ಬಿಂತು ಕಅಬ್(ಉಹುದ್ ಯುದ್ಧದಲ್ಲಿ ಪ್ರವಾದಿಯವರನ್ನು(ಸ) ಆಕ್ರಮಿಸಲು ಬಂದ ವೈರಿಗಳನ್ನು ಖಡ್ಗದಿಂದ ಎದುರಿಸಿದ ಈ ಧೀರ ಮಹಿಳೆಯನ್ನು ಪ್ರವಾದಿಯವರೇ(ಸ) ಪ್ರಶಂಸಿಸಿದ್ದರು. ತರುವಾಯ ಅಬೂಬಕರ್‌ರ(ರ) ಕಾಲದಲ್ಲಿ ನಡೆದ ಯಮಾಮ ಯುದ್ಧದಲ್ಲಿಯೂ ಅವರು ಭಾಗವಹಿಸಿದ್ದರು. ಅದರಲ್ಲಿ ಅವರ ಒಂದು ಕೈತುಂಡಾಗಿ ಅನೇಕ ಗಾಯಗಳಾಗಿದ್ದುವು), ಸಫಿಯ್ಯ ಬಿಂತು ಅಬ್ದುಲ್ ಮುತ್ತಲಿಬ್, ಖೌಲಾ ಬಿಂತುಲ್ ಅಸ್ವ್ ಮುಂತಾದವರು ಹೀಗೆ ಸೇವೆ ಸಲ್ಲಿಸಿದವರಲ್ಲಿ ಸೇರಿದ್ದಾರೆ.

ಖಿಲಫಾವುರ್ರಾಶಿದೀನ್‌ರ ಕಾಲದಲ್ಲಿ ಸೇನೆಯ ರಚನೆಯಲ್ಲಿಯೂ ಬದಲಾವಣೆಯಾಯಿತು. ಅಂದು ಸೇನೆಯಲ್ಲಿ 5 ವಿಭಾಗಗಳಿದ್ದುವು. ವೈರಿಗಳ ಚಲನವಲನ ಮತ್ತು ದಾರಿ ತಿಳಿಯಲಿಕ್ಕಾಗಿ 'ಮುಖದ್ದಿಮ' ಎಂಬೊಂದು ವಿಭಾಗ, ಸೇನಾಧಿಪತಿ ಮತ್ತು ಬಹುತೇಕ ಸೈನಿಕರಿರುವ 'ಖಲ್ಬ್' ಎಂಬ ದ್ವಿತೀಯ ವಿಭಾಗ, ಎಡ-ಬಲಗಳಲ್ಲಿ ಪಹರೆ ನಡೆಸುವ 'ಮೈಮನ' ಮತ್ತು 'ಮೈಸರ' ಎಂಬೆರಡು ವಿಭಾಗಗಳು ಮತ್ತು ಕೊನೆಯಲ್ಲಿ ಬಿಟ್ಟುಹೋದ ವಸ್ತುಗಳನ್ನು ಸಂಗ್ರಹಿಸಲಿಕ್ಕಾಗಿ ಮತ್ತು ಅಗತ್ಯವಿದ್ದಾಗ ಪೋಷಕ ಸೇನೆಯಾಗಿ ಕಾರ್ಯಾಚರಿಸುವ 'ಸಾಖ' ಎಂಬ ವಿಭಾಗ.

ಖಿಲಫಾವುರ್ರಾಶಿದೀನ್‌ರ ಕಾಲದಲ್ಲಿ ಸೈನಿಕರ ಹುದ್ದೆಗಳನ್ನು ನಿರ್ಣಯಿಸಲಾಗಿತ್ತು. ಹತ್ತು ಸೈನಿಕರ ನಾಯಕನನ್ನು 'ಅರಿಫ್', ನೂರು ಮಂದಿಯ ನಾಯಕನನ್ನು 'ನಖೀಬ್', ಸಾವಿರ ಮಂದಿಯ ನಾಯಕನನ್ನು 'ಅಮೀರ್', ಮಹಾ ದಂಡನಾಯಕನನ್ನು 'ಅಮೀರುಲ್ ಉಮರಾಅ್' ಎಂದು ಕರೆಯುತ್ತಿದ್ದರು.

ಉಸ್ಮಾನ್‌ರ(ರ) ಕಾಲದಲ್ಲಿ ಮುಸ್ಲಿಮರ ನೌಕಾಪಡೆ ರಚನೆಯಾಯಿತು. ಅದರ ನಾಯಕನನ್ನು 'ಖಾಇದ್' ಮತ್ತು ಉಪನಾಯಕನನ್ನು 'ರಈಸ್' ಎಂದು ಕರೆಯುತ್ತಿದ್ದರು. ಅನಂತರ ನಾವಿಕಪಡೆ ವಿಸ್ತಾರಗೊಂಡಾಗ(ಉಸ್ಮಾನ್‌ರ(ರ) ಕಾಲದಲ್ಲಿ ಇದರಲ್ಲಿ 200 ನೌಕೆಗಳಿದ್ದುವು) ಅವರಿಗೆ ಪ್ರತ್ಯೇಕ ಸೇನಾ ನಾಯಕನನ್ನು ನೇಮಿಸಲಾಯಿತು. ಅವರನ್ನು 'ಅಮೀರುಲ್ ಬಹ್ರ್' ಎಂದು ಕರೆಯುತ್ತಿದ್ದರು. ಅನಂತರ ಈ ಹೆಸರುಗಳನ್ನೇ ಬ್ರಿಟಿಷರು ಮತ್ತು ಫ್ರೆಂಚರು 'ಅಮೀರಾನ್' 'ಅಡ್ಮಿರಲ್' ಎಂಬ ರೂಪಭೇದಗಳೊಂದಿಗೆ ಬಳಸಿದರು.

4. ಆಡಳಿತ ವ್ಯವಸ್ಥೆ

ಪ್ರವಾದಿಯವರು(ಸ) ಮದೀನಾಕ್ಕೆ ಹಿಜ್ರತ್ ಹೋದ ಬಳಿಕ ಪ್ರಥಮವಾಗಿ ನಮಾಝ್ ಮತ್ತು ಪರಸ್ಪರ ಸಮಾಲೋಚನೆಗಾಗಿ ಮಸೀದಿಯನ್ನು ನಿರ್ಮಿಸಿದರು. ಈ ಮಸೀದಿಯು ರಾಷ್ಟ್ರ ನಾಯಕರಾಗಿದ್ದ ಪ್ರವಾದಿಯವರ(ಸ) ಕಚೇರಿಯಾಗಿತ್ತು. ಆದ್ದರಿಂದ ಪ್ರವಾದಿಯವರು(ಸ) ಅನ್ಯರಾಷ್ಟ್ರಗಳಿಂದ ಬಂದ ನಿಯೋಗಗಳನ್ನು ಅಲ್ಲಿಯೇ ಭೇಟಿಯಾಗುತ್ತಿದ್ದರು. ಸೇನೆಯನ್ನೂ ಅಲ್ಲಿಂದಲೇ ಸಿದ್ಧಪಡಿಸಿ ಕಳುಹಿಸುತ್ತಿದ್ದರು. ಅನಂತರ ಮದೀನಾದ ಮುಸ್ಲಿಮರು ಮತ್ತು ಮುಸ್ಲಿಮೇತರರ ನಡುವೆ ಒಂದು ಒಪ್ಪಂದವಾಯಿತು. ಅದರಲ್ಲಿ ಉಭಯ ವಿಭಾಗಗಳ ಹಕ್ಕು ಬಾಧ್ಯತೆಗಳನ್ನು ವಿವರಿಸಲಾಗಿತ್ತು. ಆ ಬಳಿಕ ಅರಬ್ ಪರ್ಯಾಯ ದ್ವೀಪವು ಸಂಪೂರ್ಣ ಪ್ರವಾದಿಯವರ(ಸ) ಅಧೀನವಾದಾಗ ಅವರು ಅದನ್ನು ಐದು ಪ್ರಾಂತ್ಯಗಳಾಗಿ ವಿಂಗಡಿಸಿದರು. ಮಕ್ಕಾ, ಬಹರೈನ್, ಹಝ್ರ್ ಮೌತ್, ತಾಯಿಫ್ ಮತ್ತು ಸನ್‌ಆ. ಪ್ರತಿಯೊಂದು ಪ್ರಾಂತ್ಯಕ್ಕೂ ಓರ್ವ ರಾಜ್ಯಪಾಲನನ್ನು ನೇಮಿಸಿದರು. ಅಬೂಬಕರ್‌ರ(ರ) ಕಾಲದಲ್ಲಿ ಪ್ರಾಂತ್ಯಗಳ ಸಂಖ್ಯೆ ಹತ್ತಕ್ಕೇರಿತು. ಉಮರ್‌ರ(ರ) ಕಾಲದಲ್ಲಿ ಇನ್ನಷ್ಟು ಪ್ರದೇಶಗಳೂ ಇಸ್ಲಾಮೀ ರಾಷ್ಟ್ರಕ್ಕೆ ಸೇರಿದಾಗ ಅವರು ಪ್ರಾಂತ್ಯ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿದರು. ವಿಶಾಲವಾದ ಗಡಿಗಳಿರುವ ಹೊಸ ಪ್ರಾಂತ್ಯಗಳಿಗೆ 'ವಿಲಾಯತ್' ಎಂಬ ಹೆಸರಿನ ಬದಲಿಗೆ 'ಮಿಸ್ರ್' ಎಂದು ಪುನರ್ನಾಮಕರಣ ಮಾಡಿದರು. ಖಲೀಫಾ ಉಮರುಲ್ ಫಾರೂಕ್(ರ)

ಕಾಲಗಣನೆಗಾಗಿ ಹಿಜರಿ ದಿನಾಂಕವನ್ನು ಜಾರಿಗೊಳಿಸಿದರು. ಸಣ್ಣ ಪ್ರಮಾಣದಲ್ಲಿ ಟಪ್ಪಾಲು ವ್ಯವಸ್ಥೆಯನ್ನೂ ಏರ್ಪಡಿಸಿದ್ದರು.

5. ತೆರಿಗೆ

ಖಿಲಫಾವುರ್ರಾಶಿದೀನ್‌ರ ಕಾಲದಲ್ಲಿ ರಾಷ್ಟ್ರಕ್ಕೆ ಏಳು ರೀತಿಯ ಸಂಪನ್ಮೂಲವಿತ್ತು. ಝಕಾತ್, ಜಿಝಿಯಾ, ಗನೀಮತ್, ಖರಾಜ್, ಫೈಲ್, ಉಶ್ರ್ ಮತ್ತು ರಿಕಾಝ್.

ಕೆಲವರು ಸಾಮಾನ್ಯವಾಗಿ ಭಾವಿಸಿರುವಂತೆ ಝಕಾತ್ ಎಂದರೆ ಶ್ರೀಮಂತರು ಬಡವರಿಗೆ ಎಸೆಯುವ ಭಿಕ್ಷೆಯಲ್ಲ. ಬದಲಾಗಿ, ಆಡಳಿತಗಾರರು ದೇಶದ ಎಲ್ಲ ಆದಾಯಗಳಿಂದ ನಿರ್ದಿಷ್ಟ ಪ್ರಮಾಣವನ್ನು ಸಂಗ್ರಹಿಸಿ ಕ್ರಮಬದ್ಧವಾಗಿ ಬಡವರಿಗೆ ವಿತರಣೆ ಮಾಡುವ ವ್ಯವಸ್ಥೆಯಾಗಿದೆ. ಈ ಸಂಪತ್ತಿನಿಂದ ರಾಷ್ಟ್ರದ ಜನತೆಗಾಗಿ ವಿವಿಧ ಕಲ್ಯಾಣ ಯೋಜನೆಗಳನ್ನು ನಡೆಸಬಹುದಾಗಿದೆ. ಝಕಾತ್ ನೀಡಲು ನಿರಾಕರಿಸುವವರನ್ನು ರಾಷ್ಟ್ರದ್ರೋಹಿಗಳೆಂದು ಪರಿಗಣಿಸಬೇಕು. ಇಸ್ಲಾಮೀ ರಾಷ್ಟ್ರವು ಅಗತ್ಯ ಬಿದ್ದರೆ ಅವರೊಡನೆ ಯುದ್ಧ ನಡೆಸಲೂ ಹೇಸದು. ಖಲೀಫ ಅಬೂಬಕರ್(ರ) ಆ ರೀತಿ ಯುದ್ಧ ಮಾಡಿದ್ದರು. ಝಕಾತ್ ವ್ಯವಸ್ಥೆಯನ್ನು ಯಥಾವತ್ತಾಗಿ ಜಾರಿಗೊಳಿಸಿದರೆ ಕೇವಲ ಅದರಿಂದಲೇ ಜನರ ಜೀವನ ಮಟ್ಟವನ್ನು ಏರಿಸಬಹುದೆಂದು ಇತಿಹಾಸ ಸಾಧಿಸಿ ತೋರಿಸಿದೆ.

ಹಣ, ಜಾನುವಾರು, ಬೆಳ್ಳಿ, ಬಂಗಾರ, ದವಸಧಾನ್ಯ, ಕೃಷಿ, ವ್ಯಾಪಾರ ಇತ್ಯಾದಿ ಆದಾಯಗಳಿಗೆ ಝಕಾತ್ ಕಡ್ಡಾಯವಾಗಿದೆ. ಝಕಾತ್ ವ್ಯಯಿಸಬೇಕಾದ ಎಂಟು ಬಾಬ್ತುಗಳನ್ನು ಕುರ್‌ಆನ್ ವಿವರಿಸಿದೆ. ಝಕಾತ್ ಸಂಗ್ರಹಕ್ಕಾಗಿ ಖಲೀಫರು ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಅಧಿಕಾರಿಗಳನ್ನು ನೇಮಿಸುತ್ತಿದ್ದರು.

ಇಸ್ಲಾಮೀ ರಾಷ್ಟ್ರದಲ್ಲಿ ಮುಸ್ಲಿಮರ ಎಲ್ಲ ಸೌಲಭ್ಯಗಳನ್ನು ಅನುಭೋಗಿಸಿ ಬಾಳುವ ಮುಸ್ಲಿಮೇತರ(ದಿಮ್ಮಿ)ರಿಂದ ಜಿಝಿಯಾ ವಸೂಲು ಮಾಡುತ್ತಿದ್ದರು. ಮಹಿಳೆಯರು, ಮಕ್ಕಳು, ವೃದ್ಧರು, ಬಡವರು, ದುರ್ಬಲರಿಗೆ ಜಿಝಿಯಾ ಇರಲಿಲ್ಲ. ಮಾತ್ರವಲ್ಲ ಅವರ ರಕ್ಷಣೆಯ ಹೊಣೆಯನ್ನು ಸರಕಾರ ವಹಿಸಿತ್ತು. ಈ ಮೊತ್ತವು ಮುಸ್ಲಿಮರಿಂದ ವಸೂಲು ಮಾಡುತ್ತಿದ್ದ ಝಕಾತ್‌ಗಿಂತ ತುಂಬಾ ಕಡಿಮೆಯಾಗಿತ್ತು. ಆರ್ಥಿಕ ಸ್ಥಿತಿಗನುಸಾರ ವರ್ಷದಲ್ಲೊಂದು ಬಾರಿ ಈ ಹಣವನ್ನು ನಿಗದಿಪಡಿಸಲಾಗುತ್ತಿತ್ತು. ಉಮರ್‌ರ(ರ) ಕಾಲದಲ್ಲಿ ಅವರನ್ನು ಮೂರು ವರ್ಗಗಳಾಗಿ ವಿಂಗಡಿಸಿ ಅವರಿಂದ ಯಥಾಪ್ರಕಾರ 48, 24, 12 ದಿರ್ಹಮ್‌ಗಳನ್ನು ವಸೂಲು ಮಾಡುತ್ತಿದ್ದರು.

ಇಸ್ಲಾಮಿನ ವೈರಿಗಳೊಂದಿಗಿನ ಕಾದಾಟದಲ್ಲಿ ದೊರೆಯುವ ಸೊತ್ತನ್ನು 'ಗನೀಮತ್' ಎನ್ನುತ್ತಾರೆ. ಅದರ 4/5 ಪಾಲನ್ನು ಸೈನಿಕರಿಗೆ ಹಂಚುತ್ತಿದ್ದರು. 1/5 ಭಾಗವನ್ನು ಬೈತುಲ್‌ಮಾಲ್‌ಗೆ ಸೇರಿಸುತ್ತಿದ್ದರು.

ಮುಸ್ಲಿಮರು ಗೆದ್ದ ಪ್ರದೇಶಗಳ ಕೃಷಿ ಸ್ಥಳಗಳನ್ನು ಸಾಗುವಳಿಗಾಗಿ ಅದರ ಹಳೆಯ ಮುಸ್ಲಿಮೇತರ ಮಾಲಿಕರಿಗೆ ಒಪ್ಪಿಸುವ ಕ್ರಮವನ್ನು ಉಮರ್‌ರ(ರ) ಕಾಲದಲ್ಲಿ ಆರಂಭಿಸಲಾಗಿತ್ತು.

ಅವರ ಆದಾಯದ ನಿರ್ದಿಷ್ಟ ಅಂಶವನ್ನು ಅವರು ಗೇಣಿಯಾಗಿ ಸರಕಾರಕ್ಕೆ ನೀಡಬೇಕು. ಇದನ್ನು 'ಖರಾಜ್' ಎನ್ನುತ್ತಾರೆ. ಉಮರ್‌ರ(ರ) ಕಾಲದಲ್ಲಿ ಅಧಿಕಾರಿಗಳಿಗೆ ಖರಾಜ್‌ನಿಂದ ಸಂಬಳ ನೀಡಲಾಗುತ್ತಿತ್ತು. ಉಳಿದುದನ್ನು ಕೇಂದ್ರ ಬೈತುಲ್ ಮಾಲ್‌ಗೆ ಕಳುಹಿಸುತ್ತಿದ್ದರು.

ಹೋರಾಟವಿಲ್ಲದೆ ವೈರಿಗಳು ಶರಣಾದಾಗ ದೊರೆಯುವ ಸಂಪತ್ತನ್ನು 'ಫೈಲ್' ಎನ್ನುತ್ತಾರೆ. ಅದನ್ನು ಸಂಪೂರ್ಣವಾಗಿ ಬೈತುಲ್‌ಮಾಲ್‌ಗೆ ಸಲ್ಲಿಸಬೇಕು.

ಭೂಗರ್ಭನಿಧಿಯನ್ನು 'ರಿಕಾಝ್' ಎನ್ನುತ್ತಿದ್ದರು. ವೈರಿಗಳ ಭೂಮಿಯಲ್ಲಿ ದೊರೆತರೆ ಅದನ್ನು ಸಂಪೂರ್ಣವಾಗಿ ಬೈತುಲ್‌ಮಾಲ್‌ಗೆ ಒಪ್ಪಿಸಬೇಕಾಗಿತ್ತು. ಓರ್ವ ಮುಸ್ಲಿಮನ ಖಾಸಗಿ ಭೂಮಿಯಲ್ಲಿ ದೊರೆತರೆ 1/40 ಅಂಶ ನೀಡಬೇಕು.

6. ಶಿಕ್ಷಣ

ಇಸ್ಲಾಮಿಗಿಂತ ಮೊದಲು ಅರಬರಲ್ಲಿ ಓದು ಬರಹ ತೀರಾ ಅಪರೂಪವಾಗಿತ್ತು. ಅನಂತರ ಪ್ರವಾದಿ(ಸ) ಮತ್ತು ಖುಲಫಾವುರ್ರಾಶಿದೀನ್‌ರು(ರ) ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಿದರು. ಬದ್ರ್ ಯುದ್ಧದಲ್ಲಿ ಬಂಧಿತರಾದ ಬಡ ಕೈದಿಗಳಿಗೆ, ಪ್ರತಿಯೊಬ್ಬರೂ ಮದೀನಾದ 10 ಮಕ್ಕಳಿಗೆ ಅಕ್ಷರಾಭ್ಯಾಸ ನೀಡಬೇಕೆಂಬ ದಂಡ ವಿಧಿಸಲಾಗಿತ್ತು. ಅನಂತರ ಖಲೀಫರು ಹಿರಾ ಮುಂತಾದೆಡೆಗಳಿಂದ ಜನರನ್ನು ಕರೆಸಿ ಮಕ್ಕಳಿಗೆ ಓದು ಬರಹ ಕಲಿಸುವ ಏರ್ಪಾಡು ಮಾಡಿದರು. ಅಲೀಯವರ(ರ) ಕಾಲದಲ್ಲಿಯೇ ಇಂದಿನ ಅರಬಿ ವ್ಯಾಕರಣ ಆರಂಭಗೊಂಡಿತ್ತು. ಇಸ್ಲಾಮಿನಲ್ಲಿ ಹುಟ್ಟಿ ಬೆಳೆದ ಮದೀನಾದ ಎಲ್ಲ ಮಕ್ಕಳಿಗೂ ಖುಲಫಾವುರ್ರಾಶಿದೀನ್‌ರ(ರ) ಕಾಲದಲ್ಲಿ ಓದು ಬರಹ ತಿಳಿದಿತ್ತೆಂದು ಹೇಳುತ್ತಾರೆ.